ಅಖಿಲ ಭಾರತ ಪತ್ರಿಕೆ

ಜನವರಿ 2020


# ಶ್ರೀಮಾತೆಯ ಪ್ರತಿಮಾ ತತ್ವ

ಬೆಲೆ : 15/-



ಉಯ್ಯಾಲೆಯುಲಿತದಾಂದೋಲ ತೋಟಿ ಈ ಪೃಥ್ವಿ–ದಿವಿಯ ನಡುವೆ
ಅನಿರ್ವಚನೀಯ ಭಾವೈಕ್ಯದೆಡೆಗೆ ಉತ್ಥಾನ ಊರ್ಧ್ವದೊಡವೆ
ಭೂ–ದಿವಿಗಳೆರಡು ಇವನಲ್ಲಿ ಅರಳಿ ಆ ಇಂದು–ಕಲೆಯ ತೆರದಿ
ಅವನಾತ್ಮ ಪೂರ್ಣ ಪೂರ್ಣತ್ವ ಪ್ರಭೆಯ ನಿತ್ಯತ್ವಕಿಂದು ಆದಿ
ನೈಜತೆಯು ಇಂದು ಸಂಲಗ್ನಗೊಂಡು ಅಪ್ರತಿಮ ಗತಿಯ ಒಡನೆ
ವಿಶ್ವತೋಮುಖದ ಆ ನೇರದಿಟ್ಟಿ ಏಕೈಕ ಭಾವದೊಡನೆ
ವಿಚ್ಛಿದ್ರಗೊಂಡ ಸದ್ರೂಪಗಳಲಿ ನಾವಿಲ್ಲಿ ವಾಸವಿರಲು
ಸಂಪೂರ್ಣದಂತೆ ಪರಿವರ್ತಗೊಳಿಸಿ ಚಿದ್ರೂಪ ಉದಿಸುತಿರಲು
ಮನುಜ ಶಕ್ತಿಗೂ ನಿಯತಿ ನಿತ್ಯತೆಗು ಮಧ್ಯದಲಿ ಇದ್ದ ಭಾವ–
ಕಂದಕಕೆ ಇಂದು ಸೇತುವೆಯ ಕಟ್ಟಿ ಅಂತರವ ತುಂಬಿ ಜೀವ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 3 ಪುಟ 35)**

**ಅಖಿಲ ಭಾರತ ಪತ್ರಿಕೆ**
**ಜನವರಿ 2020**

ಸಂಪುಟ: 30 ಸಂಚಿಕೆ: 1

## ಪರಿವಿಡಿ

# "ಶ್ರೀಮಾತೆಯ ಪ್ರತಿಮಾ ತತ್ವ"

**ಶ್ರೀಮಾತೆ ಪರಾಶಕ್ತಿ – ಮಹಾಶಕ್ತಿ** 6
ಅನು: ಶ್ರೀ ಪುಟ್ಟು ಕುಲಕರ್ಣಿ

**ಶ್ರೀಮಾತೆ ಪರಾಶಕ್ತಿ – ಮಹಾಶಕ್ತಿ** 8
ಅನು: ಶ್ರೀ ಪುಟ್ಟು ಕುಲಕರ್ಣಿ

**ಶ್ರೀಮಾತೆಯ ನಾಲ್ಕು ಮಹತ್ತರ–ವಿಭಾವಗಳು** 16
ಅನು: ಶ್ರೀ ಪುಟ್ಟು ಕುಲಕರ್ಣಿ

**ದಿವ್ಯಮಾತೆಯವರ ಇತರ ಶ್ರೇಷ್ಠ ವ್ಯಕ್ತಿತ್ವಗಳು** 31
ಅನು: ಡಾ॥ ಮಹಾದೇವ ಸಕ್ರಿ

**ಹನ್ನೆರಡು ಗುಣಲಕ್ಷಣಗಳು** 37
ಅನು: ಡಾ॥ ಬಲಭೀಮ ಭೀಡ
ಪ್ರೊ. ವೀರಭದ್ರಪ್ಪ ಕೆ.
ನಾಗಜ್ಯೋತಿ ಇರಿವಾರ್

**ಐದು ಮಾನಸಿಕ ಪರಿಪೂರ್ಣತೆ** 63
ಅನು: ಡಾ॥ ಬಲಭೀಮ ಭೀಡ

**ಪರೀಕ್ಷಕರು** 67
ಅನು: ಡಾ॥ ಮಹಾದೇವ ಸಕ್ರಿ

**ವಾರ್ತಾಪತ್ರ** 72

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 343.
ಫೋನ್: 94487 74920
editorabpbng@yahoo.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

2020 ಇದೊಂದು ವಿಶೇಷ ಘಟನೆಗೆ ಕಾರಣವಾಗಿದೆ. ಶ್ರೀಮಾತೆಯ ಪಾಂಡಿಚೇರಿ ಆಶ್ರಮಕ್ಕೆ ಆಗಮಿಸಿ, ಅಂತಿಮವಾಗಿ ಅಲ್ಲಿಯೇ ನೆಲೆಸಿ, ಸರಿಯಾಗಿ ಒಂದು ನೂರು ವರ್ಷವಾಯಿತು. ಅದನ್ನು ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಅಭಿವ್ಯಕ್ತಿಗಳಿಂದ ಆಯ್ದುಕೊಳ್ಳಲಾಗಿರುವ ನುಡಿಮುತ್ತುಗಳ ಮೂಲಕವೇ ಸ್ವಾಗತಿಸುತ್ತ ಅಭಿನಂದನೆ ಸಲ್ಲಿಸಲು ಇಚ್ಛಿಸುತ್ತೇವೆ. ಇಲ್ಲಿ ಶ್ರೀ ಅರವಿಂದರ ಬರಹಗಳ ಮತ್ತು ಶ್ರೀಮಾತೆಯ ಪ್ರತಿಮಾ–ತತ್ತ್ವದ ವಿವರಗಳು ಇವೆ.

ಪ್ರತಿಮಾ ಎನ್ನುವದು ಋತದ ಆಂತರ್ಯದ ಪ್ರತಿನಿಧಿ. ಒಂದು ಆಕೃತಿಯು, ಅಂದರೆ ಯಾವುದನ್ನು ತಂತ್ರದಲ್ಲಿ ಯಂತ್ರವೆಂದು ಕರೆಯಲಾಗಿದೆಯೋ, ಅದು ಕೇವಲ ಆ ಪರಮಸತ್ಯದ ಸಾಕಾರರೂಪಿತ್ವವನ್ನು ಪ್ರಕಟಪಡಿಸಲು ಅಭಿವ್ಯಕ್ತ–ಗೊಂಡಿದ್ದಾಗಿದೆಯೇ ವಿನಾ ಅದೇ ಸಂಕೇತವೆಂದು ಅಲ್ಲ. ಜೊತೆಜೊತೆಗೆ ಅದು ಅಭಿವ್ಯಕ್ತಗೊಳಿಸುತ್ತಿರುವ ಆ ಶಕ್ತಿಗಳನ್ನೂ ಪಡೆದುಕೊಳ್ಳಲು ಮತ್ತು ಆಕರ್ಷಿಸಲು ಇರುವ ಸಾಕಾರವಾಗಿರುತ್ತದೆ. ಶ್ರೀಮಾತೆಯ ಈ ಸಂಕೇತವು ಅಭಿವ್ಯಕ್ತಗೊಳಿಸುತ್ತಿರುವ, ರೂಪಿಸುತ್ತಿರುವ ಮತ್ತು ಅನುಷ್ಠಾನಿಸುತ್ತಿರುವ ಸತ್ಯಗಳ ಕುರಿತೇ ಧ್ಯಾನಿಸುತ್ತಾ ಮತ್ತೂ ಮತ್ತೂ ಪ್ರತಿಬಿಂಬಗೊಳ್ಳುವದು ಒಂದು ಆಶ್ಚರ್ಯದ ಸಂಗತಿಯೇ ಆಗಿದೆ. ಆದಾಗ್ಯೂ, ಒಂದು ವೇಳೆ ನಾವು ಆ ಗೂಢ ಸತ್ಯಗಳನ್ನು ಅದೂ ಎಲ್ಲವೂ ನಮ್ಮಲ್ಲಿಯೇ ಅಂತರ್ಗತವಾಗಿರುವದನ್ನು ಅರಿತುಕೊಂಡು ಪುನರ್–ಉತ್ಪಾದಿಸಲು ಸಮರ್ಥರಾದಲ್ಲಿ ಅದು ತುಂಬ ಸಹಾಯಕಾರಿ ಅಂಶವಾಗಿರುತ್ತದೆ. ಶ್ರೀಮಾತೆಯ ಆ ಪ್ರತಿಮೆಯೊಂದಿಗೆ ಒಂದಾಗಲು ಹಾಗೂ ಜೀವನವನ್ನು ಸಮಗ್ರಗೊಳಿಸಿಕೊಂಡು ಅದರೊಳಗೇ ಒಂದಾಗಲು ನಮ್ಮ ಪ್ರಯತ್ನವಿರಬೇಕು. ಇದು ಯೋಗ. ಇದು ಪರಿಪೂರ್ಣತೆ–ಸಮಗ್ರತೆಯನ್ನು ಒಳಗೊಂಡಿದೆ.

ಈ ಪಥವು ನಾವು ಕಡ್ಡಾಯವಾಗಿ ಅನುಸರಿಸಲೆಂದೇ ರೂಪಿತಗೊಂಡಿದೆ. ನಮ್ಮನ್ನು ನಾವು ಆ ಬಲದೊಂದಿಗೆ ಸಂಲಗ್ನಗೊಳಿಸಿಕೊಳ್ಳಬೇಕಾಗಿದೆ. ಅಲ್ಲಿರುವ ಗುಣಧರ್ಮಗಳ ಮೂಲಕವೇ ನಾವು ನಮ್ಮ ಜೀವನವನ್ನು ಪ್ರಗತಿಗೊಳಿಸಿ–ಕೊಳ್ಳಬೇಕಾಗಿದೆ. ನಮ್ಮ ಜೀವನವನ್ನೇ 'ಅವಳಿಗೆ' ಸಮರ್ಪಣೆಗೊಳಿಸಲು ಇರುವ 'ಪ್ರತಿಮೆ'ಯಾಗಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ, ನಮ್ಮಲ್ಲಿರುವ ಅಹಂಕಾರವನ್ನು ನಿರ್ನಾಮ ಮಾಡಿಕೊಂಡು, ಅವಳ ಅನಂತಾನಂತ ವ್ಯಾಪ್ತ ಋತವನ್ನು ನಮ್ಮ ಆತ್ಮದ ಆಂತರ್ಯದಲ್ಲಿ ಹಾಗೂ ಆತ್ಮದ ಆವರಣದಲ್ಲಿ ಸ್ಥಾಪಿಸಿಕೊಳ್ಳಬೇಕಾಗಿದೆ. [ಎಐಎನ್]

*

## ಸಂಪಾದಕೀಯ

### ಪ್ರತಿಮಾ–ಪುಷ್ಪ

ಪ್ರಕೃತಿ ತನ್ನನ್ನು ತಾನೇ ಮಾರ್ದವಗೊಳಿಸಿಕೊಂಡು, ಅಭಿವ್ಯಕ್ತಗೊಂಡು ಮಿಡಿದ ಆತ್ಮದ ಸ್ಪಂದನದ ಅಲೆಗಳೇ ಈ ಪುಷ್ಪಗಳು. 'ಯಾವುದು ನೈಸರ್ಗಿಕವಾಗಿ ಶಾಶ್ವತವಾಗಿರುತ್ತದೆಯೋ ಅದು ಯಾವಾಗಲೂ ಮಾರ್ದವವಾಗಿಯೇ ಇರುತ್ತದೆ. ಅದೇ ತೆರನಾಗಿ ತಮ್ಮ ಅಭಿವ್ಯಕ್ತಿಗಳನ್ನೂ ಪ್ರಕಟಪಡಿಸುತ್ತವೆ' ಎಂದು ಶ್ರೀ ಅರವಿಂದರು ಈ ಪುಷ್ಪಗಳ ಕುರಿತು ಹೇಳಿದ್ದಾರೆ.

ಪ್ರಾಣಿ ಬಲಿಯ ಪರಂಪರೆಯಿಂದ, ನರಬಲಿಯ ಬರ್ಬರತೆಯಿಂದ ಹೊರಬಂದ ಚಿಂತನಗಳು "ಪತ್ರಂ ಪುಷ್ಪಂ ಫಲಂ ತೋಯಂ" ಎಂದು ಅಭಿವ್ಯಕ್ತಗೊಂಡಿದ್ದು ಇದನ್ನು ಸಂಕೇತಿಸುತ್ತಿದೆ. ಮಾನವನು ತನ್ನ 'ಆಹಾರಾನ್ವೇಷಣೆಗೆ' ಸತತ ಸಂಚಾರದಲ್ಲಿದ್ದ ಹಂತವನ್ನು ಬಿಟ್ಟು, ಒಂದೆಡೆಗೆ ನೆಲೆಸಿ, ಬದುಕನ್ನು ಕಟ್ಟಿಕೊಳ್ಳುತ್ತಿದ್ದಾಗ, ಕಂಡುಕೊಂಡ ಅನುಭವವೆಂದರೆ ಪ್ರಕೃತಿಯ ಈ ವರ್ಣಮಯ ವೈಭವದ ಅನುಭಾವ. ಅದೂ ಪುಷ್ಪಗಳ ಮುಖಾಂತರ ಪ್ರಕೃತಿ ಪಡೆದುಕೊಳ್ಳುತ್ತಿರುವ ಆಕಾರ, ಸುಕೋಮಲತೆ, ಪರಿಮಳ ಹಾಗೂ ಮಾರ್ದವತೆಗಳು ಮನಸ್ಸನ್ನು ಪ್ರಫುಲ್ಲಗೊಳಿಸುತ್ತಿರುವದನ್ನು ಆಸ್ವಾದಿಸಿದ ಮಾನವನು, ಆ ಪುಷ್ಪಗಳ ಸೃಷ್ಟಿಯ ಹಿಂದಡಗಿರುವ ರಹಸ್ಯದ ಕುರಿತೂ ಧ್ಯಾನಿಸತೊಡಗಿದ. ಹೀಗಾಗಿ 'ಅವುಗಳನ್ನೇ' ಆ 'ಪರಮದಿವ್ಯ'ಕ್ಕೆ ಸಮರ್ಪಿಸಿ, ಬದುಕಿನಲ್ಲಿ, ಜೀವನದಲ್ಲಿ 'ಸಂತೃಪ್ತಿ' ಕಾಣತೊಡಗಿದ,

ಇದನ್ನೇ ಪದ್ಮಪುರಾಣವೂ ಅತ್ಯಂತ ನಿಖರವಾಗಿ,

**ಅಹಿಂಸಾ ಪ್ರಥಮಮ್ ಪುಷ್ಪಮ್ ಪುಷ್ಪಮ್ ಇಂದ್ರಿಯ ನಿಗ್ರಹಃ**
**ಸರ್ವಭೂತ ದಯಾಪುಷ್ಪಮ್ ಕ್ಷಮಾಪುಷ್ಪಮ್ ವಿಶೇಷತಃ ।**
**ಶಾಂತಿ ಪುಷ್ಪಮ್ ತಪಃ ಪುಷ್ಪಮ್ ಧಿಯಾಪುಷ್ಪಮ್**
**ಸತ್ಯಮ್ ಅಷ್ಟವಿಧಮ್ ಪುಷ್ಪಮ್ ವಿಷ್ಣೋಃ ಪ್ರೀತಿಕರಮ್ ಭವೇತ್ ॥**

ಎಂದು ಹೇಳಿದೆ.

ಹರಿಹರನೂ ಸಹಿತ ಹನ್ನೆರಡನೇ ಶತಮಾನದಲ್ಲಿಯೇ ಈ "ಪುಷ್ಪಗಳ ದೈವೀ ಸ್ವರೂಪವನ್ನು" ತನ್ನ ಅಪೂರ್ವವಾದ 'ಪುಷ್ಪರಗಳೆ'ಯಲ್ಲಿ ತಿಳಿಸಿದ್ದಾನೆ.

ಸುರತರು ಸುಗಂಧಂ ತವರ್ಮನೆಯೆಂದೆನಿಪ ಪೂದೋಟಮಂ ದೂರದಿಂ ಕಂಡು, ಬಿಲ್ವ, ಉತ್ತರಣಿ. ಉನ್ಮತ್ತ ಹೂವು, ಕಕ್ಕೆ, ಬಿಳಿಮಕ್ಕೆ, ರುದ್ರಜಟಿ, ತುಂಬೆ, ಕಂಚಿವಾಳ, ಭದ್ರಮುಖಿ ಮುಂತಾದ ಪುಷ್ಪಗಳ ಬಗೆಗೆ ವಿವರಗಳನ್ನು ಕೊಟ್ಟಿದ್ದಾನೆ. ಅದರಲ್ಲೂ ರವಿಕರವು ತಾಗದ ಮುನ್ನ, ದುಂಬಿ ಸೋಂಕದ ಮುನ್ನ ನಳನಳಿಸುವ ಮಗಮಗಿಸುವ ಇರುವಂತಿಗೆ, ನಗೆಮುಗುಳ ಬಿರಿಮುಗುಳಗಳನ್ನು, ಅವುಗಳ ಒಪ್ಪಿಗೆ ಪಡೆದು ಆಯ್ದುಕೊಳ್ಳುತ್ತಾನೆ. 'ಸಂಪಿಗೆ ಶಿವನ ಸಿರಿಮುಡಿಗೆ, ಸೇವಂತಿಗೆ ಶಿವನ ಜಡೆಗೆ, ಕೇತಕಿಯು ಪರಿಮಳಕೆ, ಸೇವಂತಿಗೆಯ ಪನ್ನೀರು, ಇರುವಂತಿಗೆಯ ಸಿರಿಮುಡಿ, ಮೊಲ್ಲೆಯ ಮುಗುಳುಗಳ ನಾಗಕುಂಡಲಿ, ಇರುವಂತಿಗೆಯ ಕಂಠಮಾಲೆ, ದುಂಡುಮಲ್ಲಿಗೆಯ ಪದಕ, ಮದಗದಿಂದ ಚರ್ಮಾಂಬರ, ಸುರಹೊನ್ನೆಯ ಉರಗಕಂಕಣ, ಚರಣದಲಿ ಕಮಲಕರ್ಣಿಕೆ ದವನದ ಚಾಮರ....' ಹೀಗೆ ಪುಷ್ಪಗಳ ಹಿನ್ನೆಲೆಯಲ್ಲಿ ಅವುಗಳಿಗಿರುವ ಆಧ್ಯಾತ್ಮಿಕ, ಅಲೌಕಿಕ ಗುಣಗಳನ್ನು ಚಿತ್ರಿಸಿದ್ದಾನೆ.

'ಪುಷ್ಪಗಳೆಂದರೆ ಪರಿಮಳಭರಿತವಾಗಿರುವ ಭಾಷೆಯ ಸೂಕ್ಷ್ಮಾತಿಸೂಕ್ಷ್ಮ ಅಣುಗಳು; ಜೀವಕಣಗಳು' ಎಂದು ಹೇಳಿದ್ದಾರೆ. ಪುಷ್ಪಗಳು ಮುಗ್ಧ ಶಿಶುವಿದ್ದಂತೆ. ಅದೊಂದು ಸದಾ ಚಲನಶೀಲವಾಗಿದ್ದು, ಒಂದು ವಿಶಿಷ್ಟ ರೀತಿಯ ಸ್ಪಂದನವನ್ನೂ ಹೊಂದಿರುತ್ತವೆ. ಆ ಸ್ಪಂದನವೇ ನಮ್ಮನ್ನು ದೈವತ್ವದ ನೆಲೆಗೆ ಕರೆದೊಯ್ಯುವ ಪಥವೂ ಆಗಿರುತ್ತದೆ ಎಂದು ಶ್ರೀಮಾತೆಯವರು ಪುಷ್ಪದ ಬಗೆಗೆ ನಿಖರವಾದ ಅಭಿಪ್ರಾಯವನ್ನು ನೀಡಿದ್ದಾರೆ. ಶ್ರೀಮಾತೆಯವರು ಈ ನೀಡಿರುವ ಕೆಲವು ಪುಷ್ಪಗಳ ಗುಣವಿಶೇಷಗಳು ಈ ರೀತಿ ಇವೆ; ಬೋಗನ್ ವಿಲ್ಲಾ – ಸಂರಕ್ಷಣೆ / ಗ್ಲಾಡಿಯೋಲಸ್ (ಕೃಪಾಣಪರ್ಣ ಪುಷ್ಪ ಪ್ರಜಾತಿ) – ಧಾರಣ ಕ್ಷಮತೆ / ಹಿಬಿಸ್‌ಕಸ್ (ದಾಸವಾಳ) – ಶಕ್ತಿ / ಐರಿಸ್ ಪುಷ್ಪ – ಅಭಿಜಾತ ಸೌಂದರ್ಯ / ಐವೀ (ಜೆರೇನಿಯಮ್ ವರ್ಗ) – ನಿರಂತರವಾದ ಆಸಕ್ತಿ / ಮಲ್ಲಿಗೆ – ಪವಿತ್ರತೆ/ ಆರ್ಕಿಡ್ (ಸೀತಾ ದಂಡೆ) – ದೈವತ್ವದೊಡನೆ ಸಂಪರ್ಕ/ ಪೆಟೂನಿಯಾ (ಮೇಘನೀಲ ಪುಷ್ಪ) – ಉತ್ಸಾಹ / ಗುಲಾಬಿ – ದೈವತ್ವದೊಡನೆ ಪ್ರೇಮ / ವಾಟರ್ ಲಿಲಿ (ಕುಮುದ) – ಸಂಪತ್ತು / ಝಿನಿಯಾ (ಸೇವಂತಿಗೆ ಮಾದರಿಯ ಪುಷ್ಪ) – ಸಹನಶೀಲತಾ...

ಪುಷ್ಪಗಳ ದಳಗಳ ಹಾಗೆಯೇ ಶ್ರೀಮಾತೆಯ ಪ್ರತಿಮಾ ತತ್ತ್ವವನ್ನೂ ಸಹಿತ ಚತುರ್ದಳ ಹಾಗೂ ದ್ವಾದಶ ದಳಗಳ ಸ್ವರೂಪದಲ್ಲಿಯೇ ನಿರೂಪಿತವಾಗಿದೆ. ಮೊದಲ ನಾಲ್ಕು ದಳಗಳು – ಮಹಾಶಕ್ತಿ, ಮಾಹೇಶ್ವರೀ, ಮಹಾಕಾಳೀ ಮತ್ತು ಮಹಾಲಕ್ಷ್ಮೀ – ಇದ್ದರೆ, ಹೊರಾವರಣದಲ್ಲಿನ ಹನ್ನೆರಡೂ ದಳಗಳ ಬಗೆಗೆ ವಿವರಗಳು ಇಲ್ಲಿವೆ. ಪರಮ ಪರಿಶುದ್ಧವಾಗಿರುವ, ಮಾರ್ದವತೆಯಲ್ಲಿ ಅಪ್ರತಿಮವಾಗಿರುವ ಹಾಗೂ ವಿಶ್ವ ರಹಸ್ಯಗಳನ್ನೆಲ್ಲವನ್ನೂ ಒಳಗೊಂಡ ಈ ಕುಸುಮ–ಕೋಮಲ ಸ್ವರೂಪದಲ್ಲಿಯೇ ಚೈತನ್ಯವೂ ಪ್ರತಿನಿಧಿತಗೊಳ್ಳುತ್ತದೆ. ಇವುಗಳ ಮುಗ್ಧತೆಯಲ್ಲಿಯೇ ಸರ್ವಜ್ಞತ್ವವೂ ಅಡಗಿದೆ; ಅವುಗಳ ವರ್ಣ–ವಿನ್ಯಾಸದಲ್ಲಿಯೇ ಪ್ರಕೃತಿಯಲ್ಲಿನ ವಿಕಾಸದ ಆಯಾಮಗಳಲ್ಲಿ ಪ್ರಕಾಶದ ಮಹತ್ವ ಹಾಗೂ ಅದರ ಸಂಚಲನ–ವಿಚಲನಗಳು ನಿರ್ಮಾಣಗೊಳ್ಳುತ್ತಿರುವ, ವಿಕಾಸಗೊಳ್ಳುತ್ತಿರುವ ಈ ಸೃಷ್ಟಿ ಹಾಗೂ ಅದರ ಪರಮ ರಹಸ್ಯದ ಸೂತ್ರಗಳಂತೆ ಇವೆ. ಹೀಗಾಗಿ ಈ ಹೂವುಗಳನ್ನು ಆ ಪರಮಾತ್ಮನಿಗೆ ಅರ್ಪಿಸುವ ಮೂಲಕವೇ ನಾವು ಆ ರಹಸ್ಯವನ್ನು ತಿಳಿದುಕೊಳ್ಳಬೇಕಾಗಿದೆ. 'ಈ ಪುಷ್ಪ ಭಾಷೆಯ ಸಂಕೇತದ ಮೂಲಕ' ಆತ್ಮದ ವಿಕಸನವನ್ನು ಹಾಗೂ ಚೈತನ್ಯದೊಂದಿಗೆ ಸಂವಹನ ಸಾಧಿಸುವದರ ಕುರಿತು ಅವುಗಳನ್ನು ಪ್ರತಿಮಾತ್ಮಕವಾಗಿ ರೂಪಿಸಿದ ಶ್ರೀಮಾತೆಯವರು 'ಪುಷ್ಪಗಳ' ಕುರಿತೆ ಒಂದು ಉದ್ಗ್ರಂಥವನ್ನೂ ನೀಡಿದ್ದಾರೆ. ಅದರಲ್ಲಿ ಏಳು ನೂರಕ್ಕೂ ಅಧಿಕ ಪುಷ್ಪಗಳ ಮಹತ್ವ ಹಾಗೂ ಅವುಗಳ ಹಿನ್ನೆಲೆಯಲ್ಲಿ ಇರುವ ಆಧ್ಯಾತ್ಮಿಕ ಸಂವಹನವನ್ನೂ ತಿಳಿಸಿದ್ದಾರೆ. (ಪಿಪಿಕೆ)

# ಶ್ರೀಮಾತೆಯ ಪ್ರತಿಮಾ ತತ್ವ

– ಅನುವಾದ: ಪುಟ್ಟು ಕುಲಕರ್ಣಿ

*ಇಲ್ಲಿ (ಮುಖಪುಟದಲ್ಲಿ) ಮುದ್ರಿಸಲ್ಪಟ್ಟಿರುವ ಚಕ್ರದಲ್ಲಿ, ಅಲ್ಲಿ ಕೊಡಲಾಗಿರುವ ವರ್ಣಗಳು ಏನನ್ನು ಪ್ರತಿನಿಧಿಸುತ್ತಿವೆ? ಅದೂ ಅಲ್ಲದೇ ಕೇಂದ್ರ ಭಾಗದಲ್ಲಿ ಇರುವ ಬಿಂದುವಿಗೆ ಮತ್ತು ಅದರ ಸುತ್ತಲೂ ಇರುವ 'ನಾಲ್ಕು ಶಕ್ತಿಗಳಿಗೆ' ಹೇಗೆ ಇವು ಸೂಕ್ತವಾಗಿವೆ? ಪರಿಧಿಯ ಹಂತದಲ್ಲಿ ಕೊಂಚ ಹೆಚ್ಚುವರಿಯಾಗಿ ಹುಡಿ–ಹುಡಿಯ ವಿನ್ಯಾಸದಲ್ಲಿ ರೂಪಿಸಬೇಕೆಂದು ನಾನು ಯೋಚಿಸುತ್ತಿದ್ದೇನೆ.*

**ಮಧ್ಯದಲ್ಲಿರುವ ನಾಲ್ಕು ಶಕ್ತಿಗಳು ಶ್ವೇತವರ್ಣದಲ್ಲಿದ್ದು, ಮತ್ತೆ ಉಳಿದ ಹನ್ನೆರಡೂ ದಳಗಳು ಮೂರು ವರ್ಗಗಳಲ್ಲಿ – ಬೇರೆ ಬೇರೆ 'ವರ್ಣದ' ಗುಂಪಿನಲ್ಲಿ ಇವೆ. (1) ಪೂರ್ತಿ ಮೇಲಿನ ಭಾಗದಲ್ಲಿ ಕೆಂಪು ವರ್ಣವು ಇದ್ದು ಅದು ಕ್ರಮೇಣ ಕಿತ್ತಳೆ ವರ್ಣದ ಮೂಲಕ ಹಳದಿ ವರ್ಣದತ್ತ ಇರುತ್ತದೆ. (2) ಮುಂದಿನ ಭಾಗದಲ್ಲಿ ಹಳದಿ ವರ್ಣವು ಪ್ರಧಾನವಾಗಿದ್ದು ಅದು ಕ್ರಮೇಣ ಹಸಿರು ಹಾಗೂ ನೀಲ ವರ್ಣದ ಮೂಲಕ ಸಾಗುತ್ತದೆ. (3) ಈ ಭಾಗದ ನೀಲವು ನೇರಳೆಯ ವರ್ಣದ ಮೂಲಕ ಕೆಂಪು ವರ್ಣಕ್ಕೆ ಚಲಿಸುತ್ತದೆ. ಒಂದು ವೇಳೆ ಬಿಳಿ ಬಣ್ಣವೇ ಸೂಕ್ತವೆಂದಾದಲ್ಲಿ, ಕೇಂದ್ರ ಸ್ಥಾನದಲ್ಲಿ ಬಂಗಾರ ವರ್ಣದ ಹುಡಿ ಇರುತ್ತದೆ.**

*

*ನಾನು ಆಗಾಗ್ಗೆ ಶ್ರೀಮಾತೆಯ ಈ ಪ್ರತಿಮಾ ತತ್ವ ಹಾಗೂ ಅದರ ಮಹತ್ವದ ಕುರಿತು ಚಿಂತನೆಯನ್ನು ಮಾಡುತ್ತಲೇ ಇದ್ದೇನೆ. ನಾನು ಅರಿತು–ಕೊಂಡಿರುವದೇನೆಂದರೆ; ಈ ಚಕ್ರದಲ್ಲಿರುವ ಕೇಂದ್ರ ವೃತ್ತವು 'ವಿಶ್ವೋತ್ತೀರ್ಣ ಶಕ್ತಿ'ಯಾಗಿದೆ*


*ಮಧ್ಯದಲ್ಲಿರುವ ನಾಲ್ಕು ದಳಗಳು 'ಅತಿಮಾನಸದಿಂದ ಅಧಿಮಾನಸದ' ವರೆಗಿನ ಹಂತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಕ್ತಿಗಳಾಗಿವೆ.*

*ಹನ್ನೆರಡು ದಳಗಳಲ್ಲಿ, ಈ ಮೇಲ್ಕಂಡ ನಾಲ್ಕು ದಳಗಳು ಮತ್ತೆ ಹನ್ನೆರಡು ಶಕ್ತಿಗಳಾಗಿ, ಅಧಿಮಾನಸದಿಂದ ಅಂತರ್ಬೋಧೆಯ ಮತ್ತು ಮನಸ್ಸಿನವರೆಗೆ ಸಂಕೇತಿಸುತ್ತವೆ.*

*ನನ್ನ ದೃಷ್ಟಿಕೋನವು ಒಟ್ಟಿನಲ್ಲಿ ಸಮರ್ಪಕವಾಗಿದೆ ಅಲ್ಲವೇ?*

**ಸಾಮಾನ್ಯ ನಿಯಮದ ಪ್ರಕಾರ (ಅದರಲ್ಲೂ ಅವಶ್ಯಕವಾಗಿರುವಂತೆ) ಈ 12 ಶಕ್ತಿಗಳು, ಆವಿಷ್ಕಾರವು ಪರಿಪೂರ್ಣಗೊಳ್ಳಲು ಅವಶ್ಯವಿರುವ ಶಕ್ತಿಗಳೇ ಆಗಿವೆ. ಈ ಹನ್ನೆರಡೂ ಶಕ್ತಿಗಳು ಶ್ರೀಮಾತೆಯ ಶಿರದ ಮೇಲೆ ಮೊದಲಿನಿಂದಲೇ ಪ್ರಾರಂಭಗೊಂಡಿರುತ್ತವೆ. ಹೀಗಾಗಿ ಸೂರ್ಯನಿಗೂ ಸಹಿತ ಹನ್ನೆರಡು ಕಿರಣಗಳೇ ವಿನಾ ಏಳು ಕಿರಗಳು ಅಲ್ಲವೇ ಅಲ್ಲ. ಅದೇ ರೀತಿಯಲ್ಲಿ ಗ್ರಹಗಳೂ ಸಹಿತ ಹನ್ನೆರಡು … ಇತ್ಯಾದಿ ವಿಷಯಗಳಿವೆ…**

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/592–598 – ಶ್ರೀ ಅರವಿಂದರು**



**ಕೇಂದ್ರ ಭಾಗದಲ್ಲಿರುವ ವೃತ್ತವು "ಲೋಕಮಾತೆ"ಯನ್ನು ಅಭಿವ್ಯಕ್ತಿಸುತ್ತದೆ. ಅವಳೇ 'ಮಹಾಶಕ್ತಿ'ಯಾಗಿದ್ದಾಳೆ. ನಾಲ್ಕು ದಳಗಳು ಶ್ರೀಮಾತೆಯ ನಾಲ್ಕು ವಿಭಾಗಗಳಾಗಿವೆ. ಮತ್ತು ಅವಳ ಹನ್ನೆರಡು ದಳಗಳು ಅವಳ ಗುಣಧರ್ಮಗಳಾಗಿವೆ.**

*

**ಇದು ಪರಮ ಚೈತನ್ಯದ ಪ್ರತಿಮಾತ್ಮಕ ವಿನ್ಯಾಸವಾಗಿದ್ದು ಶ್ವೇತಪದ್ಮವಾಗಿದೆ, ಜೊತೆಗೆ (ಲೋಕ ಸೃಷ್ಟಿಗೆ ಕಾರಣಳಾಗಿರುವದರಿಂದ ಈ ರೂಪದಲ್ಲಿ) – ಮಹಾಶಕ್ತಿ ರೂಪದಲ್ಲಿ ಕೇಂದ್ರಲ್ಲಿರುವ ನಾಲ್ಕು ವಿಭಾಗಗಳು ಹಾಗೂ ಹನ್ನೆರಡು ಗುಣಧರ್ಮಗಳ ಸಂಗಡ – ಇರುತ್ತಾಳೆ.**

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/64–65 – ಶ್ರೀಮಾತೆ**



## ಶ್ರೀಮಾತೆ ಪರಾಶಕ್ತಿ – ಮಹಾಶಕ್ತಿ

*(ಪರಾದ ಚೇತನ ಮತ್ತು ಶಕ್ತಿ)*

ಶ್ರೀಮಾತೆಯ ನಾಲ್ಕು ಶಕ್ತಿಗಳು ಅವಳ ಅದ್ವಿತೀಯ ವ್ಯಕ್ತಿತ್ವಗಳಾಗಿವೆ, ಅಂಶಗಳೂ ಆಗಿವೆ ಮತ್ತು ಅವಳ ದಿವ್ಯತ್ವದ ಸಾಕಾರಗಳಾಗಿವೆ. ಇವುಗಳ ಮೂಲಕವೇ ಎಲ್ಲ ಜೀವ–ಜಂತುಗಳ ಲೀಲೆಗಳಲ್ಲಿ ತೊಡಗುತ್ತಾಳೆ. ಈ ಜಗತ್ತಿನಲ್ಲಿ ಅವಳ ಸೃಷ್ಟಿಗಳನ್ನು ಸುಸಂಬದ್ಧಗೊಳಿಸುತ್ತಾ ಮತ್ತು ಸಾಮರಸ್ಯಗೊಳಿಸುತ್ತಾ, ಅವಳ ಸಾವಿರದ ಶಕ್ತಿಗಳನ್ನು ಕಾರ್ಯಪ್ರವೃತ್ತಗೊಳ್ಳುವಂತೆ ನಿರ್ದೇಶಿಸುತ್ತಾಳೆ. ಇವೆಲ್ಲವೂ ಶ್ರೀಮಾತೆಗೆ "ಏಕ ಸ್ವರೂಪದಲ್ಲಿಯೇ" ಇದ್ದರೂ, ನಮ್ಮ ಎದುರಿಗೆ ಮಾತ್ರ ಈ ವಿಧವಿಧದ ವಿನ್ಯಾಸಗಳಲ್ಲಿ ಪ್ರಕಟಗೊಳ್ಳುತ್ತಾಳೆ. ಇವುಗಳಲ್ಲಿ ಬಹುತೇಕವಾಗಿ ಅವಳ ಶಕ್ತಿಗಳು ಮತ್ತು ಅವಳ ವ್ಯಕ್ತಿತ್ವಗಳೇ ಆಗಿವೆ. ಮತ್ತೆ ಕೆಲವು ಅವಳ ಉದ್ಗಮ(ಉತ್ಪತ್ತಿ)ಗಳು ಮತ್ತು ವಿಭೂತಿಗಳಾಗಿದ್ದು, ಅವುಗಳ ಮೂಲಕವೇ ಅವಳು ಈ ವಿಶ್ವದ ಕಾರ್ಯವನ್ನು ಮಾಡುತ್ತಾಳೆ.

ನಾವೆಲ್ಲರೂ ಈಗ ಆರಾಧಿಸುತ್ತಿರುವದು, ಅಸ್ತಿತ್ವದಲ್ಲಿರುವ ಸರ್ವಸ್ವವನ್ನೂ ನಿಯಂತ್ರಿಸುತ್ತಿರುವ ದಿವ್ಯ–ಚೈತನ್ಯಶಕ್ತಿಯಾಗಿರುವ ಶ್ರೀಮಾತೆಯನ್ನು. ಏಕವಾಗಿದ್ದರೂ ಸಹಿತ ಮತ್ತೆ ಹಲವು ಆಯಾಮಗಳನ್ನು ಹೊಂದಿದ್ದು, ಅತ್ಯಂತ ಕ್ರಿಯಾಶೀಲ ಸಾಮರ್ಥ್ಯ ಹೊಂಡಿರುವ ಮನಸ್ಸೂ ಸಹಿತ ಅವಳ ಚಲನವಲನಗಳನ್ನು ಮತ್ತು

ವ್ಯಕ್ತಿತ್ವವನ್ನು ಹೊಂದಿದ್ದರೂ ಸಹಿತ, ಇಲ್ಲಿ ಅದೇ ಮನಸ್ಸು ಅಸಮರ್ಥವಾಗಿರುತ್ತದೆ. ಹೀಗಾಗಿ ಶ್ರೀಮಾತೆಯ ಆ ಪರಮ ಶಕ್ತಿಯೂ ಹಾಗೂ ಚೈತನ್ಯವೂ ಆಗಿದ್ದು, ಮತ್ತೆ ಅವಳೇ ಸೃಷ್ಟಿಸಿದ ಸೃಷ್ಟಿಗಳಿಗಿಂತ ಉನ್ನತೋನ್ನತ ಹಂತದಲ್ಲಿ ಅಂದರೆ ಊರ್ಧ್ವಾತಿ ಊರ್ಧ್ವದಲ್ಲಿಯೇ ಇರುತ್ತಾಳೆ. ಆದರೆ ಅವಳ ಆ ಪಥಗಳಲ್ಲಿ ಕೆಲವನ್ನು ಮಾತ್ರ ನಾವು ಕಾಣಬಹುದಾಗಿದೆ. ಜತೆಗೆ ಅವಳು ಮೂರ್ತಗೊಳ್ಳುವದನ್ನು ಅನುಭೂತಿ–ಗೊಳಿಸಿಕೊಳ್ಳುವದರ ಮೂಲಕ ಅನುಭಾವ ಪಡೆದುಕೊಳ್ಳಬಹುದಾಗಿದೆ. ಮತ್ತೆ ಇವೆಲ್ಲಕ್ಕೂ ಮಿಗಿಲಾಗಿ ಇರುವ ವಿಷಯವೆಂದರೆ, ಅವುಗಳು ಬಹುತೇಕವಾಗಿ ಗ್ರಹಿಕೆಗೆ ದಕ್ಕುವಂತಿವೆ. ಏಕೆಂದರೆ, ಅವು ಬಹುತೇಕವಾಗಿ ಸಾಂಘಿಕವಾಗಿಯೇ ವ್ಯಾಖ್ಯಾನಿಸಲ್ಪಟ್ಟಿವೆ ಹಾಗೂ ನಿಗದಿತ ಮನೋಧರ್ಮಗಳನ್ನು ಹೊಂದಿವೆ. ಇದಲ್ಲದೇ ಆ ದೇವತೆಯ ಲೀಲೆಗಳ ಕ್ರಿಯೆಯಲ್ಲಿನ ರೂಪಗಳೂ ಆಗಿವೆ. ಈ ಮೂಲಕವೇ ಅವಳು ತನ್ನದೇ ಸೃಷ್ಟಿಯಾಗಿರುವ ಜೀವಿಗಳಾಗಿ ರೂಪಗೊಳ್ಳಲು ಸಹಮತಿ ಹೊಂದಿದ್ದಾಳೆ.

## ಶ್ರೀಮಾತೆಯ ಅಭಿವ್ಯಕ್ತಿಯ ಮೂರು ಪಥಗಳು

ಶ್ರೀಮಾತೆಯು ಅಭಿವ್ಯಕ್ತಗೊಳ್ಳಲು ಮೂರು ಪಥಗಳಿವೆ. ಅವುಗಳ ಬಗೆಗೆ ನೀವು ಅರಿವು ಹೊಂದಬೇಕೆಂದರೆ, ಆ “ಏಕತ್ವದ” ಹಂತದೊಡನೆ ಸ್ಪರ್ಶಗೊಳ್ಳುವ ಮೂಲಕ ನೀವು ಅಲ್ಲಿ ಪ್ರವೇಶ ಪಡೆದುಕೊಳ್ಳಬೇಕು. ಈ ಸ್ಪರ್ಶವು ಸಂಧಿನೀ ಶಕ್ತಿ(ಚಿತ್–ಶಕ್ತಿ)ಯೊಡನೆ ಬಂಧಗೊಂಡಿರಬೇಕು. ಏಕೆಂದರೆ ಈ ಸಂಧಿನೀ–ಶಕ್ತಿಯು ನಮ್ಮನ್ನು ವಿಶ್ವಾತ್ಮಗೊಳಿಸುವತ್ತ ಊರ್ಧ್ವದೆಡೆಗೆ ಸಾಗಲು ಅನುಮತಿಸುತ್ತದೆ. ಆದ್ಯಶಕ್ತಿಯಾಗಿರುವ ಈ ಆದಿ ಪರಾಶಕ್ತಿಯು, ಸರ್ವ ಲೋಕಗಳಿಗಿಂತಲೂ ಊರ್ಧ್ವದಲ್ಲಿಯೇ ನೆಲೆಸಿರುತ್ತಾಳೆ. ಅಲ್ಲಿಂದಲೇ, ಇನ್ನೂ ಸದಾ ಪ್ರಕಟಗೊಳ್ಳದೇ ಇರುವ ಆ ಪರಮ ಗೂಢತೆಯ ಇಲ್ಲಿನ ಸೃಷ್ಟಿಯ ಜೊತೆಗೆ ಸಂಪರ್ಕದ ಸಲುವಾಗಿ ಅವಳು ಆ ಊರ್ಧ್ವದಲ್ಲಿ ನೆಲೆಸಿದ್ದಾಳೆ. ವೈಶ್ವಿಕವಾಗಿ, ಈ ಬ್ರಹ್ಮಾಂಡಬ್ರಹ್ಮದ ಮಹಾಶಕ್ತಿಯು ಈ ಎಲ್ಲ ಜೀವ–ಚೈತನ್ಯಗಳಲ್ಲನ್ನೂ ಸೃಷ್ಟಿಸುತ್ತಾಳೆ. ಅವುಗಳನ್ನೇ ಒಳಗೊಂಡಿದ್ದಾಳೆ ಕೂಡ. ಅವುಗಳಲ್ಲಿಯೇ ಪ್ರವೇಶವನ್ನೂ ಪಡೆದು ಅವುಗಳನ್ನು ರಕ್ಷಿಸುತ್ತಾಳೆ. ಸಲಹುತ್ತಾಳೆ. ಹೀಗೆ ಕೋಟ್ಯಾಂತರ ಪ್ರಕ್ರಿಯೆಗಳನ್ನು ಹಾಗೂ ಬಲಗಳನ್ನೂ ರೂಪಿಸುತ್ತಾಳೆ. ವೈಯಕ್ತಿಕವಾಗಿ ಅವಳು, ಅವಳದೇ ಅಸ್ತಿತ್ವದ ಈ ಎರಡು ಅಗಾಧ ವ್ಯಾಪ್ತಿಯ ಪಥಗಳ ಮೂಲಕ ಮೂರ್ತಗೊಳ್ಳುತ್ತಾಳೆ. ಆ ಮೂಲಕವೇ

ಸರ್ವಸ್ವವೂ ಜೀವಿಸುವಂತೆ, ಮತ್ತು ಸಮೀಪದಲ್ಲಿಯೇ ಇರುವಂತೆ, ಮಾನವ ವ್ಯಕ್ತಿತ್ವ ಹಾಗೂ ದೈವೀ ಪ್ರಕೃತಿಯ ಮಧ್ಯದಲ್ಲಿ ಸದಾ ಧ್ಯಾನಿಸುವಂತೆ ಮಾಡುತ್ತಾಳೆ.

## ಏಕೈಕವಾಗಿರುವ ಆದ್ಯಶಕ್ತಿ (ಆದಿಶಕ್ತಿ)

ಏಕೈಕವಾಗಿರುವ ಆದಿಮೂಲದ ಈ ಆದಿಶಕ್ತಿಯು, ಶ್ರೀಮಾತೆಯೂ ಆಗಿದ್ದಾಳೆ. ಈ ಎಲ್ಲ ಲೋಕಗಳಿಗಿಂತ ಊರ್ಧ್ವದಲ್ಲಿಯೇ ನೆಲಸಿದ್ದು ಶಾಶ್ವತದ ಚೈತನ್ಯವನ್ನು ತನ್ನಲ್ಲಿಯೇ ಧರಿಸಿಕೊಂಡು ಅವಳು 'ಪರಾಶಕ್ತಿ'ಯಾಗಿದ್ದಾಳೆ. ಏಕಾಂಗಿಯಾಗಿಯೇ, ಆ ನಿರ್ವಿಶೇಷದ ಬಲಕ್ಕೆ ಆಶ್ರಯವಿತ್ತಿದ್ದಾಳೆ. ಜೊತೆಗೆ ಅವರ್ಣನೀಯ–ಅನಿರ್ವಚನೀಯವಾದ ಸಾನಿಧ್ಯವನ್ನೂ ಹೊಂದಿದ್ದಾಳೆ. ತನ್ನಲ್ಲಿಯೇ ಅಳವಟ್ಟುಕೊಂಡಿರುವ ಅಥವಾ ಋತವನ್ನು ಪ್ರಕಟಗೊಳ್ಳಲು ಆಹ್ವಾನವನ್ನು ಕೊಡುತ್ತಿದ್ದಾಳೆ. ಅವಳ ಆ ಗುಹ್ಯ(ಗೂಢ)ದಿಂದಲೇ ಅವುಗಳನ್ನು ಅನಾವರಣ–ಗೊಳಿಸುತ್ತಾಳೆ. ಅವುಗಳೆಲ್ಲವೂ ಅವಳದೇ ಅನಂತಾನಂತ ಚೇತನದ ಪ್ರಭೆಯಲ್ಲಿಯೇ ಅಂತರ್ಗತವಾಗಿದ್ದ ಹಂತದಿಂದಾಗಿ, ಅವಳು ಅವುಗಳಿಗೆ ತನ್ನದೇ ಸರ್ವಶಕ್ತ ಬಲದಲ್ಲಿ ರೂಪಧಾರಣೆ ಕೊಡುತ್ತಾಳೆ. ಅವಳದೇ ಚಿಂತನದ ಜೀವನವನ್ನು ಹಾಗೂ ದೇಹ(ಸಂರಚನೆಯನ್ನೂ) ನೀಡುತ್ತಾಳೆ. ಈ 'ಪರಮ'ವೇ ಅವಳಲ್ಲಿ ಪ್ರಕಟಗೊಂಡು, ಚಿರಂತನವಾಗಿ ಅಭಿವ್ಯಕ್ತಗೊಂಡು ಶಾಶ್ವತವಾದ ಸಚ್ಚಿದಾನಂದವಾಗುತ್ತದೆ. ಇದು ಅವಳಲ್ಲಿಯೇ ಪ್ರಕಟಗೊಳ್ಳುವದರ ಮೂಲಕ ಈ ಲೋಕಗಳಲ್ಲಿ ದ್ವೈತ ಮತ್ತು ಅದ್ವೈತದ ಚೈತನ್ಯವಾಗಿ "ಈಶ್ವರ ಶಕ್ತಿ"ಯಾಗಿ, ಪುರುಷ–ಪ್ರಕೃತಿಯ ಈ ದ್ವೈತ ತತ್ತ್ವದಲ್ಲಿ ಪ್ರಕಟಗೊಳ್ಳುತ್ತದೆ. ಅವಳ ಮೂಲಕವೇ ಲೋಕಗಳ ರೂಪದಲ್ಲಿ ಮೂರ್ತಗೊಳ್ಳುತ್ತದೆ. ಅದೂ ಅಲ್ಲದೇ ಅವಕಾಶ(ಆಕಾಶ)ದ ಹಾಗೆ ಮತ್ತು ದೇವತೆಗಳ ಹಾಗೂ ಅವರ ಸಾಮರ್ಥ್ಯ–ಶಕ್ತಿಗಳಲ್ಲಿ ರೂಪಧಾರಣೆಗೊಳ್ಳುತ್ತದೆ. ಏಕೆಂದರೆ ಇವೆಲ್ಲವೂ ಜ್ಞಾತಲೋಕಗಳಲ್ಲಿ ಅದು ಅನ್ಯರಿಗೆ ಅಜ್ಞಾತವಾಗಿಯೇ ಇರುತ್ತದೆ. ಅವಳು ಈ ಪರಮ–ಲೀಲೆಗಳ ಜೊತೆಗೆ ರೂಪಿತಗೊಳ್ಳುತ್ತಲೇ ಇದ್ದರೂ ಇವೆಲ್ಲವೂ ಅವಳ ಆ ಶಾಶ್ವತದ ಮಾಯೆಗಳಾಗಿವೆ. ಅನಂತತೆಯ ಪವಾಡಗಳಾಗಿವೆ. ಸರ್ವಸ್ವವು ಇವಳೇ ಆಗಿದ್ದಾಳೆ. ಅವೆಲ್ಲವೂ ಈ ದಿವ್ಯ ಸಂಧಿನೀ ಶಕ್ತಿಯ (ಚೈತನ್ಯಶಕ್ತಿಯ) ಎಲ್ಲ ಅಂಶಾಂಶಗಳಾಗಿವೆ. ಅವಳ ಆ ಪರಮ ಆಣತಿ, ಕೃಪೆ ಇಲ್ಲದೇ ಅಥವಾ ಎಲ್ಲಿಯೂ ಸಹಿತ ಏನೂ ಇರುವದಿಲ್ಲ! ಆದರೆ, ಯಾವುದನ್ನು ಅವಳು ನಿರ್ಧರಿಸುತ್ತಾಳೆಯೋ ಅದು ಮಾತ್ರವೇ ಅಸ್ತಿತ್ವ

ಪಡೆದುಕೊಳ್ಳುತ್ತದೆ. ಅವಳ ಆ ಆನಂದದ ಸೃಷ್ಟಿಯಲ್ಲಿ ಎರಕಗೊಂಡಂತಹ ರೂಪಗಳ ಮತ್ತು ಆ ಪರಮದ ಸಮ್ಮತಿ ಇಲ್ಲದೇನೇ ಇಲ್ಲಿ ಏನೊಂದೂ ಚಲನೆ ಹೊಂದಲು ಸಾಧ್ಯವೇ ಇಲ್ಲ.

**ಮಹಾಶಕ್ತಿ–ಲೋಕಮಾತೆ**

ಈ ಮಹಾಶಕ್ತಿಯು ಲೋಕಮಾತೆಯಾಗಿದ್ದಾಳೆ. ಅವಳು ಆ ಪರಾತ್ಪರದಿಂದ ಅವಳದೇ ವಿಶ್ವೋತ್ತರ ಚೈತನ್ಯದಿಂದ, ಅದರ ವಹನದಿಂದಲೇ ಅವಳು ಸರ್ವಸ್ವದಲ್ಲೂ ಕ್ರಿಯಾಪ್ರವೃತ್ತಳಾಗಿದ್ದಾಳೆ. ಮತ್ತು ಮೂಲಕವೇ ಅವಳೇ ಸೃಷ್ಟಿಸಿದ ಲೋಕಗಳಲ್ಲಿ ಅವಳು ಪ್ರವೇಶಿಸುತ್ತಾಳೆ. ಅವಳ ಈ ಉಪಸ್ಥಿತಿಯು, ದೈವೀಶಕ್ತಿಯೊಡನೆ ಹಾಗೂ ಅಸ್ತಿತ್ವದಲ್ಲಿರುವ ನಿರಂತರವಾಗಿರುವ ಸರ್ವ–ಬಲಗಳಿಗೆ ಸಮರ್ಥನೆಯನ್ನು ಒದಗಿಸುತ್ತಾಳೆ. ಅವುಗಳು ಇನ್ನೂ ಅಸ್ತಿತ್ವ ಪಡೆದುಕೊಳ್ಳದಿದ್ದರೂ ಸಹಿತ ಅವು ಸದಾ ತೋಷವನ್ನೇ ಒದಗಿಸುವಂತೆ ಸಮರ್ಥನೆ ನೀಡುತ್ತಾಳೆ. ಇದನ್ನೇ ನಾವು 'ಪ್ರಕೃತಿ' ಅಥವಾ 'ಸ್ವರೂಪ'ವೆಂದು ಕರೆಯುತ್ತೇವೆ. ಇದು ಹೆಚ್ಚಾಗಿ ಅವಳ ಬಾಹ್ಯ ಸ್ವರೂಪದಲ್ಲಿ ಕಾರ್ಯಪ್ರವೃತ್ತವಾಗಿರುವ ವಿಷಯವಾಗಿರುತ್ತದೆ. ಅವಳು ತನ್ನ ಬಲಗಳ (ಶಕ್ತಿಗಳ) ಸೌಷಮ್ಯವನ್ನು ವ್ಯವಸ್ಥೀಕರಣಗೊಳಿಸುತ್ತ ಹಾಗೂ ಶ್ರೇಣಿಬದ್ಧತೆಯನ್ನೂ ರೂಪಿಸಿಕೊಂಡಿರುತ್ತಾಳೆ. ಈ ಮೂಲಕವೇ ಸರ್ವ ಪ್ರಕ್ರಿಯೆಗಳನ್ನೂ ನಡೆಸುತ್ತಾಳೆ. ಪ್ರಕೃತಿಯ ಸಂಚಾಳನೆಹೆ ಪ್ರೇರಣೆ ಕೊಡುತ್ತಾಳೆ. ಅವುಗಳ ಆಂತರ್ಯದಲ್ಲಿಯೇ ರಹಸ್ಯವಾಗಿ ಅವಳು ಚಲಿಸುತ್ತಾಳೆ. ಇಲ್ಲವೇ ಯಾವುದು ದೃಷ್ಟಗೊಳ್ಳಬೇಕಾಗಿದೆಯೋ, ಅಲ್ಲೆಲ್ಲವೂ ರೂಪಧಾರಣೆಯಾಗಿ ಅಭಿವ್ಯಕ್ತಗೊಳ್ಳುತ್ತಾಳೆ. ಅನುಭವಕ್ಕೆ ದಕ್ಕುವಂತೆ ಅಥವಾ ಜೀವನದ ಗತಿಯು ಸಂಚಲನವನ್ನು ಹೊಂದುವಂತೆ ಮಾಡುತ್ತಾಳೆ. ಲೋಕಗಳ ಪ್ರತಿಯೊಂದು ಘಟನೆಯೂ, ಈ ಜಗತ್ತಿನ ಹಾಗೂ ಈ ಲೋಕಗಳ ವ್ಯವಸ್ಥೆಗೆ ಅವಶ್ಯವಾಗಿರುವ ಮಹಾಶಕ್ತಿಯ ಲೀಲೆಗಳಾಗಿರುತ್ತವೆ. ಇಲ್ಲಿ ಎಲ್ಲ ಕಡೆಗೂ ಈ ಆದ್ಯಶಕ್ತಿ(ಆದಿಶಕ್ತಿ)ಯ ಬ್ರಹ್ಮಾಂಡದ ಸ್ವರೂಪ ಮತ್ತು ಆತ್ಮಸ್ವರೂಪವೇ ಆಗಿರುತ್ತದೆ. ಪ್ರತಿ ಹಂತದಲ್ಲಿಯೂ ಅವಳದೇ ದೃಷ್ಟಾರ ದೃಷ್ಟಿಯಲ್ಲಿ, ಅವಳ ಹೃದಯದಲ್ಲಿ ಸೌಂದರ್ಯ ಮತ್ತು ಶಕ್ತಿಯಾಗಿದ್ದು ಅವಳದೇ ಆನಂದದಲ್ಲಿ ಸೃಷ್ಟಿಗೊಂಡಿರುತ್ತದೆ.

ಆದರೂ ಅವಳ ಈ ಸೃಷ್ಟಿಯಲ್ಲಿ ಹಲವು ಸ್ತರಗಳೂ ಇರುತ್ತವೆ. ಈ ದೈವೀಶಕ್ತಿಯ ಹಲವು ಹಂತಗಳೂ ಇವೆ. ಈ ಅಭಿವ್ಯಕ್ತಿಯ ತುರೀಯಾವಸ್ಥೆಯಲ್ಲಿ (ಶೃಂಗದಲ್ಲಿ)

ಯಾವುದು ಅನಂತತೆಯ ಅಸ್ತಿತ್ವ ಹೊಂದಿರುವ ಲೋಕಗಳಾಗಿವೆಯೋ, ಚೈತನ್ಯವಾಗಿದೆಯೋ ಅದು ಬಲವಾಗಿಯೇ ಮತ್ತು ಕೃಪೆಯ ಮೂಲಕವೇ ಎಲ್ಲಿ ಶ್ರೀಮಾತೆಯು ಶಾಶ್ವತದ ಶಕ್ತಿಯಿಂದ ತಾನೇ ತಾನಾಗಿ ಪ್ರಕಟಗೊಳ್ಳುತ್ತಿದ್ದಾಳೆಯೋ, ಅಲ್ಲೆಲ್ಲವೂ ನಾವೂ ಸಹಿತ ಅದರ ಒಂದು ಅಂಶಾಂಶವಾಗಿಯೇ ಇದ್ದೇವೆ.

ಎಲ್ಲ ಜೀವಿಗಳೂ (ಜೀವ–ಸಂಕುಲವೂ) ಅನಿರ್ವಚನೀಯವಾದ ಪೂರ್ಣತೆಯಲ್ಲಿ ಹಾಗೂ ಅಪರಿವರ್ತನೀಯ ಏಕತ್ವದಲ್ಲಿಯೇ ಜೀವಿಸುತ್ತಿದ್ದು, ಜೊತೆಗೆ ಸಂಚಲನವನ್ನು ಹೊಂದಿವೆ. ಏಕೆಂದರೆ, ಅವಳು (ಶ್ರೀಮಾತೆಯು) ಎಲ್ಲ ಜೀವ ಸಂಕುಲವನ್ನು ಸುರಕ್ಷಿತವಾಗಿಯೇ ತನ್ನ ಬಾಹುಗಳಲ್ಲಿ ರಕ್ಷಿಸಿದ್ದಾಳೆ, ನಮಗೆ ಅತೀ ಸಮೀಪದಲ್ಲಿರುವ ಜಗತ್ತುಗಳೆಂದರೆ ಪರಿಪೂರ್ಣದ ಅತಿಮಾನಸ (ಉನ್ಮನೀ ಮನೋಭಾವದ) ಸೃಷ್ಟಿಯೇ ಆಗಿದ್ದು, ಇಲ್ಲಿಯೇ ಶ್ರೀಮಾತೆಯು ಈ "ವಿಶ್ವೋತ್ತೀರ್ಣ ಮಹಾಶಕ್ತಿ"(ಆದ್ಯಶಕ್ತಿ)ಯಾಗಿದ್ದಾಳೆ. ದಿವ್ಯ ಸರ್ವಜ್ಞತ್ವದ 'ಇಚ್ಛೆ' ಮತ್ತು ಸರ್ವಶಕ್ತ ಜ್ಞಾನದೊಡನೆ ಇವು ಯಾವಾಗಲೂ ವಿಚಲನಗೊಳ್ಳದ ಕಾರ್ಯಗಳಾಗಿದ್ದು, ಜೊತೆಗೆ ಪ್ರತಿಯೊಂದು ಪ್ರಕ್ರಿಯೆಯಲ್ಲಿಯೂ ಸಹಿತ ಸ್ವತಃಸ್ಫೂರ್ತಭಾವದಲ್ಲಿ ಪರಿಪೂರ್ಣವಾಗಿರುತ್ತಾಳೆ. ಇವೆಲ್ಲವೂ ಅಲ್ಲಿ ಆ ಋತದ ಹಂತಗಳೇ ಆಗಿವೆ. ಅಲ್ಲಿರುವ ಸರ್ವ ಆತ್ಮಗಳ ಅಸ್ತಿತ್ವವು ಮತ್ತು ಶಕ್ತಿ–ಬಲಗಳ ಹಾಗೂ ದೇಹ–ರಚನೆಗಳು ಆ ದೈವೀ ಪ್ರಕಾಶವೇ ಆಗಿರುತ್ತವೆ. ಅಲ್ಲಿನ ಅನುಭವಗಳೆಲ್ಲವೂ ಅಲ್ಲಿರುವ ಆರ್ಣವ (ಸಾಗರ) ಹಾಗೂ ಪ್ರವಾಹವಾಗಿದ್ದು, ಅಲ್ಲಿ ಸದಾ ಆ ತೀವ್ರತೆಯು ತುಂಬಿದ ಆ ನಿರ್ವಿಶೇಷ ಆನಂದದ (ಸಚ್ಚಿದಾನಂದದ) ಅಲೆಗಳೇ ಆಗಿರುತ್ತವೆ. ಆದರೆ ಇಲ್ಲಿ, ನಾವು ವಾಸಿಸುತ್ತಿರುವ ಎಡೆಯಲ್ಲಿ, ಇದು ಮಾತ್ರ ಅಜ್ಞಾನದ ಲೋಕಗಳಾಗಿವೆ. ಮನೋಲೋಕಗಳಾಚೆ, ದೇಹ ಮತ್ತು ಜೀವ(ನ)ಗಳು, ಅವುಗಳ ಮೂಲದ್ರವ್ಯವಾಗಿರುವ ಚೈತನ್ಯದಿಂದ ಭಿನ್ನವಾಗಿಯೇ (ದೂರವಾಗಿಯೇ) ರೂಪುಗೊಂಡಿರುತ್ತವೆ. ಅವುಗಳಲ್ಲಿ ನಮ್ಮ ಈ ಭೂಮಿಯೂ ಸಹಿತ ಒಂದು ಪ್ರಾಮುಖ್ಯ ಹೊಂದಿದ ಕೇಂದ್ರವಾಗಿದ್ದು, ಇದರ ವಿಕಾಸವೂ ಅತ್ಯಂತ ನಿರ್ಣಾಯಕ ಪ್ರಕ್ರಿಯೆಯಲ್ಲಿ ಇದೆ. ಇದೂ ಸಹಿತ ಅದರ ಎಲ್ಲ ಅಸ್ಪಷ್ಟತೆಯಿಂದ ಮತ್ತು ಸಂಘರ್ಷದಿಂದ ಹಾಗೂ ಅಪರಿಪೂರ್ಣತೆಯಿಂದಲೇ ಶ್ರೀಮಾತೆಯಿಂದಲೇ ರಕ್ಷಿಸಲ್ಪಡುತ್ತಿದೆ. ಇದೂ ಸಹಿತ ಈ ಮಹಾಶಕ್ತಿಯ ಗೂಢ–ಗಮ್ಯತೆಯ ಕಡೆಗೆ ಸಾಗಲು ಪ್ರೇರಣೆಯನ್ನು ಹಾಗೂ ಮಾರ್ಗದರ್ಶನವನ್ನು ಹೊಂದಿರುತ್ತದೆ.

ಅಜ್ಞಾನದಿಂದ ತುಂಬಿರುವ ಈ ತ್ರಿಪುಟೀ–ಲೋಕಗಳಲ್ಲಿ ಈ ಶ್ರೀಮಾತೆಯು ಮಹಾಶಕ್ತಿಯಾಗಿ ಮಧ್ಯಂತರದ ಒಂದು ಸ್ತರದಲ್ಲಿ ಇರುತ್ತಾಳೆ. ಅವಳು ಆ ಮೂಲಕ ಅತಿಮಾನಸ–ಪ್ರಕಾಶಕ್ಕೂ, ಪರಮ ಸತ್ಯಕ್ಕೂ ಹಾಗೂ ಋತ–ಜೀವ(ನ)ದ ಮಧ್ಯದ ಸ್ತರದಲ್ಲಿ ಮಧ್ಯವರ್ತಿಯಾಗಿದ್ದಾಳೆ, ಅವೆಲ್ಲವನ್ನೂ ಇಲ್ಲಗೆ ಕ್ರಮಾನುಗತವಾಗಿಯೇ ಅವತರಣಗೊಳಿಸುವ ಮೂಲಕ, ಅವತರಣಗೊಳ್ಳುವದರ ಮೂಲಕ, ಇಲ್ಲಿರುವ ಚೈತನ್ಯದ ಸ್ತರಗಳಲ್ಲಿ ಆರೋಹ–ಅವರೋಹಣಗಳನ್ನು ಒದಗಿಸುವ ವಿಶೇಷ ವ್ಯವಸ್ಥೆಯುಳ್ಳ ಏಣಿಯ ಸ್ವರೂಪದಲ್ಲಿ ಇದ್ದು, ಅದರ ಮೂಲಕವೇ ಆ ಅವಿದ್ಯೆಯಿಂದ ಕೂಡಿದ ಭೌತಿಕ ಜಗತ್ತಿಗೆ ಬಂದು, ಮತ್ತೆ ಅದೇ ಸಾಧನದ ಮೂಲಕವೇ ಮೇಲೇರಿ ಬಂದು, ಜೀವನ–ಪುಷ್ಪದ ವಿಕಸನವನ್ನು, ಆತ್ಮದ ವಿಕಸನವನ್ನೂ, ಮನೋ ವಿಕಸನವನ್ನೂ ಆ ಅನಂತಾನಂತದವರೆಗೂ ಹಾಗೂ ಆ ಪರಮ ಆತ್ಮದ ನೆಲೆಯವರೆಗೂ ತಲುಪುವಂತೆ ಮಾಡುತ್ತಾಳೆ. ಇವೆಲ್ಲವೂ ಈ ಲೋಕದಲ್ಲಿಯೇ ಘಟಿಸಲ್ಪಡಬೇಕೆಂದು ನಿರ್ಣಿತವಾಗಿರುವದರಿಂದ, ಹಾಗೂ ಈ ಲೌಕಿಕದ ವಿಕಾಸದ ಮೂಲಕವೇ ಅವಳು ಎಲ್ಲವನ್ನೂ ಗಮನಿಸುತ್ತಾಳೆ. ಅನುಭವಿಸುತ್ತಾಳೆ. ಜೊತೆಗೆ ಅವುಗಳನ್ನೇ ಅವಳು ಧಾರಾಕಾರಗೊಳಿಸುತ್ತಾಳೆ. ದೇವತೆಗಳಿಗಿಂತಲೂ ಉನ್ನತ ಸ್ತರದಲ್ಲಿ ಅವಳು ನೆಲೆಸಿದ್ದು, ಅವಳ ಸರ್ವ ಶಕ್ತಿಗಳೂ ಹಾಗೂ ವ್ಯಕ್ತಿತ್ವಗಳು ಅವಳ ಎದುರಿಗೇ ಸ್ಥಿತಗೊಂಡಿರುತ್ತವೆ. ಅವುಗಳ ಮೂಲಕವೇ ಅವಳು ಕ್ರಿಯೆಗೆ ತೊಡಗುತ್ತಾಳೆ. ಅವುಗಳನ್ನು ಅವರೋಹಣಗೊಳಿಸಿ, ಅವುಗಳ ಉದ್ಗಮವನ್ನೇ (ಹೊರಹೊಮ್ಮುವಿಕೆಯನ್ನು) ಈ ಕೆಳಗಿನ ಸ್ತರಗಳ ಲೋಕಗಳ ಮಧ್ಯೆ ಪ್ರವೇಶಿಸುವಂತೆ, ನಿರ್ವಹಿಸುವಂತೆ, ಹೋರಾಡಲು ಹಾಗೂ ವಿಜಯ ಸಂಪಾದಿಸಲು, ಮುಂದಾಳತ್ವ ವಹಿಸಲು ಮತ್ತು ಅವುಗಳ ಚಕ್ರೀಯ ಗತಿಯನ್ನು ಮುಂದುವರೆಸಲು, ಒಟ್ಟಿನಲ್ಲಿ, ಅವುಗಳ ಬಲಗಳನ್ನು ಪ್ರತಿ ಹಂತದಲ್ಲಿಯೂ ಪ್ರತಿ ಸ್ತರದಲ್ಲಿಯೂ ಸಮಗ್ರಗೊಳ್ಳುವಂತೆ (ಪೂರ್ಣಗೊಳ್ಳುವಂತೆ) ನಿರ್ದೇಶಿಸಲು ರೂಪಿಸುತ್ತಾಳೆ.

ಈ ಉದ್ಗಮಗಳು ಹಲವು ದಿವ್ಯ ರೂಪಗಳಲ್ಲಿ ಮತ್ತು ವ್ಯಕ್ತಿತ್ವಗಳಲ್ಲಿ ಇದ್ದು, ಇವುಗಳ ಮೂಲಕವೇ ಮನುಕುಲವು ಇವಳನ್ನು ಹಲವಾರು ನಾಮ–ರೂಪಗಳಲ್ಲಿ, ಹಲವಾರು ಯುಗಗಳಿಂದಲೂ ಆರಾಧಿಸುತ್ತ ಬಂದಿದ್ದಾರೆ. ಆದರೆ ಅವಳೂ ಸಹಿತ ಈ ಎಲ್ಲ ಶಕ್ತಿಗಳ ಮುಖಾಂತರವೇ ಸಾಕಾರ ಪಡೆಯುತ್ತಿದ್ದು,

ಸಿದ್ಧಗೊಳ್ಳುತ್ತಿದ್ದು ಹಾಗೂ ಉದ್ಗಮಗಳೇ ಅವಳ ವಿಭೂತಿ (ಮಹಾತ್ಮ) ಸ್ವರೂಪದ ದೇಹಗಳು ಮತ್ತು ಮನಸ್ಸುಗಳಾಗಿವೆ. ಅಷ್ಟೇ ಅಲ್ಲದೇ ಅವಳು ಈಶ್ವರನ ವಿಭೂತಿ ಲಕ್ಷಣಗಳನ್ನೂ, ಅವನ ಮನೋರೂಪವನ್ನೂ ಹಾಗೂ ದೈಹಿಕ ಸ್ವರೂಪವನ್ನೂ ಸಿದ್ಧಗೊಳಿಸುತ್ತಾಳೆ. ಅಂದರೆ ಇವೆಲ್ಲವನ್ನೂ ಅವಳು ಈ ಭೌತಿಕ (ಲೌಕಿಕ) ಜಗತ್ತಿನಲ್ಲಿ ಅಭಿವ್ಯಕ್ತಗೊಳಿಸುತ್ತಾಳೆ. ಅಲ್ಲದೇ ಮಾನವನ ಚೈತನ್ಯದಲ್ಲಿ (ಪ್ರಜ್ಞೆಯಲ್ಲಿ) ಅದೃಶ್ಯರೂಪದಲ್ಲಿ ಅವಳ ಕೆಲವೊಂದು ಶಕ್ತಿಯ ಕಿರಣದಲ್ಲಿ, ಗುಣದಲ್ಲಿ ಮತ್ತು ಸಾರೂಪ್ಯದಲ್ಲಿ ಪ್ರಕಟಗೊಳಿಸುತ್ತಾಳೆ. ಹೀಗಾಗಿ ಈ ಭೂಮಿಯ ಮೇಲಿನ ಎಲ್ಲ ಘಟನಾವಳಿಗಳೂ, ದೃಶ್ಯಗಳೂ ಸಹಿತ ಅವಳ ಆ ವಿಶ್ವವಿರಾಟ್–ಸ್ವರೂಪದ ದೇವಗಣಗಳನ್ನು ಅವಳ ಸಹಾಯಕರನ್ನಾಗಿಸಿಕೊಂಡು ರೂಪಿಸಿ ನಿರ್ದೇಶಿಸುತ್ತಿರುವ ಹಾಗೂ ವ್ಯವಸ್ಥೆಗೊಳಿಸುತ್ತಿರುವ ರಂಗಲೀಲೆಗಳಾಗಿವೆ. ಇಲ್ಲಿ ಅವಳೂ ಸಹಿತ ಅಪ್ರತ್ಯಕ್ಷವಾಗಿಯೇ ಪಾತ್ರಧಾರಿಯೂ ಆಗಿದ್ದಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/14–17 – ಶ್ರೀ ಅರವಿಂದರು**

*ಈ ಶ್ರೀಮಾತೆಯು ಆ ಊರ್ಧ್ವದಿಂದಲೇ ಎಲ್ಲವನ್ನೂ ಆಡಳಿತಕ್ಕೆ ಒಳಪಡಿಸುತ್ತಾಳೆ, ಅದೇ ರೀತಿ ನಿರ್ವಹಿಸುತ್ತಿದ್ದಾಳೆ. ಅಲ್ಲದೇ ಅವಳು ಈ ಕೆಳಗಿನ ಸ್ತರದಲ್ಲಿರುವ ತ್ರೈಗುಣದಿಂದ ಕೂಡಿರುವ ಲೋಕದೆಡೆಗೆ ಅವತರಣಗೊಳ್ಳುತ್ತಾಳೆ. ಇಲ್ಲಿರುವ ಎಲ್ಲವೂ ಸಹಿತ, ಅಜ್ಞಾನದ ಸಂಚಲನದಲ್ಲಿಯೂ ಸಹಿತ, ಅವಳದೇ ಆದ ಆಚ್ಛಾದಿತ ಸ್ವರೂಪದಲ್ಲಿ ಇದ್ದು, ನಿರಾಕಾರ ಸ್ವರೂಪದಲ್ಲಿರುತ್ತದೆ. ಜೊತೆಗೆ ಅವಳದೇ ಸೃಷ್ಟಿಯಾಗಿದ್ದರೂ ಸಹಿತ, ಕ್ಷೀಣಗೊಂಡ ಪದಾರ್ಥಗಳಲ್ಲಿ, ಅವಳ ಪ್ರಾಕೃತಿಕ ಸಂರಚನೆ (ಪ್ರಕೃತಿ ಸ್ವರೂಪದ ದೇಹ) ಹಾಗೂ ಪ್ರಕೃತಿಯ ಬಲಗಳಲ್ಲಿ ಜೊತೆಗೇ ಅವುಗಳು ಅಸ್ತಿತ್ವದಲ್ಲಿವೆ. ಏಕೆಂದರೆ, ಇವೆಲ್ಲವೂ ಆ 'ಪರಮ'ದ ನಿಗೂಢವಾದ ನಿಯೋಜನೆಯೇ ಆಗಿದೆ. ಇದು ಆ ಮೂಲಕವೇ ಕಾರ್ಯಪ್ರವೃತ್ತವಾಗುತ್ತಿದ್ದು, ಅದು ಆ ಅನಂತತೆಯ ಸಂಭಾವ್ಯತೆಯಲ್ಲಿಯೇ ಸ್ಥಿತವಿದ್ದುದಾಗಿತ್ತು.ಅವಳು ಸದಾ ಮಹತ್–ತ್ಯಾಗಕ್ಕೆ ಅನುಮತಿಸುತ್ತಿದ್ದು, ಜೊತೆಗೆ ಅದಕ್ಕಾಗಿ ಆತ್ಮಕ್ಕೆ, ಅಜ್ಞಾನದ ರೂಪಗಳ ಮೇಲೆ ಮತ್ತು ಆತ್ಮಕ್ಕೆ ಹೊದಿಸಿರುವ ಹೊದಿಕೆಯನ್ನೂ ರೂಪಸಿದ್ದಾಳೆ. ಆದರೆ ವೈಯಕ್ತಿಕವಾಗಿಯೂ*

*ಅವಳು, ಇಲ್ಲಿ ಈ ತಮೋಪ್ರಧಾನ ಸ್ತರದೆಡೆಗೆ ಅವತರಣಗೊಳ್ಳಲೆಂದು ಬಾಗುತ್ತಾಳೆ. ಏಕೆಂದರೆ ಆ ಮೂಲಕವೇ ಪ್ರಕಾಶವನ್ನೂ ನೀಡಿ ಮುಂದಾಳತ್ವ ವಹಿಸಬೇಕಾಗಿದೆ. ಅನೃತವಾದುದನ್ನು, (ಮಿಥ್ಯೆಗಳನ್ನು) ಹಾಗೂ ತಪ್ಪುಗಳನ್ನು ಪರಿವರ್ತಗೊಳಿಸುತ್ತ ಪರಮಸತ್ಯಕ್ಕೆ ತರುತ್ತಾಳೆ. ಈ ಮೃತಸದೃಶವಾಗಿರುವದನ್ನು, ಅವಳು ಅದನ್ನು ದೇವಸದೃಶ ಜೀವವನ್ನಾಗಿಸಿ ಪರಿವರ್ತಿಸುತ್ತಾಳೆ. ಈ ನೋವುಗಳಿಂದ, ಯಾತನೆಗಳಿಂದ, ಕೂಡಿದ ಜಗತ್ತಿಗೆ, ಹಠಮಾರಿತನದಿಂದಾಗಿ ರೂಪಿತಗೊಂಡ ದುಃಖದಿಂದ ಹಾಗೂ ಬಳಲುವಿಕೆಯಿಂದ ಇದ್ದುದನ್ನು ಅವಳು ಅದೆಲ್ಲಕ್ಕೂ ಮುಕ್ತಾಯ ರೂಪಿಸಿ, ಅಲ್ಲಿ ಅವಳ ಮಹೋನ್ನತವಾದ ಆನಂದದಲ್ಲಿಯೇ ರೂಪಾಂತರಣ–ಗೊಳಿಸುತ್ತಾಳೆ. ಅವಳ ಆತ್ಮೀಯ, ಗಾಢ ಹಾಗೂ ಮಹದ್–ಪ್ರೇಮಭಾವವು ಯಾವಾಗಲೂ ಅವಳ ಸಂತತಿಯ ಮೇಲೆಯೇ ಇದ್ದು, ಅದಕ್ಕಾಗಿಯೇ ಈ ಅಸ್ಪಷ್ಟತೆಯ ಅವಧಿಯಿಂದ ಹೊರಬರಲು ತನಗೆ ತಾನೇ ಸಮ್ಮತಿಸಿ–ಕೊಂಡು, ಅಲ್ಲಿ ಸ್ಥಿತಗೊಳ್ಳುತ್ತಾಳೆ. ತಮದ ಹಾಗೂ ಮಿಥ್ಯಾಲೋಕದ ಶಕ್ತಿಗಳಿಂದಾಗಿ ಆಗಮಿಸುವ (ಉದ್ಭವಿಸುವ) ವೇದನಾಪೂರ್ಣ ಪ್ರಭಾವಗಳನ್ನು ಹಾಗೂ ಆಘಾತಗಳನ್ನು ಸಹಿಸಿಕೊಳ್ಳುವದರ ಸಲುವಾಗಿ ಅವಳು ತನ್ನನ್ನು ತಾನೇ ದಯಾಶೀಲಗೊಳಿಸಿಕೊಳ್ಳುತ್ತಾಳೆ. ಜನ್ಮ ಜನ್ಮಗಳ ಹಲವು ದ್ವಾರಗಳಿಂದಲೇ ಅವಳು ಸಂಚಲಿಸುತಿದ್ದು, ಅದು ಸಾವನ್ನೂ ಸಹಿತ ಒಳಗೊಂಡಿದೆ. ಅವಳು ತನ್ನಲ್ಲಿಯೇ ಈ ಎಲ್ಲ ನೋವುಗಳನ್ನೂ ಹಾಗು ದುಃಖಗಳನ್ನು ಮತ್ತು ಸೃಷ್ಟಿಯ ಎಲ್ಲ ಕ್ಲೇಶಗಳನ್ನು ಸ್ವೀಕರಿಸುತ್ತಾಳೆ. ಹೀಗಾಗಿಯೇ ಇದೆಲ್ಲವೂ, ಸರ್ವಸ್ವವೂ ಏಕಾಂಗಿಯಾಗಿಯೇ ಆ ಪ್ರಕಾಶದ ಕಡೆಗೆ ಎತ್ತಲ್ಪಟ್ಟಂತೆ ಕಾಣುತ್ತದೆ. ತೋಷದೆಡೆಗೆ ಮತ್ತು ಆ ಋತದ ಹಾಗೂ ಶಾಶ್ವತದ ಜೀವನದ ಎಡೆಗೆ ಊರ್ಧ್ವಗೊಳಿಸಿದಂತೆ ಇರುತ್ತದೆ. ಇದನ್ನೇ ಮಹತ್ತರವಾದ ತ್ಯಾಗವೆಂದೂ ಕರೆಯಲಾಗಿದೆ. ಕೆಲವೊಂದು ಸಾರಿ ಇದು 'ಪುರುಷನ ತ್ಯಾಗ'ವೆಂದು ಕರೆಯಲಾಗಿದೆ. ಆದರೆ, ಇದು ಬಹುತೇಕವಾಗಿ, ಪ್ರಕೃತಿಯ ಪ್ರಳಯಸ್ವರೂಪಿ (ಪೂರ್ಣಾಹುತಿ) ಯಾಗಿರುತ್ತದೆ. ಇದೇ ಈ ದಿವ್ಯಮಾತೆಯ ತ್ಯಾಗವೂ ಆಗಿದೆ.*

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/17 – ಶ್ರೀ ಅರವಿಂದರು**

## ಶ್ರೀಮಾತೆಯ ನಾಲ್ಕು ಮಹತ್ತರ–ವಿಭಾವಗಳು

ಶ್ರೀಮಾತೆಯ ಈ ನಾಲ್ಕು ಮಹತ್ತರವಾದ ವಿಭಾವಗಳು, ಅವಳ ನೇತೃತ್ವದಲ್ಲಿಯೇ ಇರುವ ಅವಳದೇ ಶಕ್ತಿಯ ನಾಲ್ಕು ರೂಪಗಳಾಗಿವೆ. ಇವೇ ನಾಲ್ಕು ಸ್ವರೂಪದಲ್ಲಿಯೇ ಅವಳೆದುರೇ ಅವೆಲ್ಲವೂ ಅಸ್ತಿತ್ವವನ್ನು ಪಡೆದುಕೊಳ್ಳುತ್ತವೆ. ಈ ಲೋಕಕ್ಕೆ ಮಾರ್ಗದರ್ಶನ ಮಾಡಲು ಸ್ಥಿತಗೊಂಡಿವೆ. ಜೊತೆಜೊತೆಗೆ ಈ ಭೌತಿಕ (ಲೌಕಿಕ) ಲೀಲೆಗಳಲ್ಲಿ ಅವಳ ಈ ವ್ಯವಹರಣೆಗಳಲ್ಲಿ ಪ್ರಕಟಗೊಳ್ಳುತ್ತವೆ.

ಅವುಗಳಲ್ಲಿ ಒಂದನೇಯದು, – ಅವಳ ವ್ಯಾಪ್ತಗೊಂಡ ಪ್ರಶಾಂತ ಮತ್ತು ಸಮ್ಮಿಲಿತ ಬುದ್ಧಿಮತ್ತೆ(ಪ್ರಜ್ಞೆ)ಯಾಗಿದ್ದು, ಮತ್ತು ಘನಪ್ರಶಾಂತತೆಯ ಕೃಪಾಗುಣವನ್ನೂ ಹೊಂದಿದೆ. ಹಾಗೂ ಅಕ್ಷಯವಾಗಿರುವ ದಯಾಪರತೆಯನ್ನೂ ಮತ್ತು ಪ್ರಭುತ್ವವನ್ನು, ಅನುಪಮವಾದ ಮಹಿಮೆಯನ್ನು ಹಾಗೂ ಸರ್ವಸ್ವವನ್ನೂ ಸತ್ತಾರೂಢಗೊಳಿಸುವ ಮಹತ್ತರ ಭಾವವನ್ನೂ ಹೊಂದಿದ್ದಾಳೆ.

ಎರಡನೆಯದು, ಅವಳ ಭವ್ಯಾತಿಭವ್ಯವಾದ ಸಾಮರ್ಥ್ಯವನ್ನು ಮತ್ತು ಅಜೇಯವಾದ ಉತ್ಸಾಹವು ಸಾರೂಪ್ಯಗೊಂಡಿದ್ದು, ಅವಳ ಅಪ್ರತಿಮ ಹೋರಾಟದ ಮನೋಭಾವವನ್ನು ಅವಳ ಅಗಾಧದ ಇಚ್ಛೆಯನ್ನು, ಅವಳ ತೀವ್ರ(ತೀಕ್ಷ್ಣ)ವಾದ ಶೀಘ್ರತೆಯನ್ನು ಹಾಗೂ ಇಡೀ ಜಗತ್ತನ್ನೇ ಕಂಪನಗೊಳಿಸುವ ಬಲವಾಗಿದ್ದಾಳೆ.

ಮೂರನೆಯದು, ವಿವಿಧತೆಯ ಹಾಗೂ ಮಧುರಮಯ ಮತ್ತು ಆಶ್ಚರ್ಯಕರವಾಗಿ ಅವಳ ಆ ನಿಗೂಢ ಸೌಂದರ್ಯದ ರಹಸ್ಯದಿಂದ ಮತ್ತು ಮಧುರನಾದಮಯತೆಯಿಂದ ಅವಳ ಸಂಕೀರ್ಣತೆಯ ಮತ್ತು ಸೂಕ್ಷ್ಮಾತಿಸೂಕ್ಷ್ಮ ವೈಭವದ ಸಮೃದ್ಧಿಯನ್ನು, ಅವಳ ಪ್ರಬಲವಾದ ಆಕರ್ಷಣೆ ಮತ್ತು ಮೋಡಿಗೊಳಿಸುವ ಚಿತ್ತಾಕರ್ಷದ ಕೃಪೆಯಾಗಿದ್ದಾಳೆ.

ನಾಲ್ಕನೇಯದಾಗಿ, ಅವಳಲ್ಲಿಯೇ ಅಂತರ್ನಿಹಿತಗೊಂಡಿರುವ ಅಂತರಂಗದ ಘನಿಷ್ಠ ಜ್ಞಾನವಾಗಿದ್ದು, ಮತ್ತು ಎಲ್ಲಿಯೂ ಅಡೆತಡೆಯಿರದ, ಅತ್ಯಂತ ಸುರಕ್ಷತೆಯ ಕಾರ್ಯ ಹಾಗೂ ಸಂಪೂರ್ಣವಾಗಿರುವ, ಸರ್ವ ವಸ್ತು–ವಿಷಯಗಳ ನಿಖರವಾದ ಪರಿಪೂರ್ಣತೆಯಾಗಿದ್ದಾಳೆ. ಬುದ್ಧಿಮತ್ತೆ, ಸಾಮರ್ಥ್ಯ, ಸೌಷಮ್ಯತೆ, ಪರಿಪೂರ್ಣತೆಗಳು ಅವುಗಳ ಹಲವು ಗುಣಧರ್ಮಗಳಾಗಿದ್ದು ಜೊತೆಗೆ ಈ ಎಲ್ಲ ಶಕ್ತಿಗಳೂ ಅವುಗಳೊಡನೆ ಈ ಜಗತ್ತಿಗೆ ಆಗಮಿಸಿವೆ. ಜೊತೆಗೆ ಮಾನವನಲ್ಲಿ ವಿಭೂತಿಪುರುಷನ ಸ್ವರೂಪದಲ್ಲಿ ಆಚ್ಛಾದಗೊಂಡು ಪ್ರಕಟಗೊಳ್ಳುತ್ತಾಳೆ.

ಆ ದೈವತ್ವದ ಹಂತದಲ್ಲಿಯೇ (ಸ್ತರದಲ್ಲಿಯೇ) ಅಧಿರೋಹಗೊಂಡಿರುವ ಸ್ತರದಲ್ಲಿಯೇ ಇದ್ದು, ಯಾವುದು ಮೃಣ್ಮಯದ ಸ್ವರೂಪವನ್ನು ನೇರವಾಗಿ ತೆರೆದುಕೊಳ್ಳುತ್ತದೆಯೋ ಮತ್ತು ಶ್ರೀಮಾತೆಯ ಜೀವನ ಪ್ರೀತಿಯ ಲವಲವಿಕೆಯ/ ಸ್ವಭಾವವು ತೆರೆದುಕೊಳ್ಳುತ್ತಾದೆಯೋ, ಅದೂ ನೇರವಾಗಿಯೇ ತೆರೆದುಕೊಳ್ಳುತ್ತದೆಯೋ ಹಾಗೂ ಅದನ್ನು ಬಳಸಿಕೊಳ್ಳುತ್ತದೆಯೋ, ಇವೇ ಆ ನಾಲ್ಕು ಅಂಶಗಳಾಗಿವೆ. ಈ ನಾಲ್ಕು



ಅಂಶಗಳಿಗೆ ನಾವು ನಾಲ್ಕು ಪ್ರಾಮುಖ್ಯವಾದ ಹೆಸರುಗಳನ್ನು ರೂಪಿಸಿದ್ದೇವೆ; **(1) ಮಹಾಶಕ್ತಿ (2) ಮಹಾಕಾಳೀ (3) ಮಹಾಲಕ್ಷ್ಮೀ (4) ಮಹಾಸರಸ್ವತೀ**

## ಅದಿತಿ; ದಿವ್ಯ ಚೈತನ್ಯ

*ಪರಿಶುದ್ಧತೆ, ನಿಷ್ಕಲಂಕ, ತೇಜಸ್ಸು ತುಂಬಿದ ಶಕ್ತಿಯುತವಾದದ್ದು*

*(ಇದು ಶ್ರೀಮಾತೆಯು ಪುಷ್ಪಕ್ಕೆ ನೀಡಿರುವ ಅಧ್ಯಾತ್ಮಿಕ ಮಹತ್ವ ಹಾಗೂ ವಿವರಣೆಗಳು)*

*ಸಸ್ಯಶಾಸ್ತ್ರೀಯ ಹೆಸರು: ನೆಲುಂಬೋ ನುಸಿಫೆರಾ*'ಅಲ್ಬಾ'



## ಮಾಹೇಶ್ವರೀ

ಮಹಾನ್ ಜಗದ್ಧಾತ್ರಿ ಮಾಹೇಶ್ವರಿಯು, ಚಿಂತನಶೀಲ ಮನೋಭೂಮಿಕೆಗಿಂತ ಮತ್ತು ಇಚ್ಛೆಗಿಂತ ಊರ್ಧ್ವದ ಆ ವ್ಯಾಪ್ತದಲ್ಲಿ ಪೀಠಸ್ಥಳಾಗಿದ್ದಾಳೆ. ಜೊತೆಗೆ ಇವುಗಳನ್ನು ಅವಳು ಮಹತ್ತರಗೊಳಿಸುತ್ತಾಳೆ, ಬೃಹದ್‌ಗೊಳಿಸುತ್ತಾಳೆ. ಅಥವಾ ಅವುಗಳಾಚೆ ವೈಭವದ ಜ್ಯೋತಿಯೊಡನೆ ಧಾರೆಗೊಳ್ಳುತ್ತಾಳೆ. ಅದಕ್ಕಾಗಿ ಅವಳು

ಸಾಮರ್ಥ್ಯಶಾಲಿ ಆಗಿದ್ದು, ಮತ್ತು ಜಾಣ್ಮೆಯಿಂದಲೂ ನಮ್ಮನ್ನು ಈ ಅಧಿಮಾನಸದ ಅನಂತತೆಯಲ್ಲಿ ವ್ಯಾಪ್ತಗೊಳ್ಳುವಂತೆ ಮಾಡುತ್ತಾಳೆ. ಬೃಹದ್–ಶೋಭೆಯ ಆ ಪರಮಜ್ಯೋತಿ ಪ್ರಕಾಶದ ಕಡೆಗೆ ಅದ್ಭುತಾದ್ಭುತದ ಜ್ಞಾನ ಹೊಂದಿರುವ ಭಂಡಾರದ ಆಗರಕ್ಕೆ ಎಡೆಗೆ, ಶ್ರೀಮಾತೆಯ ಶಾಶ್ವತದ ಬಲಗಳು ಚಲಿಸುತ್ತಿರುವ ಎಡೆಗೆ ಕರೆದೊಯ್ಯುತ್ತಾಳೆ.

ಶಿವಸ್ವರೂಪಿ (ಮಂಗಳರೂಪಿ) ಪ್ರಶಾಂತತೆಯು ಅವಳಾಗಿದ್ದಾಳೆ. ಆಶ್ಚರ್ಯಕಾರಕಳೂ ಆಗಿದ್ದಾಳೆ. ಮಹತ್ತಾಗಿ, ಮತ್ತು ಅಷ್ಟೇ ಪ್ರಶಾಂತವಾಗಿ ಎಂದೆಂದಿಗೂ ಇರುತ್ತಾಳೆ. ಇವಳಿಲ್ಲದೇ ಏನೊಂದೂ ಚಲನವನ್ನು ಹೊಂದಲು ಸಾಧ್ಯವೇ ಇಲ್ಲ. ಏಕೆಂದರೆ ಜ್ಞಾನವು (ಬುದ್ಧಿಮತ್ತೆಯು) ಇವಳಲ್ಲಿಯೇ ಇರುತ್ತದೆ. ಇವಳನ್ನು ತಪ್ಪಿಸಿ ಏನನ್ನೂ ಮಾಡಲು ಸಾಧ್ಯವಾಗುವದಿಲ್ಲ. ಇವಳು ಸರ್ವ ವಿಷಯವನ್ನೂ, ಸರ್ವ ಜೀವಿಗಳನ್ನೂ ಹಾಗೂ ಅವುಗಳ ಸ್ವಭಾವವನ್ನು ಮತ್ತು ಯಾವುದು ಇವುಗಳನ್ನು ಸದಾ ಚಲನಶೀಲತೆಯಲ್ಲಿ ಇಡುತ್ತದೆಯೋ ಆ ವಿಶ್ವನಿಯಮ(ನಿಯತಿ)ಯನ್ನು ಸಮಾವಿಷ್ಟಗೊಳಿಸಿಕೊಂಡಿದ್ದಾಳೆ, ಇವುಗಳ ಜೊತೆಗೇ ಇವುಗಳಿಗೆ ನಿಗದಿಗೊಂಡಿರುವ ಅವಧಿ(ದಿನಗಳ) ಹಾಗೂ ಅವುಗಳ ಮೊದಲು ಯಾವ ಸ್ವರೂಪದಲ್ಲಿ ಅಲ್ಲಿ ಇದ್ದವೋ, ಆ ಸ್ವರೂಪವೇ ಈಗಲೂ ಕಡ್ಡಾಯವಾಗಿ ಇರುವಂತೆ ಪರಿಗ್ರಹಿಸುತ್ತಾಳೆ.

ಪರಿಪೂರ್ಣ ಸಾಮರ್ಥ್ಯವೊಂದು ಅವಳಲ್ಲಿ ಇದ್ದು, ಇದು ಎಲ್ಲವನ್ನೂ ಸಂಪರ್ಕಿಸುತ್ತದೆ. ಎಲ್ಲವನ್ನೂ ಪ್ರಬುದ್ಧಗೊಳಿಸುತ್ತದೆ. ಅವಳ ಆ ಅದೃಶ್ಯ ರೂಪದಲ್ಲಿಯೇ ಇರುವ ಅಪಾರ ಪ್ರಜ್ಞೆಯಿಂದ ಯಾವುದೂ ನುಣುಚಿಕೊಳ್ಳದಂತೆ (ತಪ್ಪಿಸಿಕೊಳ್ಳದಂತೆ) ಹಾಗೂ ಮಹಾಮಹಿಮೆಯ ಪ್ರಶಾಂತತೆಯಿಂದ ನುಣುಚಿ–ಕೊಳ್ಳದಂತೆ ಕಾಪಿಡುತ್ತದೆ. ಸಮಾನತೆ, ಸಹನೆ ಹಾಗೂ ವಿಚಲನೆಗೊಳ್ಳದಂತೆ ಅವಳ ಇಚ್ಛೆಯಲ್ಲಿಯೇ ಇವೆಲ್ಲವು ಅಂತರ್ಗತಗೊಂಡಿವೆ. ಅವಳು ಮಾನವರೊಡನೆ, ವಸ್ತುಗಳೊಡನೆ ಆಯಾ ಸ್ವಭಾವಕ್ಕೆ ಅನುಗುಣವಾಗಿಯೇ ವ್ಯವಹರಿಸುತ್ತಾಳೆ. ಅದರಿಂದ ಆಯಾ ಆಯಾ ಸ್ವಭಾವಗಳೂ ಸಹಿತ ಆಯಾ ಆಯಾ ಶಕ್ತಿಯನ್ನು ಅವಲಂಬಿಸಿಕೊಂಡೇ ರೂಪಿತಗೊಳ್ಳುತ್ತವೆ. ಅದರಲ್ಲೂ ಅಲ್ಲಿರುವ ಆ ಸತ್ಯದ ಪ್ರಕಾರವಾಗಿಯೇ ಅದು ಪ್ರಕಟಗೊಳ್ಳುತ್ತದೆ.

ಹಾಗೆ ನೋಡಿದರೆ ಅಂಶಿಕವಾಗಿ ಅವಳು ಏನೂ ಅಲ್ಲ. ಆದರೆ ಅವಳು ಆ ಪರಾತ್ಪರದ ನಿರ್ಣಯಗಳನ್ನು ಅನುಸರಿಸುತ್ತಾಳೆ. ಆ ಮೂಲಕ ಕೆಲವು

ಅಂಶಗಳನ್ನು ಊರ್ಧ್ವಮುಖಗೊಳಿಸುತ್ತಾ ಮತ್ತೆ ಕೆಲವನ್ನು ಅವರೋಹಣಕ್ಕೆ ಒಳಪಡಿಸುತ್ತಾಳೆ. ಇಂತಹ ಅವರೋಹಣಗೊಂಡ ವಿಷಯಗಳು ತನ್ನಿಂದ ದೂರವೇ ಇರುವಂತೆ ಅ ತಮದ ಕಡೆಗೆ ತಳ್ಳುತ್ತಾಳೆ. ಯಾವುದು ಜಾಣ್ಮೆಯಿಂದ (ಶುಭದಿಂದ) ಕೂಡಿರುತ್ತದೆಯೋ ಅದಕ್ಕೆ ಮತ್ತೂ ಉಜ್ವಲವಾದ ಕಾಂತಿಮಯ ಪ್ರಜ್ಞೆಯನ್ನು ಒದಗಿಸುತ್ತಾಳೆ. ಯಾರು ಕನಸನ್ನು (ವಿಜನ್) ಹೊಂದಿದ್ದಾರೆಯೋ ಅವರ ಆ ದೃಷ್ಟಿಕೋನವನ್ನು ಅವಳ ಚಿಂತನಕ್ಕೆ ಒಳಪಡಿಸಿಕೊಂಡು ಹರಸುತ್ತಾಳೆ. ಪ್ರತಿಕೂಲ ಸಂದರ್ಭಗಳು ಇದ್ದಲ್ಲಿ ಅವಳು ಅವರದೇ ಆದ ವಿರೋಧ ಭಾವವನ್ನೇ ಹೇರುತ್ತಾಳೆ. ಅಜ್ಞಾನಿಯಾಗಿದ್ದಲ್ಲಿ, ಮತ್ತು ಮೂರ್ಖತನದಿಂದ ಕೂಡಿದ್ದಲ್ಲಿ, ಅವಳು ಅವರ ಆಯಾ ಅಂಧತ್ವ ಗ್ರಹಿಕೆಯ ಪ್ರಕಾರವೇ ಅವರನ್ನು ಕರೆದೊಯ್ಯುತ್ತಾಳೆ. ಪ್ರತಿಯೊಬ್ಬ ಮಾನವ ಜೀವಿಯಲ್ಲಿಯೂ ಅವಳು ಉತ್ತರದಾಯಿತ್ವವನ್ನು ಹೊಂದಿದ್ದು, ಅವರ ಸ್ವಭಾವದ ವಿಭಿನ್ನ ನೆಲೆಯ ಅಂಶಗಳನ್ನು ಅವರವರ ಬಯಕೆಯಂತೆ ಅವರವರ ಬೇಡಿಕೆಯಂತೆ ಹಾಗೂ ಅವರವರ ತುಡಿತದಂತೆಯೇ ಒಪ್ಪಿ, ಅವರು ಯಾವ ಸ್ತರದಲ್ಲಿ ಕರೆಯುತ್ತಿದ್ದಾರೆಯೋ, ಅದೇ ರೀತಿಯಲ್ಲಿ ಅವರಿಗೆ ಲಭ್ಯವಾಗುತ್ತಾಳೆ. ಅವರ ಮೇಲೆ ಅವಶ್ಯವಿದ್ದ ಒತ್ತಡವನ್ನೂ ಹಾಕುತ್ತಾಳೆ, ಅಥವಾ ಅವರನ್ನು ಅವರದೇ ಆದ ವ್ಯಕ್ತಿತ್ವದಲ್ಲಿಯೇ ವಿಕಾಸಗೊಳಿಸಿಕೊಂಡಿರುವ ಸ್ವಾತಂತ್ರ್ಯದಲ್ಲಿಯೇ, ಅಜ್ಞಾನದಲ್ಲಿದ್ದ ಪಥದಿಂದ ಮುಕ್ತರಾಗಲು ಅವರದೇ ಪಥದಲ್ಲಿ ಪ್ರವೃದ್ಧರಾಗುವಂತೆ ಮಾಡುತ್ತಾಳೇ, ಇಲ್ಲವೇ ಅಲ್ಲಿಯೇ ಕರಗಿ ಹೋಗುವಂತೆ ಮಾಡುತ್ತಾಳೆ.

ಅದಕ್ಕಾಗಿಯೇ ಅವಳು ಸದಾ ಊರ್ಧ್ವದಲ್ಲಿಯೇ ಇರುತ್ತಾಳೆ. ಯಾವುದೂ ಅವಳನ್ನು ಬಂಧನಕ್ಕೆ ಒಳಪಡಿಸಿಲ್ಲ; ಯವುದಕ್ಕೂ ಅವಳು ಈ ವಿಶ್ವದ ಯಾವುದಕ್ಕೂ ಅವಳು ಮಮಕಾರವನ್ನು ಹೊಂದಿಲ್ಲ (ನಿರ್ಗುಣಳಾಗಿದ್ದಾಳೆ). ಆದಾಗ್ಯೂ ಸಹಿತ, ಅವಳು ವಿಶ್ವಮಾತೆಯ ಹೃದಯಕ್ಕಿಂತಲೂ ಪ್ರಮುಖವಾದ ಹಂತದಲ್ಲಿ ಇದ್ದಾಳೆ. ಅವಳಿಗೆ ಈ ಎಲ್ಲ ಆತ್ಮೀಯತೆಯು ಯಾವಾಗಲೂ ಅನಂತವಾಗಿವೆ. ಎಂದಿಗೂ ಕರಗಿ ಹೋಗುವದಿಲ್ಲ. ಈ ಎಲ್ಲವೂ ಅವಳಿಗೆ ಅವಳ ಸಂತತಿಯಂತೆಯೇ ಇದ್ದು, ಅವೆಲ್ಲವೂ ಆ "ಏಕತ್ವದ" ಅಂಶಗಳೇ ಆಗಿವೆ. ಅಸುರರಾಗಲಿ, ಪಿಶಾಚಗಳಾಗಲಿ ಅಥವಾ ರಾಕ್ಷಸರಾಗಲಿ ಅವರೂ ಸಹಿತ ಎಷ್ಟೇ ವಿರೋಧವನ್ನು ಹೊಂದಿದ್ದರೂ ಸಹಿತ ಅವಳ ಅಂಶವಾಗಿಯೇ ಇರುತ್ತಾರೆ. ಅವರ ಆ ರೀತಿಯ ತಿರಸ್ಕಾರ ಮತ್ತು ದ್ವೇಷಗಳು ಕೇವಲ ಫಲಿತಾಂಶದ ಮುಂದೂಡಿಕೆಯಾಗಿರುತ್ತದೆಯೇ ವಿನಾ ಬೇರೆ ಏನೂ ಇಲ್ಲ. ಅಲ್ಲದೇ ಅವಳು ಕೊಡುವ ಶಿಕ್ಷೆಯೂ ಸಹಿತ ಒಂದು

ಕೃಪೆಯಂತೆಯೇ ಇರುತ್ತದೆ, ಆದರೆ ಅವಳ ಕರುಣೆ (ಸಾನುಕಂಪವು) ಎಂದಿಗೂ ಅವಳ ಜಾಣ್ಮೆಯ ದೃಷ್ಟಿಯಿಂದ ದೂರವಿರುವದಿಲ್ಲ. ಅಥವಾ ಅವಳ ಕ್ರಿಯೆಗಳು ನಿಗದಿಗೊಳಿಸಲ್ಪಟ್ಟ ಆದೇಶದಿಂದ ವಿಚಲನೆ ಹೊಂದುವದಿಲ್ಲ. ಸರ್ವವಸ್ತುಗಳ ಪರಮಸತ್ಯಕ್ಕೆ ಎಲ್ಲವೂ "ಏಕತ್ವವನ್ನೇ" ಹೊಂದಿವೆ. ಅವಳ ಜ್ಞಾನದ ಶಕ್ತಿಯ ಕೇಂದ್ರದಲ್ಲಿಯೇ ಅದು ಇದ್ದು, ನಮ್ಮ ಆತ್ಮದ ಸಂರಚನೆಗೆ ಹಾಗೂ ನಮ್ಮ ಸ್ವಭಾವವು ಆ ದಿವ್ಯ–ಸತ್ಯದ ಜೊತೆಗೆ ಮೇಳೈಸುವಂತೆ ಮಾಡುತ್ತಾಳೆ. ಈ ದಿವ್ಯ ಸತ್ಯವೇ ಅವಳ ಯೋಜನೆಯೂ ಹೌದು ಹಾಗೂ ಅವಳ ಶ್ರಮವೂ ಹೌದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/18–19**



**ಮಹಾಕಾಳೀ**

ಮಹಾಕಾಳೀ ಎನ್ನುವದು ಅವಳ ಇನ್ನೊಂದು ವಿಭಾವವಾಗಿದೆ. ಇದು ವ್ಯಾಪ್ತವಾಗಿಲ್ಲ. ಆದರೆ ಔನ್ನತ್ಯವನ್ನು ಹೊಂದಿದೆ. ಜಾಣ್ಮೆಯನ್ನೂ ಹೊಂದಿರಲಿಕ್ಕಿಲ್ಲ ಆದರೆ ಅವಳದೇ ಆದ ವಿಶಿಷ್ಟ ಶಕ್ತಿಯ ಬಲವನ್ನು ಹಾಗೂ ಸಾಮರ್ಥ್ಯವನ್ನು ಹೊಂದಿದೆ. ಇಲ್ಲಿ ಅವಳ ಅಪ್ರತಿಹತವಾದ (ಪ್ರಬಲವಾದ) ಗಾಢತೆ ಇದೆ. ಮಹಾಬಲಶಾಲಿಯಾದ ಗಭೀರತೆಯೂ ಇದೆ. ಸಾಧಿಸಿಕೊಳ್ಳಬೇಕಾದ ಶಕ್ತಿಯ ಮಹಾಸಾಮರ್ಥ್ಯಶಾಲಿಯಾದ ಗಭೀರಾಸಕ್ತಿ ಇದಾಗಿದೆ. ಒಂದು ದಿವ್ಯತ್ವ ತುಂಬಿದ ಹಿಂಸೆಯೂ ಇಲ್ಲಿ ಇದ್ದು, ಉತ್ಪಾತವೂ ಇದೆ. ಅದು ಎಲ್ಲ ಅಡೆ ತಡೆಗಳನ್ನು ಹಾಗೂ ಬಂಧನಗಳನ್ನು ಕಿತ್ತೆಸೆದು ಆಗಮಿಸಬಲ್ಲುದು. ಅವಳ ಈ ಸರ್ವ ದಿವ್ಯತೆಯೂ ಪ್ರಕ್ಷುಬ್ಧತೆಯ ರಭಸದೊಂದಿಗೇ ಅತ್ಯುಜ್ವಲವಾಗಿಯೇ ಪ್ರಖರಗೊಳ್ಳುತ್ತದೆ. ಹೀಗಾಗಿ

ಅವಳು ತೇಜತ್ವಕ್ಕೆ (ವೇಗಕ್ಕೆ) ಕಾರಣಳಾಗಿದ್ದಾಳೆ. ತತ್‌ಕ್ಷಣದಲ್ಲಿ ಪರಿಣಾಮಕಾರೀ ಪ್ರಕ್ರಿಯೆಯಾಗಿಸಬಲ್ಲಳು. ತೀವ್ರಾತಿತೀವ್ರ ಹಾಗೂ ನೇರಾನೇರವಾಗಿಯೇ ಅಪ್ಪಳಿಸುತ್ತಾಳೆ. ಈ ಮೊದಲು ಅಸ್ತಿತ್ವದಲ್ಲಿ ಇದ್ದುದೆಲ್ಲವನ್ನೂ ತನ್ನ ಸಮಕ್ಷಮದಲ್ಲಿಯೇ ಧ್ವಂಸಗೊಳಿಸುತ್ತಾಳೆ. ಅಸುರರಿಗೆ ಅವಳು ಭಯವಹ ಮುಖಮುದ್ರೆಯಲ್ಲಿದ್ದಾಳೆ. ದೈವತ್ವವನ್ನು ವಿರೋಧಿಸುವವರಿಗೆ ಭಯಂಕರಳೂ ಮತ್ತು ನಿರ್ದಯಳೂ ಆಗಿದ್ದಾಳೆ. ಸಂಗ್ರಾಮದಿಂದ ಎಂದಿಗೂ ಹಿಂದೆ ಸರಿಯದ ಜಗದೇಕವೀರತ್ವ ಹೊಂದಿದ ಯೋಧಾ ಆಗಿದ್ದಾಳೆ. ಅಸಹನೆಯಲ್ಲಿ (ಅಶಾಂತಿಯಲ್ಲಿ) ಹಾಗೂ ಅಪರಿಪೂರ್ಣತೆಯಲ್ಲಿ ಯಾರು ಆಸಕ್ತಿ ಹೊಂದಿದ್ದಾರೆಯೋ ಅವರಿಗೂ ಅವಳು ಜೊತೆಯಾಗಿಯೇ ಇರುತ್ತಾಳೆ. ಯಾವುದು ಅಜ್ಞಾನದ ಹಠಮಾರಿತನದಿಂದ ಕೂಡಿದೆಯೋ ಅದಕ್ಕೂ ಅವಳು ಸೇವೆಯನ್ನು ನೀಡುತ್ತಾಳೆ. ಅಲ್ಲದೇ ವಿಶ್ವಾಸಘಾತಕತನಕ್ಕೆ ಘಟನೆಗಳಿಗೆ ತಕ್ಷಣದಲ್ಲಿಯೇ ಅವಳಲ್ಲಿ ಈ ಕಡುಕೋಪವು ರೂಪಣೆಗೊಳ್ಳುತ್ತದೆ. ದುರೇಚ್ಛೆ ಇದ್ದಲ್ಲಿ ಅಲ್ಲಿಯೇ ಅವಳ ಆ ತೀಕ್ಷ್ಣವಾದ ಚಾಟಿಯಿಂದ ತಕ್ಷಣವೇ ಪ್ರಹಾರ ಮಾಡುತ್ತಾಳೆ. ದೈವೀ ಕಾರ್ಯದಲ್ಲಿ ನಿರ್ಲಕ್ಷ್ಯವನ್ನು ಮತ್ತು ಸೋಮಾರಿತನವನ್ನು ಅವಳು ಎಂದಿಗೂ ಸಹಿಸುವದಿಲ್ಲ. ಅವಳು ಅತ್ಯಂತ ತೀವ್ರತರವಾದ ಯಾತನೆಯನ್ನು ನೀಡುವ ಮೂಲಕವೇ ಎಚ್ಚರಿಕೆಯನ್ನೂ ಕೊಡುತ್ತಾಳೆ. ಅದರಲ್ಲೂ ಸೋಮಾರಿಯಾದವರಿಗೆ ಹಾಗೂ ಚಂಚಲ ಮನೋಭಾವ ಹೊಂದಿದವರಿಗೆ ಶಿಕ್ಷೆ ನೀಡುತ್ತಾಳೆ. ಈ ಉತ್ತೇಜನಾ ಪ್ರವೃತ್ತಿಗಳು ಯಾವಾಗಲೂ ತೀವ್ರ ವೇಗದಲ್ಲಿಯೇ ಇದ್ದು, ನೇರಾನೇರವಾಗಿಯೇ ಘಟಿಸುತ್ತವೆ ಮತ್ತು ಮುಕ್ತ ಭಾವವನ್ನೂ ಹೊಂದಿವೆ. ಅಲ್ಲಿನ ಚಲನವಲನಗಳು ಎಂದಿಗೂ ನಿರ್ವಿಶೇಷತ್ವದಲ್ಲಿಯೇ ಮತ್ತು ನಿಃಶೇಷದಲ್ಲಿಯೇ ಇರುತ್ತವೆ. ಅಗ್ನಿಯ ಜ್ವಾಲೆಗಳಲ್ಲಿ ಅಭೀಪ್ಸೆಯು ಶಿಖರಸದೃಶವಾಗಿಯೇ ಇದ್ದು, ಇದೇ **“ಮಹಾಕಾಳಿಯ”** ಸಂಚಲನವೂ ಆಗಿದೆ.

ಅವಳ ಶಕ್ತಿಯನ್ನು ನಿಯಂತ್ರಿಸಲು ಅಸಾಧ್ಯವಾಗಿದೆ. ಅವಳ ದೃಷ್ಟಿಕೋನ ಮತ್ತು ಅವಳ ಇಚ್ಛೆ ಯಾವಾಗಲೂ ಉದಾತ್ತವಾಗಿಯೇ ಇದ್ದು, ಮತ್ತು ಅದು ಗರುಡನ ರೀತಿಯಲ್ಲಿ ಸದಾ ತುರೀಯವನ್ನು ತಲುಪುವ ಉಡ್ಡಯನದಂತೆಯೇ ಇರುತ್ತದೆ. ಅವಳ ಪಾದಗಳು ಅತ್ಯಂತ ತೀವ್ರಗತಿಯಲ್ಲಿ ಇದು ಸದಾ ಊರ್ಧ್ವಮುಖೀ ಪಥದಲ್ಲಿರುತ್ತವೆ. ಅವಳ ಬಾಹುಗಳು ಸದಾ ತೆರೆದುಕೊಂಡೇ ಇದ್ದು, ಅಪ್ಪಳಿಸಲು ಮತ್ತು ಜೊತೆಗೆ ಕರುಣಾಪೂರಿತ ಭಾವದಿಂದ ರಕ್ಷಿಸಲು ಸಿದ್ಧಗೊಂಡೇ ಇರುತ್ತವೆ. ಅದಕ್ಕಾಗಿ ವಿಸ್ತಾರಗೊಂಡೇ ಇರುತ್ತವೆ. ಅದಕ್ಕಾಗಿಯೇ ಅವಳು ಶ್ರೀಮಾತೆಯೂ

ಆಗಿದ್ದಾಳೆ. ಅವಳ ಪ್ರೇಮವೂ ಸಹಿತ ಅವಳ ಸಂತೋಷದಂತೆಯೇ ತೀಕ್ಷ್ಣವಾಗಿಯೇ ಇರುತ್ತದೆ. ಅವಳು ಅತ್ಯಂತ ಗಾಢವಾದ ಅನುರಾಗಪೂರ್ಣ ದಯಾಳುತನವನ್ನು ಹೊಂದಿದ್ದಾಳೆ. ಯಾವಾಗ ಅವಳು ಅವಳ ಸಾಮರ್ಥ್ಯಧಲ್ಲಿ ತನ್ನನ್ನು ಅಳವಡಿಸಿಕೊಳ್ಳಲು ಇಚ್ಛಿಸುತ್ತಾಳೆಯೋ, ಆಗ ಒಂದು ಕ್ಷಣದಲ್ಲಿಯೇ ಸರ್ವಸ್ವವೂ ಧ್ವಂಸಗೊಳ್ಳುತ್ತದೆ. ಅಲ್ಲಿ ಬೇರೆ ಯಾವುದೇ ಪ್ರತಿರೋಧವೂ ಇರುವದಿಲ್ಲ. ಯಾವುದೇ ಅಡೆತಡೆಗಳಿಗೂ ಅಲ್ಲಿ ಅವಕಾಶವೇ ಇರುವದಿಲ್ಲ. ಅಥವಾ ಅಲ್ಲಿ ಯಾವುದೇ ಆಕ್ರಮಣಕಾರೀ ಶತ್ರುಗಳೂ ಸಹಿತ ನೋಡಲೂ ಸಿಗುವದಿಲ್ಲ.

ಒಂದು ವೇಳೆ ಅವಳ ಕೋಪವು ಶತ್ರುಗಳಿಗೆ ಧ್ವಂಸಾತ್ಮಕವಾಗಿ ಮತ್ತು ಒತ್ತಡವೂ ಸಹಿತ ತೀಕ್ಷ್ಣಾತಿತೀಕ್ಷ್ಣದಲ್ಲಿಯೇ ಯಾತನಾಮಯವಾಗಿದ್ದರೂ ಸಹಿತ, ಅವಳು ಎಲ್ಲರಿಂದಲೂ ಸದಾ ಭಯ–ಭಕ್ತಿಯಿಂದಲೇ ಆರಾಧನೆಗೊಳ್ಳುತ್ತಿದ್ದಾಳೆ. ಅವಳು ಪರಾಕ್ರಮಶಾಲಿಯಾಗಿಯೂ, ಸಾಮರ್ಥ್ಯಶಾಲಿಯಾಗಿಯೂ ಮತ್ತು ಪವಿತ್ರಳಾಗಿಯೂ ಆರಾಧಿಸಲ್ಪಡುತ್ತಾಳೆ. ಅದಕ್ಕಾಗಿ ಅವರ ಭೌತಿಕಾವಸ್ಥೆಯಲ್ಲಿ ವಿದ್ರೋಹಕಾರಕವಾಗಿಯೇ ಇರುವದರಿಂದ, ಅದು ಪರಿವರ್ತಗೊಂಡು, ಪರಿಪೂರ್ಣ ಸತ್ಯದ ಸ್ವರೂಪಕ್ಕೆ ಪರಿವರ್ತಗೊಳಿಸುವಲ್ಲಿ, ಅವಳ ಆ ಅಬ್ಬರಗಳ, ಮತ್ತು ಅಪ್ಪಳಿಸುವಿಕೆಯ ಮೂಲಕವೇ ದೊರೆಯುತ್ತಿರುವ ಅವಳ ತೀಕ್ಷ್ಣಾತಿ ತೀಕ್ಷ್ಣವಾದ ಕೃಪೆ ಎಂದೇ ಸ್ವೀಕರಿಸುತ್ತಾರೆ. ಯಾವುದು ವಿಕೃತವಾಗಿದೆಯೋ ಅದನ್ನು ನೇರಗೊಳಿಸಲು ಬಲವಾದ ಸುತ್ತಿಗೆಯಿಂದ ಪ್ರಹಾರ ಮಾಡುತ್ತಾಳೆ. ಯಾವುದು ಅಶುದ್ಧವಾಗಿದೆಯೋ ಅಥವಾ ದೋಷಪೂರಿತಗೊಂಡಿದೆಯೋ, ಅದನ್ನು ಪರಿಷ್ಕರಿಸಿ ಪರಿಶುದ್ಧಗೊಳಿಸಿ ಸಲಹುತ್ತಾಳೆ.

ಆದರೆ ಯಾವುದು ಅವಳಿಂದ ಒಂದೇ ದಿನದಲ್ಲಿ ಘಟಿಸಿದೆಯೋ, ಅದು ತಾನು ಆ ಸ್ವರೂಪ ಪಡೆದುಕೊಳ್ಳುವಲ್ಲಿ ಸುದೀರ್ಘಾವಧಿಯನ್ನೆ ತೆಗೆದುಕೊಂಡಿತ್ತು. ಅವಳ 'ಆನಂದ'ವಿಲ್ಲದೇ ಯಾವುದು ಎಷ್ಟೇ ವಿಶಾಲವಾಗಿದ್ದರೂ ಮತ್ತು ಗುರುತರ–ವಾಗಿದ್ದರೂ ಅಥವಾ ಮೃದುತ್ವವನ್ನು ಹೊಂದಿದ್ದರೂ, ಮಧುರತೆಯಿಂದ ತುಂಬಿಕೊಂಡಿದ್ದರೂ ಅವಳ 'ಆನಂದದ' ಕೃಪೆ ಇಲ್ಲದೇ ತೋಷದ ಮನಮೋಹಕವಾದ ಕಾಂತಿಜ್ವಾಲೆಗಳು ಬೆಳಗುವದಿಲ್ಲ. ಅದರಲ್ಲೂ ಆ ನಿರ್ವಿಶೇಷತ್ವದ ಆಂತರ್ಯದ ಕೃಪೆಯಿಲ್ಲದೇ ಇವು ಕಾಂತಿಮಯತೆಯಲ್ಲಿ ಶಿಖರಪ್ರಾಯ ತಾಳುವದಿಲ್ಲ.

ಸದಾ ವಿಜಯಶಾಲಿಯಾಗುವಂತಹ ಸಾಮರ್ಥ್ಯವನ್ನು ಅವಳು ಜ್ಞಾನಕ್ಕೆ ನೀಡುತ್ತಾಳೆ. ಸೌಂದರ್ಯವನ್ನು ಹಾಗೂ ಸೌಷಮ್ಯವನ್ನು ಒಂದು ಉನ್ನತೋನ್ನತ

ಹಂತಕ್ಕೆ ತರುತ್ತಾಳೆ. ಅತ್ಯಂತ ನಿಧಾನಗತಿಯ ಪ್ರಯತ್ನಗಳಿಗೆ ಸೂಕ್ತ ಸಂಚಲವನ್ನು ಹಾಗೂ ಕಠಿಣ ಶ್ರಮಗಳಿಗೆ, ಕಷ್ಟಗಳಿಗೆ ಹಾಗೂ ಸಾಧನೆಗೆ ಪರಿಪೂರ್ಣತೆಯ ನಂತರದಲ್ಲಿ ಚಂಡಪ್ರಚಂಡತೆಯಲ್ಲಿ ಅವಳು ಶಕ್ತಿಯನ್ನು ಬಲವನ್ನು ದ್ವಿಗುಣ–ಗೊಳಿಸುತ್ತಾಳೆ. ಅದನ್ನು ಸಾಧಿಸಲು ಬೇಕಾಗಿದ್ದ ಬಲು ದೀರ್ಘಾವಧಿಯನ್ನು ಕಡಿಮೆ ಮಾಡುತ್ತಾಳೆ.

ಆ ಪರಮೋಚ್ಚವಾದ ಪ್ರಹರ್ಷದ ತುರೀಯಾವಸ್ಥೆಯಿಲ್ಲದೇ ಇಲ್ಲಿ ಯಾವುದೂ ಅವಳನ್ನು ತೃಪ್ತಿ ಪಡಿಸಲು ಸಾಧ್ಯವೇ ಇಲ್ಲ. ಊರ್ಧ್ವಾತಿಊರ್ಧ್ವಗಳ, ಪರಮಾತಿಪರಮ ಪಾವಿತತ್ರ್ಯ ಹೊಂದಿದ ಗುರಿಗಳ ಹಾಗೂ ಅತ್ಯಂತ ವ್ಯಾಪ್ತವಾದ ವಿಸ್ತಾರ ಪಥವಿಲ್ಲದೇ ಇದ್ದರು ಅವಳನ್ನು ತೃಪ್ತಿ ಪಡಿಸಲು ಸಾಧ್ಯವಿಲ್ಲ. ಆದ್ದರಿಂದ ಅವಳೊಡನೆ ಸದಾ ಆ ದೇವರ ವಿಜಯಶಾಲೀ ಬಲವೇ ಇದ್ದು, ಮತ್ತು ಅದೂ ಸಹಿತ ಅವಳ ಕೃಪೆಯಿಂದಲೇ, ಸಾನುಕಂಪನದ ಜ್ವಾಲಾಗ್ನಿಯಿಂದಲೇ ಮತ್ತು ಮಹೋನ್ನತವಾದ ಸಾಧನೆಯತ್ತ ವೇಗವಾಗಿಯೇ ಸಾಗುತ್ತಿದ್ದು, ಈ ಕ್ಷಣದಿಂದಲೇ ಘಟಿಸಲಿರುವ ಸಾಧನೆಗಳಾಗಿರುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/19–20**



## ಮಹಾಲಕ್ಷ್ಮೀ

ಪ್ರಜ್ಞಾನ ಮತ್ತು ಶಕ್ತಿಗಳು ಮಾತ್ರವೇ ಈ ಪರಾಶಕ್ತಿಯ ಅಭಿವ್ಯಕ್ತಿಗಳಾಗಿಲ್ಲ. ಅಲ್ಲಿ ಅವಳ ಸ್ವಭಾವದ ಸೂಕ್ಷ್ಮ ಮಾಯೆಯೂ ಇದೆ. ಅದಿಲ್ಲದೇ ಈ ಪ್ರಜ್ಞಾನ ಮತ್ತು ಶಕ್ತಿಗಳು ಅಪರಿಪೂರ್ಣದ ವಸ್ತುಗಳಾಗುತ್ತವೆ. ಇದರ ಪರಿಪೂರ್ಣತೆಯು

ಇಲ್ಲದೇ ಪರಿಪೂರ್ಣತೆಯೂ ಸಾಧ್ಯವಾಗುವದಿಲ್ಲ. ಇವುಗಳಿಗಿಂತ ಮುಖ್ಯವಾಗಿ, ಆ ಶಾಶ್ವತ ಸೌಂದರ್ಯದ ಅದ್ಭುತಾದ್ಭುತವೂ ಒಂದು ಇದೆ. ಎಂದಿಗೂ ಗ್ರಹಿಸಲಾಗದ ದಿವ್ಯ ಸೌಷಮ್ಯದ ರಹಸ್ಯವೊಂದಿದೆ. ವಿಶ್ವ ಸೌಂದರ್ಯದ ಅನಿವಾರ್ಯತೆಯ ಸಂಯೋಗದ ಮಾಯೆಯೂ (ಲೀಲೆಯೂ) ಬಲಗಳನ್ನು ಪಡೆದುಕೊಂಡು, ಜೀವಗಳಲ್ಲಿ ಒಂದನ್ನೊಂದು ಹೊಂದಿಕೊಂಡು ಹಾಗೂ ಪರಸ್ಪರ ಭೇಟಿಯಾಗುವದನ್ನು ಸಂಪೂರ್ಣ ಒಪ್ಪಿಕೊಂಡು (ಬಾಧ್ಯಸ್ಥಗೊಳಿಸಿ–ಕೊಂಡು) ಮತ್ತು ಇವೆಲ್ಲವುಗಳ ಹಿಂದೆ ಒಂದು ಗೂಢವಾದ ರಹಸ್ಯವಾಗಿರುವ ಆನಂದವೊಂದು ತನ್ನ ಲೀಲೆಯನ್ನು ತೋರುತ್ತಿದೆ. ಅದು ಪರದೆಯ ಹಿಂದೆಯೇ ಇದ್ದುಕೊಂಡೇ ನಾದಮಯತೆಯಲ್ಲಿ ಹಾಗೂ ರೂಪಗಳನ್ನು ಸಿದ್ಧಗೊಳಿಸುತ್ತದೆ.

ಇದು ಮಹಾಲಕ್ಷ್ಮಿಯ ಶಕ್ತಿಯಾಗಿದೆ. ಇಲ್ಲಿ ರೂಪುಗೊಂಡಿರುವ ಜೀವಗಳ ಹೃದಯಕ್ಕೆ ಆಕರ್ಷಣೀಯವಾಗಿರುವ ಆ ದೈವೀ ಶಕ್ತಿಯ ಯಾವುದೇ ಭಾವವೂ (ಆಯಾಮವೂ) ಇರುವದಿಲ್ಲ. ಏಕೆಂದರೆ **ಮಾಹೇಶ್ವರಿ**ಯು ತುಂಬ ಪ್ರಶಾಂತಳಾಗಿಯೇ ದೃಷ್ಟಗೊಳ್ಳುತ್ತಾಳೆ. ಮಹತ್ತಮವಾಗಿ ಮತ್ತು ಈ ಮೃಣ್ಮಯದಿಂದ ಅವಳನ್ನು ತಲುಪಲು, ಅವಳಲ್ಲಿ ಶರಣಾಗತಿ ಹೊಂದಲು ಬೇಕಾದ ಭಾವಗಳ ಕ್ಷೀಣ ಪ್ರಭಾವದಿಂದ ಅವಳು ದೂರದೂರವಾಗಿಯೇ ಇರುತ್ತಾಳೆ. ಇನ್ನು **ಮಹಾಕಾಳಿಯಾದರೋ** ಅಶಕ್ತತನಕ್ಕೆ ಎಂದಿಗೂ ಅವಳು ಧಾರಣಕ್ಕೆ ಸಿಗದೆ ಇರುವಂತಹ ತೀವ್ರತೆಯನ್ನು ಹೊಂದಿದ್ದಾಳೆ. ಭಯಾವಹಳೂ ಆಗಿದ್ದಾಳೆ. ಆದರೆ ಇವರೆಲ್ಲರೂ ತೋಷದಲ್ಲಿ ಪರಿವರ್ತಗೊಂಡು **ಮಹಾಲಕ್ಷ್ಮಿಯ**ಲ್ಲಿ ಸಾರೂಪ್ಯ ಪಡೆದುಕೊಳ್ಳುತ್ತಾರೆ. ಅದಕ್ಕಾಗಿಯೇ ಇವಳು ದಿವ್ಯತ್ವದ ಮಾದಕಮಯ ಮೋಹಪೂರಿತ ಮಧುರತೆಯನ್ನು ಧಾರಾಕಾರಗೊಳಿಸುತ್ತಾಳೆ. ಅವಳಿಗೆ ಅತ್ಯಂತ ಆತ್ಮೀಯವಾಗುವಷ್ಟು ಸಾಮೀಪ್ಯಗಳಿಸಿಕೊಳ್ಳುವದೇ ಅತ್ಯಂತ ಪ್ರಮುಖವಾದ ವಿಷಯವಾಗಿದೆ. ಅವಳನ್ನು ಹೃತ್ಪೂರ್ವಕವಾಗಿಯೇ ಅನುಭಾವಿಸಿಕೊಳ್ಳುವದೂ ಒಂದು ಚಿತ್ತಾಕರ್ಷಕ ಹಾಗೂ ಮನಮೋಹಕವಾದ ಅಸ್ತಿತ್ವವಾಗಿದೆ. ಕೃಪೆ ಮತ್ತು ಸೌಂದರ್ಯಗಳು ಹಾಗೂ ಮಾರ್ದವತೆಗಳು, ಸೂರ್ಯನಿಂದ ಪ್ರಜ್ವಲಿಸುತ್ತಿರುವ ಕಿರಣಗಳಂತೆಯೇ ಪ್ರಶಾಂತವಾಗಿಯೇ ಆಗಮಿಸುವ ಧಾರೆಗಳಾಗಿವೆ. ಯಾವಾಗ ಯಾವಾಗ ಅವಳು ತನ್ನ ದೃಷ್ಟಿಯನ್ನು ಹರಿಸುತ್ತಾಳೆಯೋ, ಮತ್ತು ಯಾವಾಗ ತನ್ನ ಮಂದಸ್ಮಿತದ ಮೂಲಕ ಪ್ರೇಮವನ್ನು ನೀಡುತ್ತಾಳೆಯೋ, ಆಗ, ಆತ್ಮವು ಸಂಪೂರ್ಣವಾಗಿ ಅಲ್ಲಿ ಅಪರಿಮೇಯವಾಗಿರುವ ತೋಷದ ಆಂತರ್ಯದಲ್ಲಿ ಲೀನಗೊಂಡು ವಶವರ್ತಿಯಾಗುತ್ತದೆ. ಅವಳ ಹಸ್ತಸ್ಪರ್ಶವು ಚುಂಬಕದ ಸ್ವರೂಪದ್ದು, ಅವಳ ಆ

ಗೂಢ ಹಾಗೂ ಮಾರ್ದವದ ಪ್ರಭಾವಗಳು (ಕೃಪೆಗಳು) ಮನಸ್ಸನ್ನು, ಜೀವನವನ್ನೂ, ದೇಹವನ್ನೂ ಪರಿಶುದ್ಧಗೊಳಿಸುತ್ತದೆ. ಎಲ್ಲೆಲ್ಲಿ ಅವಳ ಪಾದದ ಸ್ಪರ್ಶವಾಗುತ್ತದೆಯೋ, ಅಲ್ಲೆಲ್ಲವೂ ಆನಂದವು ಚಿಲುಮೆಯಿಂದ ಚಿಮ್ಮುವಂತೆ ಉಕ್ಕುತ್ತದೆ.

ಅದೂ ಅಲ್ಲದೇ, ಈ ಸುನಾದಪೂರಿತ ಶಕ್ತಿಯನ್ನು ಸಂಪರ್ಕಿಸುವದು ಅಷ್ಟೊಂದು ಸುಲಭ ಸಾಧ್ಯವೇನಲ್ಲ. ಅಲ್ಲದೇ ಅವಳ ಉಪಸ್ಥಿತಿಯನ್ನು ಪಡೆಯುವದೂ ಸಹಿತ ಅಷ್ಟೊಂದು ಸುಲಭವಲ್ಲ. ಮನಸ್ಸು ಮತ್ತು ಆತ್ಮದ ಸೌಷಮ್ಯತೆ ಹಾಗೂ ಸೌಂದರ್ಯಗಳು, ಚಿಂತನದ ಮತ್ತು ಅನುಭವಗಳ ಸೌಷಮ್ಯತೆ ಹಾಗೂ ಸೌಂದರ್ಯಗಳು, ಬಾಹ್ಯದ ಎಲ್ಲ ಚಟುವಟಿಕೆಗಳ ಮತ್ತು ಚಲನವಲನಗಳ ಸೌಷಮ್ಯತೆ ಮತ್ತು ಸೌಂದರ್ಯಗಳು, ಜೀವನದ ಹಾಗೂ ವಾತಾವರಣದ ಸೌಷಮ್ಯತೆ ಹಾಗೂ ಸೌಂದರ್ಯಗಳು ಇವೆಲ್ಲವೂ ಮಹಾಶಕ್ತಿಯು ಬಯಸುವ ಬೇಡಿಕೆಗಳಾಗಿವೆ.

ಎಲ್ಲೆಲ್ಲಿ ರಹಸ್ಯಮಯ–ಜಗತ್ತಿನ–ತೋಷದ ನಾದಗಳಿಗೆ ಆತ್ಮೀಯತೆಯು ಇರುತ್ತದೆಯೋ, ಹಾಗೂ ನಿತ್ಯಸೌಂದರ್ಯಕ್ಕೆ ಎಲ್ಲಿ ಈ ರೀತಿಯ ಪ್ರತಿಸ್ಪಂದನಗಳು ಇರುತ್ತವೆಯೋ, ವಿಜಯಗಳಿಗೆ ಬೇಕಾದ ಸಂಘಟನಾತ್ಮಕವಾದ ಐಕ್ಯತೆಗೆ ಹಾಗೂ ಸಂತೋಷದ ಸುಲಲಿತ ಸಲಿಲಕ್ಕೆ ಯಾವ ಜೀವ(ನ)ಗಳು ಈ ದಿವ್ಯತ್ವದೆಡೆಗೆ ಸಾಗುತ್ತವೆಯೋ ಅಂತಹ ಎಲ್ಲ ಸಂದರ್ಭಗಳಲ್ಲಿಯೂ, ವಾತಾವರಣದಲ್ಲಿ ಅವಳು ಅದರೊಡನೆ ಸಂಯೋಗಗೊಳ್ಳಲು ಸಮ್ಮತಿಸುತ್ತಾಳೆ.

ಆದರೆ ಎಲ್ಲಿ ಎಲ್ಲವೂ ಕುರೂಪಮಯವಾಗಿದೆಯೋ, ಸಂಕುಚಿತತೆಯಿಂದ ಕೂಡಿದೆಯೋ, ಹಾಗೂ ತಳದಲ್ಲಿಯೇ ಉಳಿದಿದೆಯೋ, ಅಂತಹ ಎಲ್ಲವೂ (ಬಲಹೀನವಾಗಿ) ಬಡವಾಗಿ, ದೀನತ್ವದಲ್ಲಿ ಹಾಗೂ ಮಲಿನತೆಯಲ್ಲಿ, ಅತ್ಯಂತ ಕ್ರೂರತೆಯಲ್ಲಿ, ನಿಕೃಷ್ಟತೆಯಲ್ಲಿ ಪ್ರಕ್ಷಿಪ್ತಗೊಂಡಿರುತ್ತವೆ. ಆದರೆ ಪ್ರೇಮ ಮತ್ತು ಸೌಂದರ್ಯಗಳು ಎಲ್ಲಿ ಇಲ್ಲವೋ ಅಥವಾ ಯಾವುದು ರೂಪುಗೊಳ್ಳು/ಸಥೂಲಗೊಳ್ಳಲು ಸಿದ್ಧವಿಲ್ಲವೋ, ಅಲ್ಲಿ ಅವಳು (ಮಹಾಲಕ್ಷ್ಮೀ) ಆಗಮಿಸುವದೇ ಇಲ್ಲ. ಎಲ್ಲಿ ಇವುಗಳೆಲ್ಲ ಮಿಶ್ರಣಗೊಂಡು ಸಾರೂಪ್ಯವನ್ನು ಹಾಗೂ ಅವಶ್ಯವಾಗಿರುವ ಆಕಾರಗಳನ್ನು ಕಳೆದುಕೊಂಡಿವೆಯೋ ಅಲ್ಲಿಂದ ಅವಳು ಶೀಘ್ರದಲ್ಲಿಯೇ ವಿಮುಖಳಾಗಿ ಹೊರಟುಹೋಗುತ್ತಾಳೆ. ಅಥವಾ ತನ್ನ ಸಮೃದ್ಧತೆಯನ್ನು ಧಾರೆ ಎರೆಯಲು ಕಳಕಳಿ ಹೊಂದುವದಿಲ್ಲ. ಒಂದು ವೇಳೆ ಮನುಕುಲದ ಹೃದಯಗಳಲ್ಲಿ ಕೇವಲ ಸ್ವಾರ್ಥ ಹಾಗೂ ದ್ವೇಷ ಮತ್ತು ಅಸೂಯೆಗಳು ಜೊತೆಗೆ ದುರ್ಬುದ್ಧಿ

ಹಾಗೂ ವೈರತ್ವ, ಕಲಹಗಳು ತುಂಬಿಕೊಂಡಿರುವ ಹಂತದಲ್ಲಿ, ಅವಳು (ಮಹಾಲಕ್ಷ್ಮಿಯು) ಅಲ್ಲಿಯೇ ಅವಳನ್ನೇ ಕಾಣುವಂತಹ ಸ್ಥಿತಿ ಇದ್ದಲ್ಲಿ, ವಿಶ್ವಾಸಭಂಗ, ದ್ವೇಷ ಮತ್ತು ಅಸೂಯೆಗಳು, ಅವಿಧೇಯತೆಗಳು ಒಟ್ಟಾಗಿ, ಈ ಪವಿತ್ರ ಸಂದರ್ಭದಲ್ಲಿ ಮಿಶ್ರಣಗೊಂಡಲ್ಲಿ, ಇವುಗಳಿಗೆ ಮತ್ತೆ ಜೊತೆಯಾಗಿ ಲೌಕಿಕ–ರಾಗಗಳೇ ಸಾಂದ್ರೀಕೃತವಾಗಿ–ಘನಗೊಂಡು, ಪರಿವರ್ತನೆಗೊಳ್ಳುವ ಸಲುವಾಗಿ ಅವಶ್ಯವಿದ್ದ ಸಮರ್ಪಣೆಯನ್ನು ಅವನತಿಗೊಳಿಸುತ್ತಿದ್ದಲ್ಲಿ, ಅಂತಹ ಹೃದಯಗಳಲ್ಲಿ ಈ ಕೃಪಾಪೂರ್ಣ ಹಾಗೂ ಸೌಂದರ್ಯದ ಅಧಿದೇವತೆಯಾದ ಮಹಾಲಕ್ಷ್ಮಿಯು ಅಲ್ಲಿ ವಾಸ ಮಾಡುವದಿಲ್ಲ.

ಒಂದು ದಿವ್ಯತ್ವದ ತಿರಸ್ಕಾರವೇ ಅವಳನ್ನು ಆವರಿಸಿ, ಅವಳು ಆ ಸ್ಥಳದಿಂದ ದೂರವೇ ಉಳಿದುಬಿಡುತ್ತಾಳೆ. ಅವಳು ಏಕಾಕಿಯಾಗಿ ಅವುಗಳನ್ನು ಅನ್ವಯಿಸುವದೂ ಇಲ್ಲ. ಅನುಮತಿಸುವದೂ ಇಲ್ಲ. ವಿರೋಧಿಸುವದೂ ಇಲ್ಲ. ಅಥವಾ ಅವಳ ಮುಖವನ್ನು (ಉಪಸ್ಥಿತಿಯನ್ನು) ಮುಚ್ಚಿಕೊಂಡ ಅವಳು ಈ ರೀತಿಯ ಯಾತನಾಮಯ (ಕಠೋರ), ವಿಷಪೂರಿತ ಭೂತದ ಅಂಶಗಳಿರುವ ಪ್ರಸಂಗಗಳನ್ನು ಅಷ್ಟೇ ಶೀಘ್ರವಾಗಿಯೇ ತಿರಸ್ಕರಿಸುತ್ತಾಳೆ ಹೀಗಾಗಿ ಅವಳು ಸಂತೋಷದಾಯಕ ಪ್ರಭಾವವನ್ನು ಕಾಣಲೆಳಸುವ ಸ್ಥಿತಿಯು ಅಲ್ಲಿಂದ ಮಾಯವಾಗಿ ಬಿಡುತ್ತದೆ. ಆದರೆ ಅದೇ ಸಮಯದಲ್ಲಿ ಇಂತಹ ಸಂತೋಷ–ಪ್ರದಾಯಕವಾದ ಅಂಶಗಳು ಘಟಿಸುತ್ತಿರುವ ಎಡೆಗೆ ಅವಳು ತಕ್ಷಣವೇ ತನ್ನ ಉಪಸ್ಥಿತಿಯನ್ನು ತೋರಲು ಆಗಮಿಸುತ್ತಾಳೆ. ವೈರಾಗ್ಯಪೂರ್ಣ ಶೂನ್ಯತೆ ಮತ್ತು ರೂಕ್ಷಮಯ ಕಠಿಣತೆಗಳು ಎಂದಿಗೂ ಅವಳ ಸಂತೋಷವನ್ನು ಹೆಚ್ಚಿಸುವದಿಲ್ಲ. ಅಲ್ಲದೇ ಹೃದಯದ ಸಹಜ ಭಾವನೆಗಳನ್ನು ನಿಗ್ರಹಿಸುವದಕ್ಕಾಗಿಯೇ ಮತ್ತು ಆತ್ಮನಿಗ್ರಹದ ಸಂಕೀರ್ಣತೆ–ಯಲ್ಲಾಗಲಿ ಹಾಗೂ ಜೀವನದ ಸೌಂದರ್ಯರಹಿತದ ಕ್ಷಣಗಳಲ್ಲಾಗಲಿ, ಒಟ್ಟಿನಲ್ಲಿ ಇಂತಹ ಪ್ರಸಂಗವಿದ್ದಲ್ಲಿ ಅವಳು ಅಲ್ಲಿ ಕಾಣಲು ಇಚ್ಛಿಸುವದಿಲ್ಲ.

ಹೀಗಾಗಿ ಪ್ರೇಮ ಮತ್ತು ಸೌಂದರ್ಯದ ಮೂಲಕವೇ ಅವಳು ಮಾನವನಿಗೆ ಲಭ್ಯವಿದ್ದು, ಈ ಅನುಭವವನ್ನೇ ದೈವತ್ವದ ಹಂತಕ್ಕೆ ಅರೋಹಣಗೊಳಿಸುವ ಹೊಣೆಗಾರಿಕೆಯ ನೊಗವನ್ನು ಅವಳು ಮಾನವನ ಹೆಗಲಿಗೇರಿಸುತ್ತಾಳೆ. ಜೀವನವು ಅವಳ ಪರಮೋಚ್ಚ ಸೃಷ್ಟಿಯಲ್ಲಿಯೇ ಸಮೃದ್ಧಶೀಲ ಕಾರ್ಯತತ್ಪರತೆಯಲ್ಲಿ ಅಲೌಕಿಕವಾದ ಕಲೆಯಲ್ಲಿ ಮತ್ತು ಅಸ್ತಿತ್ವದಲ್ಲಿರುವದೆಲ್ಲವೂ ಒಂದು ಪವಿತ್ರಮಯ ಕಾವ್ಯದ ರೀತಿಯಲ್ಲಿ ಪ್ರಕಾಶನಗೊಳ್ಳುತ್ತದೆ. ಜಗತ್ತಿನ ಶ್ರೀಮಂತಿಕೆಯನ್ನೆಲ್ಲ

ಒಟ್ಟುಗೂಡಿಸಿ, ಆ ಪರಮೋಚ್ಚದ ಆದೇಶದ ಪ್ರಕಾರ ಆ ದಿಸೆಯತ್ತ ಕೇಂದ್ರೀಕರಿಸಲು ಮತ್ತು ಅತ್ಯಂತ ಸರಳಾತಿಸರಳವಾದ ಅತೀ ಸಾಮಾನ್ಯವಾಗಿರುವ ವಸ್ತು–ವಿಷಯಗಳನ್ನೂ ಸಹಿತ ಅವಳ ಪ್ರಜ್ಞೆಯೊಡನೆ ಮೇಳೈಸಿಕೊಂಡು, ಅವಳಾತ್ಮದುಸಿರಿನೊಡನೆ ಏಕತ್ವಗೊಳಿಸಿಕೊಂಡು ಅವಳು ಆಸರೆ ನೀಡುತ್ತಾಳೆ. ಅವಳು ಹೃದಯಪೂರ್ವಕವಾಗಿಯೇ ಒಪ್ಪಿಕೊಂಡು ಹರಸಿ, ವಿಕಸನಗೊಂಡ ಅಲ್ಲಿನ ದೈವೀ ಸೌಂದರ್ಯದ ಅದ್ಭುತದ ಗೂಢತೆಗಳನ್ನು, ಹಾಗೂ ಯಾವುದು ಸರ್ವಸ್ವವನ್ನೂ, ಜ್ಞಾನವನ್ನೂ ಆವರಿಸಿಕೊಳ್ಳಬಲ್ಲುದೋ ಅದೇ ಅತ್ಯುನ್ನತವಾದ ಆಕರ್ಷಣೆಯಲ್ಲಿಯೇ ಆಗಮಿಸುವ ಭಕ್ತಿಯಾಗಿರುತ್ತದೆ. ಇದು ಸಾಮರ್ಥ್ಯವನ್ನೂ ಕಲಿಸುತ್ತದೆ. ಯಾವುದು ಮಹಾಬಲದ ಮೂಲಕ ಸೌಷಮ್ಯಪೂರ್ವಕವಾದ ಕ್ರಿಯೆಗಳನ್ನೂ ಲೀಲೆಗಳನ್ನೂ ಸುಸಂಗತವಾಗಿ ನಾದಮಯದಿಂದ ಘಟಿಸುವಂತೆ ಮಾಡುತ್ತಾಳೆ, ಈ ಎಲ್ಲ ಮಾನಕಗಳಲ್ಲಿ ಪರಿಪೂರ್ಣತೆಯಲ್ಲಿ ಎರಕ ಹೊಯ್ಯುತ್ತಾ ಈ ಸೌಂದರ್ಯವು ಸದಾಕಾಲದಲ್ಲೂ ಉತ್ಸಾಹದಿಂದ ಇರುವಂತೆ ಮಾಡುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/21–22**



**ಮಹಾಸರಸ್ವತೀ**

ಶ್ರೀಮಾತೆಯ ಕ್ರಿಯಾಶಕ್ತಿಯೇ **ಮಹಾಸರಸ್ವತೀ** ಆಗಿದ್ದಾಳೆ. ಅಲ್ಲದೇ ಅವಳ ಪರಿಪೂರ್ಣತೆಯ ಹಾಗೂ ನಿಯತಿಯೂ ಆಗಿದೆ. ಇವಳು ಶ್ರೀಮಾತೆಯ ನಾಲ್ಕು ಅಂಶಗಳಲ್ಲಿ ಅತ್ಯಂತ ಕಿರಿಯಳು. ಅನುಷ್ಠಾನಗೊಳಿಸುವ ಕ್ರಿಯೆಯಲ್ಲಿ ಈ **ಸರಸ್ವತಿಯು** ಅತ್ಯಂತ ಕುಶಲಿಯಾಗಿದ್ದಾಳೆ. ಅದಕ್ಕಿಂತ ಹೆಚ್ಚಾಗಿ ಇವಳು ಈ

ಪ್ರಕೃತಿಯ ಭೌತಿಕ ಅಂಶಕ್ಕೆ ಅತ್ಯಂತ ಆಪ್ತತೆಯನ್ನು ಹೊಂದಿದ್ದಾಳೆ. **ಮಾಹೇಶ್ವರಿಯು** ಜಗತ್ತಿನ ಅತಿ ವಿಶಾಲವಾದ ಹಾಗೂ ವೈಶ್ವಿಕ ಶಕ್ತಿಗಳ (ಬಲಗಳ) ಜೊತೆಗೆ ಇದ್ದರೆ, **ಮಹಾಕಾಳಿಯು** ಅವುಗಳ ಬಲಗಳನ್ನು ಹಾಗೂ ಸಂಚಲನಗಳನ್ನು ಸಂವೇಗ–ಗೊಳಿಸುತ್ತಿದ್ದರೆ, **ಮಹಾಲಕ್ಷ್ಮಿಯು** ಅವುಗಳ ನಾದಮಯತೆಯನ್ನು ಹಾಗೂ ಮಾನಕಗಳನ್ನು ಶೋಧಿಸುತ್ತಿದ್ದರೆ, ಇಲ್ಲಿ **ಮಹಾಸರಸ್ವತಿಯು** ಕಾರ್ಯಕರಣ–ಗೊಳ್ಳುತ್ತಿರುವ ಹಾಗೂ ಸಂಘಟನಾತ್ಮವಾಗುತ್ತಿರುವ ಈ ಎಲ್ಲ ವಿವರಗಳನ್ನೂ, ಅವುಗಳ ಮಧ್ಯದ ಸಂಪರ್ಕ ಸಂಬಂಧಗಳ ಅಂಶಗಳನ್ನು ಹಾಗೂ ಬಲಗಳ ಪರಿಣಾಮಕಾರೀ ಹೊಂದಾಣಿಕೆಗಳನ್ನು ಮತ್ತು ಅಧಃಪತನಗೊಳ್ಳದ ನಿಖರ ನಿರ್ದಿಷ್ಟತೆಯ ಫಲಿತಾಂಶಗಳನ್ನು ಪಡೆಯುವ ಸಲುವಾಗಿನ ವಿವರಗಳನ್ನು ಗಮನಿಸುವ ಸರ್ವಾಧ್ಯಕ್ಷಳಾಗಿದ್ದಾಳೆ. ವಿಜ್ಞಾನ ಮತ್ತು ಕರಕುಶಲತೆ ಹಾಗೂ ವಸ್ತುಗಳ ಪಾರಿಭಾಷಿಕ ತಾಂತ್ರಿಕತೆಗಳು **ಮಹಾಸರಸ್ವತಿಯ** ಸಾಮ್ರಾಜ್ಯವಾಗಿವೆ. ಇವಳು ಯಾವಾಗಲೂ ತನ್ನದೇ ಸ್ವಭಾವದಲ್ಲಿ ಇವುಗಳನ್ನು ಹೊಂದಿದ್ದು, ಅವಳು ಯಾರನ್ನು ಆತ್ಮೀಯತೆಯಿಂದ ಆಯ್ಕೆ ಮಾಡಿಕೊಳ್ಳುತ್ತಾಳೆಯೋ, ಯಾರು ಸೂಕ್ಷ್ಮತೆಯಲ್ಲಿ ಹಾಗೂ ಸಹನೆಯಿಂದ ಇರುತ್ತಾರೆಯೋ, ಪ್ರಜ್ಞಾಪೂರ್ವಕವಾದ ಮನಸ್ಸಿನಿಂದ ನಿಖರತೆಯತ್ತಲೇ ಪೂರ್ಣ ಕರ್ತೃತ್ವಶಕ್ತಿಯಿಂದ ಸಾಗುತ್ತಾರೆಯೋ, ಅದರಲ್ಲೂ ಪರಿಪಕ್ವವಾದ ಶಕ್ತಿಯ ಕುರಿತು ವಿವೇಚನಾಪೂರ್ಣ ದೃಷ್ಟಿಕೋನವನ್ನು ಹೊಂದಿರುತ್ತಾರೆಯೋ, ಅವರಿಗೆ ಮಾತ್ರ ತನ್ನ ಕೃಪೆಯನ್ನು ಎರೆಯುತ್ತಾಳೆ. ಇಂತಹ ಕೃಪೆಯು ಅತ್ಯಂತ ಸಾಮರ್ಥ್ಯಶಾಲಿಯಾಗಿದ್ದು, ಅದು ಎಂದಿಗೂ ನಿವೃತ್ತಿಯನ್ನು ಬಯಸುವದಿಲ್ಲ. ಅತ್ಯಂತ ಕಾಳಜೀಪೂರ್ವಕ ಹಾಗೂ ಸಕ್ಷಮತೆಯನ್ನು ಹೊಂದಿದ ಕಟ್ಟಡ ರಚನೆಯಾಗಲಿ, ವ್ಯವಸ್ಥಾಪನಾ ಕಾರ್ಯವಾಗಲಿ, ಆಡಳಿತಾತ್ಮಕ ವಿಷಯವಾಗಲಿ, ಯಂತ್ರ–ತಂತ್ರಶಿಲ್ಪದಲ್ಲಾಗಲಿ, ಕಲಾ ಪ್ರದರ್ಶನದಲ್ಲಾಗಲಿ ಮತ್ತು ಈ ರೀತಿ ಹಲವು ವಿಧದಲ್ಲಿ ಈ ಜಗತ್ತು ರೂಪಣೆ ಹೊಂದುವಂತೆಯೇ ಸೃಷ್ಟಿಸಲ್ಪಟ್ಟಿದೆ. ಯಾವಾಗ ಇವಳು ರೂಪಾಂತರಣಕ್ಕೆ ಸಿದ್ಧಳಾಗಿ, ಪ್ರಕೃತಿಯ (ಸಹಜ ಸ್ವಭಾವದ) ನವೀನ ಸಂರಚನೆಯನ್ನು ಬಯಸುತ್ತಾಳೆಯೋ ಆಗ ಅವಳ ಆ ಕ್ರಿಯೆಯು ಅಂತಹ ಪರಿಶ್ರಮದಲ್ಲಿಯೇ ಇರುತ್ತದೆ. ಇದರ ಸೂಕ್ಷ್ಮತೆಯೂ ಸಹಿತ ನಮ್ಮ ಉತ್ಕಂಠಿತಗೊಂಡ, ಶೀಘ್ರ ಫಲಿತಾಂಶ ಬಯಸುವ ಉತ್ಸುಕತೆಯ ತಹತಹಿಕೆಗೆ ಇವೆಲ್ಲವೂ ಅತ್ಯಂತ ನಿಧಾನಗತಿಯಲ್ಲಿ, ಅದೂ ಅನಂತಾನಂತದಲ್ಲಿ ಘಟಿಸುತ್ತಿರುವ ವಿಷಯದಂತೆ ಕಾಣುತ್ತದೆ. ಆದರೆ ಇದು ಸಮಗ್ರತೆಯಿಂದ ಕೂಡಿದ್ದು, ಸ್ಥಿರತೆಯಿಂದ ಇದ್ದು, ಯಾವುದೇ ಏರಿಳಿತಗಳು ಇಲ್ಲಿ ಇರುವದಿಲ್ಲ.

ಯಾವುದು ಅವಳಿಚ್ಛೆಯಂತೆ ಅವಳಲ್ಲಿ ಕಾರ್ಯತತ್ಪರತೆಗೆ ತೊಡಗಿ–ಕೊಳ್ಳುತ್ತದೆಯೋ ಅದು ಅತ್ಯಂತ ಋಜು ಸ್ವಭಾವದ್ದೇ ಆಗಿರುತ್ತದೆ. ಎಂದಿಗೂ ಜಡಗೊಳ್ಳುವದಿಲ್ಲ. ಯಾವಾಗಲೂ ಅವಿಶ್ರಾಂತವಾಗಿಯೇ ಕಾರ್ಯತತ್ಪರತೆಯಲ್ಲಿ ಇರುತ್ತದೆ. ಈ ರೀತಿಯಾಗಿಯೇ ಅವಳು ನಮ್ಮನ್ನು ಹರಸುವದರ ಮೂಲಕ, ಅವಳು ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನೂ ಗಮನಿಸುತ್ತಾ ಹಾಗೂ ಅವುಗಳನ್ನು ಸ್ಪರ್ಶಿಸುತ್ತಾ, ಪ್ರತಿಕ್ಷಣವೂ ತಪ್ಪುಗಳನ್ನು ಪರಿಷ್ಕರಿಸುತ್ತಾ, ಕಂದಕಗಳು ಬೀಳದ ಹಾಗೆ, ತಿರುಚಿಕೊಳ್ಳದ ಹಾಗೆ ಅಥವಾ ಅಪರಿಪೂರ್ಣವಾಗಿಯೇ ಉಳಿಯದ ಹಾಗೆ ಅವುಗಳೆಲ್ಲವನ್ನೂ ಪರಿಗಣಿಸಿ, ಸಮಯೋಚಿತವಾಗಿ ಸಮತೋಲನಗೊಳಿಸಿ ನಿಖರತೆಯತ್ತ ಎಲ್ಲವೂ ಘಟಿಸುವಂತೆ ಮಾಡುತ್ತಾಳೆ. ಅವಳ ದೃಷ್ಟಿಗೆ ಯಾವುದೂ ಕಡಿಮೆಯಲ್ಲ; ಯಾವುದೂ ಅಲ್ಪವೂ ಅಲ್ಲ. ಅದು ಎಷ್ಟೇ ದುರ್ಗಮವಾದ ಅಥವಾ ನಿಗೂಢತೆಯಲ್ಲಿಯೇ ಮುಳುಗಿದ್ದರೂ ಅವಳಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಅದಕ್ಕಾಗಿ ಎರಕಗೊಳಿಸುತ್ತ ಮತ್ತೆ ಮತ್ತೆ ಮರು ಎರಕಗೊಳಿಸುತ್ತ ಅವಳು ಆ ನಿಗದಿತ ರೂಪವನ್ನು ಪಡೆಯುವವರೆಗೂ, ಪ್ರತಿಯೊಂದು ಭಾಗವೂ ಸಮಗ್ರತೆಯಲ್ಲಿ ಸ್ಪಂದಿಸುವಂತೆ ಮಾಡಲು ಸದಾ ಶ್ರಮಿಸುತ್ತಾಳೆ. ಅದು ನಿಗದಿತವಾದ ಸ್ಥಳದಲ್ಲಿಯೇ ಸ್ಥಿತಗೊಂಡು ನಿಗದಿತಗೊಂಡಿರುವ ಪರಮೋದ್ದೇಶಕ್ಕೆ ಪೂರಕವಾಗಿಯೇ ಹಾಗೂ ಒಟ್ಟಂದದಲ್ಲಿ ಭಾಗವಹಿಸಿ ಫಲಪ್ರದವಾಗುವಂತೆ ಮಾಡುತ್ತಾಳೆ. ಅವಳ ಈ ನಿರಂತರತೆಯ ಮತ್ತು ವಸ್ತುಗಳ ವಿಧಿಬದ್ಧ ವ್ಯವಸ್ಥಾಪನೆಗಳು ಹಾಗೂ ಪುನರ್–ವ್ಯವಸ್ಥಾಪನೆಗಳಲ್ಲಿ ಅವಳ ದೃಷ್ಟಿಕೋನವು ಏಕಕಾಲಕ್ಕೆ ಸರ್ವ ವಸ್ತುಗಳ ಸರ್ವ ವಿಷಯದ ಮೇಲೆಯೂ ಇರುತ್ತದೆ. ಅವಳ ಅಂತಃಪ್ರಜ್ಞೆಯು ಯಾವುದನ್ನು ಸ್ವೀಕರಿಸಬೇಕು, ಯಾವುದನ್ನು ದೂರವಿಡಬೇಕು ಎನ್ನುವುದನ್ನು ನಿರ್ಣಯಿಸುತ್ತದೆ. ಹೀಗಾಗಿ ಯಶಸ್ವಿಯಾಗಿಯೇ ಸೂಕ್ತವಾದ ಅರ್ಹತೆಯುಳ್ಳ ಸಾಧನವನ್ನೇ ಅವಳು ಆಯ್ಕೆ ಮಾಡಿಕೊಳ್ಳುತ್ತಾಳೆ. ಅದು ಸೂಕ್ತ ಸಮಯದಲ್ಲಿ ಮತ್ತೆ ನಿಖರವಾದ ನಿಯಮದಲ್ಲಿಯೇ ರೂಪುಗೊಂಡಿರುತ್ತದೆ.

ನಿಷ್ಕಾಳಜಿ, ತಿರಸ್ಕಾರ, ಆಲಸ್ಯಗಳನ್ನು ಇವಳು ತೊಡೆದುಹಾಕುತ್ತಾಳೆ. ವಿಚ್ಛಿದ್ರಗೊಳಿಸುವಂತಹ, ದ್ವೇಷಪೂರಿತ ಹಾಗೂ ಅಲ್ಲೋಲಕಲ್ಲೋಲಮಯ ಕಾರ್ಯಗಳನ್ನೂ ಛಿದ್ರಗೊಳಿಸುತ್ತಾಳೆ. ಜಟಿಲತಮದ ಎಲ್ಲವನ್ನೂ ಮತ್ತು ಪ್ರಮಾದಗಳನ್ನೂ, ಸರ್ವ ತಪ್ಪುಗಳನ್ನೂ ಹಾಗೂ ಉಪಕರಣಗಳ ದುರುಪಯೋಗ ಅಲ್ಲದೇ ಪರಿಣಿತರು ಕಾರ್ಯವಿಮುಖರಾಗಿರುವದನ್ನು, ಅಪರಿಪೂರ್ಣತೆಯತ್ತಲೇ

ಸಾಗುತ್ತಿರುವವದನ್ನು ಅಪರಾಧೀ ಕೃತ್ಯವೆಂದು ಭಾವಿಸಿ, ಇದು ಅವಳ ಸ್ವಭಾವಕ್ಕೆ ವಿರುದ್ಧವಾದುದೆಂದು ಸ್ವೀಕಾರಾರ್ಹವಲ್ಲವೆಂದು ಅವುಗಳನ್ನು ಹುಡಿಗುಟ್ಟಿಸುತ್ತಾಳೆ.

ಯಾವಾಗ ಅವಳ ಕಾರ್ಯವು ಪೂರ್ಣಗೊಳ್ಳುತ್ತದೆಯೋ, ಆಗ ಯಾವುದೂ ಮರೆತಿರುವದಿಲ್ಲ. ಯಾವ ಭಾಗವೂ ಸಹಿತ ಸೂಕ್ತವಲ್ಲದ ಜಾಗೆಯಲ್ಲಿ ಸ್ಥಿತಗೊಂಡಿರುವದಿಲ್ಲ. ಅಥವಾ ಆ ಭಾಗದಲ್ಲಿ ಅಳವಡಿಸುವದನ್ನೇ ಮರೆತಿರುವ ಸಂಭವವೂ ಇರುವದಿಲ್ಲ. ದೋಷಪೂರಿತ ಸ್ಥಾನದಲ್ಲಿ ಸ್ಥಿತಗೊಳಿಸಿರುವದಿಲ್ಲ. ಎಲ್ಲವೂ ಘನವಾಗಿಯೇ, ನಿಖರವಾಗಿಯೇ ಪೂರ್ಣವಾಗಿರುತ್ತದೆ. ಸರ್ವರೂ ಮೆಚ್ಚುವಂತೆಯೇ ಇರುತ್ತದೆ.

ಪರಿಪೂರ್ಣ ಪಕ್ವತೆಗೆ ಯಾವುದು ಕಡಿಮೆ ಇದ್ದರೂ ಸಹಿತ ಅವಳು ತೃಪ್ತಳಾಗುವದಿಲ್ಲ. ಅದನ್ನು ಎದುರಿಸಲು ಅವಳು ಶತ್ರುತ್ವ ಭಾವವನ್ನೂ ಸಹಿತ ತಾಳಬಲ್ಲಳು. ಅದನ್ನೆ ಎದುರಿಸಲೂ ಸಿದ್ಧಳಾಗಿರುತ್ತಾಳೆ. ಏಕೆಂದರೆ ಇಂತಹ ಶತ್ರುತ್ವವು ಪರಿಪೂರ್ಣತೆಯ ಸೃಷ್ಟಿಗೆ ಅತ್ಯಾವಶ್ಯವಾಗಿರುವ ಸಂಗತಿಯಾಗಿದೆ. ಆದ್ದರಿಂದ ಶ್ರೀಮಾತೆಯ ಸರ್ವಶಕ್ತಿಗಳಲ್ಲಿ ಇವಳು ಮಾತ್ರ ಮನುಕುಲದ ಜೊತೆಗೆ ಅತ್ಯಂತ ಸುದೀರ್ಘವಾದ ತೊಂದರೆಯನ್ನೇ ಎದುರಿಸಬೇಕಾಗಿದೆ. ಏಕೆಂದರೆ, ಮಾನವನು ಸದಾ ಅಪರಿಪೂರ್ಣತೆಯ ಮಾಯೆಯಲ್ಲಿಯೇ ಇರಲು ಯತ್ನಿಸುವವನಾಗಿದ್ದಾನೆ.

ದಯೆ, ಮುಗುಳ್ನಗೆ, ಆತ್ಮೀಯತೆ ಹಾಗೂ ಸಹಕಾರಗಳು ಅಷ್ಟೊಂದು ಸುಲಭದಲ್ಲಿ ಮಾನವನಲ್ಲಿ ಕಾಣಲು ಸಾಧ್ಯವಿಲ್ಲ. ಇವಿಲ್ಲದಿದ್ದರೆ ಅವನ ಬದುಕನ್ನು ಶ್ರುತಿಬದ್ಧಗೊಳಿಸಲೂ ಸಾಧ್ಯವಿಲ್ಲ. ಅದರಲ್ಲೂ ಹಲವಾರು ಸೋಲಿನ ನಂತರದಲ್ಲಿ ಮಾನವನಲ್ಲಿ ಮರುವ ಹತಾಶೆ, ಅಧೈರ್ಯದಿಂದ ಹೊರತರುವದೂ ಅಷ್ಟು ಸುಲಭದಲ್ಲಿ ಸಾಧ್ಯವಾಗುವದಿಲ್ಲ. ಆದರೆ ಇಂತಹ ಎಲ್ಲ ಸಂದರ್ಭಗಳಲ್ಲಿ ಈ ಶ್ರೀಮಾತೆಯ ಕೃಪಾಹಸ್ತಗಳು ನಮ್ಮನ್ನು ಸಂರಕ್ಷಿಸುತ್ತವೆ. ನಮ್ಮ ಪ್ರತಿಯೊಂದು ಹೆಜ್ಜೆಯನ್ನೂ ನಮ್ಮ ಇಚ್ಛೆಯಲ್ಲಿಯೇ ಏಕಾಂಗಿಯಾಗಿ ಸಾಧಿಸುವ ಸಲುವಾಗಿ ಇರುವ ಅಭಿಲಾಷೆಯೊಂದಿಗೆ ಪ್ರಾಮಾಣಿಕರಾಗಿರುವಂತೆ ಹಾಗೂ ನೇರ ಪಥದಲ್ಲಿ ಸಾಗುವಂತೆ ಮಾಡುತ್ತಾಳೆ.

ದ್ವಂದ್ವ ಮನೋಭಾವವನ್ನು ಅವಳು ಎಂದಿಗೂ ಸಹಿಸುವದಿಲ್ಲ. ಕೇವಲ ಮೇಲ್ತೋರಿಕೆಗಾಗಿ ಇರುವ ಸಂಥರ್ಭಗಳನ್ನು ಕಂಡಾಗಲೆಲ್ಲ ಅವಳ ಪ್ರತಿಕಾರವು ತೀಕ್ಷ್ಣವಾಗಿಯೇ ಇರುತ್ತದೆ. ಜೊತೆಗೆ ಅಷ್ಟೇ ನಾಟಕೀಯವಾಗಿರುವಂತೆಯೇ ಇರುತ್ತದೆ.

ಇವಳು ನಮ್ಮ ಬಯಕೆಗಳನ್ನು ಈಡೇರಿಸುವ ಶ್ರೀಮಾತೆಯಾಗಿದ್ದಾಳೆ. ಕಷ್ಟಕಾಲದಲ್ಲಿ ಸಹಾಯಕ್ಕೆ ಬರುವ ಮಿತ್ರನೋಪಾದಿ ಇದ್ದಾಳೆ. ಸದಾ ಸ್ಥಿತಪ್ರಜ್ಞೆಯಲ್ಲಿರುವ ಅಪ್ರತಿಮ ಸಲಹೆಗಾರಳಾಗಿದ್ದಾಳೆ. ಹಾಗೂ ಜೀವನ ಶಿಲ್ಪಿಯೂ ಆಗಿದ್ದಾಳೆ. ಅಲ್ಲಲ್ಲಿ ದಟ್ಟಯಿಸಿಕೊಂಡು ಬರುವ ಹತಾಶೆಯ, ಭಯದ ಮೋಡಗಳನ್ನು ಅವಳು ತನ್ನ ಕಾಂತಿಯುಕ್ತ ಮಂದಸ್ಮಿತದಲ್ಲಿಯೇ ಚೆದುರಿಸಿ ಬಿಡುತ್ತಾಳೆ. ಯಾವಾಗಲೂ ಸಹಾಯಕ್ಕೆ ಬರುವದನ್ನು ಪದೇ ಪದೇ ನೆನಪಿಸುತ್ತಾಳೆ. ಆ ಶಾಶ್ವತದ ಸೂರ್ಯೋದಯದ ಕಡೆಗೆ ನಮ್ಮ ದೃಷ್ಟಿಕೋನವನ್ನು ಗುರಿ ಇರಿಸುವಂತೆ ಮಾರ್ಗದರ್ಶನ ಮಾಡುತ್ತಾಳೆ. ಅವಳು ನಿಶ್ಚಿಂತಳು. ಪ್ರಶಾಂತಳು. ಯಾವಾಗಲೂ ನಿರಂತರವಾಗಿರುವ ಆತ್ಮಗತವಾಗಿರುವ ಅಭೀಪ್ಸೆಯಲ್ಲಿಯೇ ತನ್ನನ್ನು ಸ್ಥಿತಗೊಳಿಸಿಕೊಂಡಿದ್ದಾಳೆ. ಈ ಅಭೀಪ್ಸೆಯೂ ನಮ್ಮನ್ನು ಆ ಊರ್ಧ್ವದ ಪರಮೋಚ್ಚ ಭಾವಕ್ಕೆ ಕರೆದುಕೊಂಡು ಹೋಗುವ ಸದಿಚ್ಛೆಯಾಗಿದೆ. ಇಲ್ಲಿಯೇ ಉಳಿದೆಲ್ಲ ಶಕ್ತಿಗಳೂ ಸಹಮತದಿಂದ ಮಹಾಸರಸ್ವತಿಯ ಪರಿಪೂರ್ಣತೆಗೆ ಸಹಕರಿಸುತ್ತವೆ. ಭೌತಿಕದ ಆಧಾರದ ಸಲುವಾಗಿ ಭರವಸೆಯನ್ನೂ, ಆಂತರ್ಯದ ಸಾರವನ್ನು ವಿಶದೀಕರಿಸುವ ಹಾಗೂ ಇಡೀ ವಿನ್ಯಾಸದ ಸವಿವರಗಳನ್ನು ಆನ್ವೇಷಿಸುವ ಹಾಗೂ ರೂಪಣೆಗೊಳಿಸುವ ಶಕ್ತಿ ಇವಳಾಗಿದ್ದಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/22–23 – ಶ್ರೀ ಅರವಿಂದರು**

## ದಿವ್ಯಮಾತೆಯವರ ಇತರ ಶ್ರೇಷ್ಠ ವ್ಯಕ್ತಿತ್ವಗಳು

– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ

ದಿವ್ಯಮಾತೆಯವರ ಅನ್ಯ (ಇತರ) ಶ್ರೇಷ್ಠ ವ್ಯಕ್ತಿತ್ವಗಳು ಅಲ್ಲಿವೆ, ಆದರೆ ಕೆಳಗೆ ತರುವುದಕ್ಕೆ ಅವುಗಳು ಕ್ಲಿಷ್ಟವಾಗಿದ್ದವು ಮತ್ತು ಭೂ–ಚೈತನ್ಯದ ವಿಕಸನದಲ್ಲಿ ಅತ್ಯಂತ ಪ್ರಾಧ್ಯಾನ್ಯತೆಯಿಂದ ಅವುಗಳು ವಿಶಿಷ್ಟತೆಯಿಂದ ಎದುರುಗಡೆ ಕಂಡಿಲ್ಲ. ಅವುಗಳ ಮಧ್ಯೆ ಅತಿಮಾನಸ ಸಾಕ್ಷಾತ್ಕಾರಕ್ಕೆ ಅನಿವಾರ್ಯವಾದ ಉಪಸ್ಥಿತಿಗಳು ಇವೆ, – ಅವೆಲ್ಲವುಗಳಲ್ಲಿ ಅತಿ ಹೆಚ್ಚು ನಿಗೂಢ ಹಾಗೂ ಶಕ್ತಿಯುತ ಭಾವಪರವಶತೆಯ ಅವರ ಆ ವ್ಯಕ್ತಿತ್ವ ಮತ್ತು ಅತ್ಯುನ್ನತವಾದ ಆ ದಿವ್ಯ ಪ್ರೇಮದಿಂದ ಸಲಿಲಗೊಳ್ಳುತಿರುವ ಆನಂದ, ಅತಿ ಊರ್ಧ್ವದ ಅತಿಮಾನಸದ ಚೈತನ್ಯ ಮತ್ತು ಅತಿ ಆಳದ ವಿಷಯೀ ಪ್ರಪಾತಗಳ ನಡುವಿನ ಕಂದಕವನ್ನು ಸರಿಪಡಿಸುವಂತ ಆ

ಆನಂದ, ಒಂದು ಅದ್ಭುತವಾದ ದಿವ್ಯ ಜೀವನದ ಪ್ರಮುಖ ಕೀಲಿಕೈ ಹೊಂದಿದ ಹಾಗೂ ತನ್ನ ಗುಪ್ತತೆ(ಗೂಢತೆಯಿಂದ)ಗಳಿಂದ ವಿಶ್ವದ ಇತರೆ ಎಲ್ಲ ಕಾರ್ಯಗಳನ್ನು ಈಗಲೂ ಸಹ ಬೆಂಬಲಿಸುವಂಥ ಆ ಆನಂದವಾಗಿದೆ . ಆದರೆ, ಪರಿಮಿತ, ಅಹಂಕಾರವುಳ್ಳ ಹಾಗೂ ಅಸ್ಪಷ್ಟವಾದ ಮಾನವ ಸ್ವಭಾವವು ಈ ಶ್ರೇಷ್ಠ ಉಪಸ್ಥಿತಿಯನ್ನು ಸ್ವೀಕರಿಸಲು ಅಥವಾ ಅವುಗಳ ಪ್ರಬಲ ಕ್ರಿಯೆಯನ್ನು ಸಮರ್ಥಿಸಲು ಅನರ್ಹವಾಗಿದೆ. ಈ ನಾಲ್ಕೂ ತಮ್ಮ ಸಾಮರಸ್ಯವನ್ನು ಕಂಡುಕೊಂಡಾಗ ಮತ್ತು ರೂಪಾಂತರಗೊಂಡ ಮನಸ್ಸು, ಜೀವನ ಹಾಗೂ ದೇಹಗಳಲ್ಲಿಯ ಚಲನವಲನಗಳ ಸ್ವಾತಂತ್ರ್ಯವನ್ನು ಹೊಂದಿದಾಗ ಮಾತ್ರವೇ, ಇತರೆ ಅಪರೂಪದ ಶಕ್ತಿಗಳು ಭೂಮಿಯ ಚಲನೆಯಲ್ಲಿ ಪ್ರಕಟವಾಗುತ್ತವೆ ಮತ್ತು ಅತಿಮಾನಸ ಕ್ರಿಯೆಯು ಸಾಧ್ಯವಾಗುತ್ತದೆ. ಪ್ರತಿಯಾಗಿ, ಯಾವಾಗ ಅವರಲ್ಲಿ ಎಲ್ಲ ವ್ಯಕ್ತಿತ್ವಗಳು ಕೂಡಿಸಲ್ಪಟ್ಟಾಗ ಮತ್ತು ಪ್ರಕಟವಾದಾಗ ಮತ್ತು ಅವುಗಳ ಪ್ರತ್ಯೇಕ ಕಾರ್ಯವು ಸಮರಸವಾದ ಐಕ್ಯತೆಯಲ್ಲಿ ಬದಲಾವಣೆಯಾದಾಗ ಮತ್ತು ಅವುಗಳು ಅವರಲ್ಲಿ ಅತಿಮಾನಸ ದೇವತೆಗಳಾಗಿ ಹೊಮ್ಮಿದಾಗ ಮಾತ್ರ, ಶ್ರೀಮಾತೆಯವರು ಅತಿಮಾನಸ ಶಕ್ತಿಯಾಗಿ ಪ್ರಕಟವಾಗುತ್ತಾರೆ ಮತ್ತು ತಮ್ಮ ಪ್ರಕಾಶಿಸುವ ಶ್ರೇಷ್ಠತೆಯನ್ನು ಅವತರಣಗೊಳಿಸುತ್ತ ಅನಿರ್ವಚನೀಯ ನಿರ್ಮಲ ಆಕಾಶದಿಂದ ಕೆಳಗಡೆ ತರುತ್ತಾರೆ. ಅವಾಗ ಮಾನವ ಸ್ವಭಾವವು ಕ್ರಿಯಾಶೀಲ ದೈವ ಸ್ವಭಾವವಾಗಿ ಬದಲಾಗಬಹುದು ಯಾಕೆಂದರೆ ಅತಿಮಾನಸ ಸತ್ಯ–ಪ್ರಜ್ಞೆಯ ಮತ್ತು ಸತ್ಯ–ಶಕ್ತಿಯ ಎಲ್ಲ ಪ್ರಕೃತಿ ಸದೃಶ ಮಾರ್ಗಗಳು ಒಟ್ಟಾಗಿ ಕಟ್ಟಲ್ಪಟ್ಟಿವೆ ಮತ್ತು ಜೀವನದ ತಂತಿಯ ಶಾಶ್ವತದ ಲಯಕ್ಕೆ ಅಳವಡಿಸಲ್ಪಟ್ಟಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/23–24**

## ಒಬ್ಬರು ಹೊಂದಿರಲೇಬೇಕಾದ ಮೂರು ಸಂಗತಿಗಳು

ಈ ಪರಿವರ್ತನೆಯನ್ನು ನೀನು ಬಯಸುವುದಾದರೆ, ನಿನ್ನನ್ನು ನೀನು ಶ್ರೀಮಾತೆಯವರ ಕರಗಳಲ್ಲಿ ಮತ್ತು ಅವರ ಪ್ರಭಾವವನ್ನು ದೂರದೆ ಅಥವಾ ಪ್ರತಿರೋಧಿಸದೆ ಸುಮ್ಮನೆ ಸ್ವೀಕರಿಸಿಕೊ, ಮತ್ತು ಅವರು ತಮ್ಮ ಅಪ್ರತಿಬದ್ಧ ಕಾರ್ಯವನ್ನು ನಿನ್ನೊಳಗೆ ಈಡೇರಿಸಿಕೊಳ್ಳಲು ಬಿಡು. ನೀನು ಮೂರು ಸಂಗತಿಗಳನ್ನು ಹೊಂದಿರಲೇಬೇಕು, ಪ್ರಜ್ಞೆ, ನಮ್ರತೆ (ಒಗ್ಗುವ ಗುಣ), ಸಂಪೂರ್ಣ ಶರಣಾಗತಿ. ಪ್ರತಿಯಾಗಿ ನೀನು ನಿನ್ನ ಮನಸ್ಸಿನಲ್ಲಿ, ಆತ್ಮದಲ್ಲಿ ಹಾಗೂ

ಹೃದಯದಲ್ಲಿ ಮತ್ತು ನಿನ್ನ ದೇಹದ ಪ್ರತಿಕೋಶಗಳಲ್ಲಿ ಜಾಗೃತನಾಗಿರಲೇಬೇಕು, ಶ್ರೀಮಾತೆಯವರ ಮತ್ತು ಅವರ ಪ್ರಭಾವಗಳ ಹಾಗೂ ಅವುಗಳ ಕಾರ್ಯದ ಅರಿವಿರಲೇಬೇಕು; ಆದಾಗ್ಯೂ ನಿನ್ನ ಅಸ್ಪಷ್ಟತೆಯಲ್ಲಿ ಮತ್ತು ನಿನ್ನ ಅರಿವಿರದ ಭಾಗಗಳಲ್ಲಿ ಹಾಗೂ ಸಂದರ್ಭಗಳಲ್ಲಿ ಅವರು ಕಾರ್ಯ ಮಾಡಬಹುದು, ಅದು ನೀನು ಎಚ್ಚರವಿದ್ದಾಗಿನ ಮತ್ತು ಅವರೊಡನೆ ಸಂಪರ್ಕದಲ್ಲಿದ್ದಾಗಿನ ವಿಷಯದ ಹಾಗೆ ಅಲ್ಲ. ನಿನ್ನ ಎಲ್ಲ ಸ್ವಭಾವವು ಅವರ ಸ್ಪರ್ಶಕ್ಕೆ ಮೃದುವಾಗಿರಲೇಬೇಕು, – ಸ್ವಪರ್ಯಾಪ್ತ ಅಜ್ಞಾನದಿಂದಾಗಿ ಮನಸ್ಸು ಪ್ರಶ್ನಿಸುವಂತೆ ಹಾಗೂ ಸಂದೇಹಿಸುವಂತೆ ಪ್ರಶ್ನೆ ಮಾಡುತ್ತಿಲ್ಲ ಮತ್ತು ಅದರ ಜ್ಞಾನೋದಯದ ಹಾಗೂ ಬದಲಾವಣೆಯ ವಿರೋಧಿಯಾಗಿದೆ; ಪ್ರತಿ ದಿವ್ಯ ಪ್ರಭಾವಕ್ಕೆ ಮನುಷ್ಯನಲ್ಲಿನ ಪ್ರಾಣವು ಆಗ್ರಹಿಸುವಂತೆ ಮತ್ತು ಅದರ ಮೊಂಡು ಆಶೆಗಳನ್ನು ಹಾಗೂ ಕೆಟ್ಟ ಭಾವಗಳನ್ನು ತೀವ್ರವಾಗಿ ವಿರೋಧಿಸುವಂತೆ ಅದರ ಸ್ವಂತ ಚಲನೆಗಳನ್ನು ಆಗ್ರಹಿಸುತ್ತಿಲ್ಲ; ಮನುಷ್ಯನ ಭೌತಿಕ ಪ್ರಜ್ಞೆಯು ಅಡ್ಡಿಪಡಿಸುವಂತೆ ಅಡ್ಡಿಪಡಿಸುತ್ತಿಲ್ಲ ಮತ್ತು ಅಸಮರ್ಥತೆಯಲ್ಲಿ, ಜಡತ್ವದಲ್ಲಿ ಹಾಗೂ ತಾಮಸಿಕದಲ್ಲಿ ಅದು ಬೇರೂರಿದೆ, ಮತ್ತು ಅತ್ಯಲ್ಪದಲ್ಲಿ ಹಾಗೂ ಅಜ್ಞಾನದಲ್ಲಿ ತನ್ನ ಸಂತೋಷಕ್ಕೆ ಅಂಟಿಕೊಳ್ಳುತ್ತ ತನ್ನ ಆತ್ಮರಹಿತ ನಿಯತ ಕಾರ್ಯಕ್ರಮವನ್ನು ಅಥವಾ ತನ್ನ ನಿಸ್ತೇಜ ಜಡತ್ವವನ್ನು ಅಥವಾ ತನ್ನ ಮಂದವಾದ ನಿದ್ರೆಯನ್ನು ಭಂಗಮಾಡುವ ಪ್ರತಿ ಸ್ಪರ್ಶದ ವಿರುದ್ಧ ಕೂಗುತ್ತದೆ. ನಿನ್ನಯ ಆಂತರಿಕ ಮತ್ತು ಬಾಹ್ಯ ಇರುವಿಕೆಯ ಸಂಪೂರ್ಣ ಶರಣಾಗತಿಯು ನಿನ್ನ ಸ್ವಭಾವದ ಎಲ್ಲ ಭಾಗಗಳಲ್ಲಿ ಮೃದುತ್ವವನ್ನು ತರುತ್ತದೆ; ವಿವೇಕ ಹಾಗೂ ಪ್ರಕಾಶ, ಸತ್ತ್ವ, ಸಾಮರಸ್ಯ ಹಾಗೂ ಸೌಂದರ್ಯ, ಮೇಲಿನಿಂದ ಹರಿದು ಕೆಳಗೆ ಬರುವ ಪರಿಪೂರ್ಣತೆಗಳಿಗೆ ನಿರಂತರ ತೆರೆದಿರುವಿಕೆಯಿಂದ ಪ್ರಜ್ಞೆಯು ನಿನ್ನ ಎಲ್ಲೆಡೆಯಲ್ಲೂ ಜಾಗೃತಗೊಳ್ಳುತ್ತದೆ. ದೇಹವು ಸಹ ಎಚ್ಚರಗೊಳ್ಳುತ್ತದೆ ಮತ್ತು ಕೊನೆಗೆ ಅದರ ಪ್ರಜ್ಞಾಪೂರ್ವಕ ಪ್ರಜ್ಞೆಯು ಅತ್ಯುನ್ನತವಾದ ಪ್ರಜ್ಞೆಯ ಸಮೂಹಕ್ಕೆ ಸೇರುವುದಿಲ್ಲ, ಅವರ ಎಲ್ಲ ಶಕ್ತಿಗಳು ಮೇಲಿನಿಂದ ಮತ್ತು ಕೆಳಗಿನಿಂದ ಮತ್ತು ಅದರ ಸುತ್ತಲೂ ಹರಡಿಕೊಂಡಿವೆ ಮತ್ತು ಸರ್ವೋಚ್ಚ ಪ್ರೀತಿ ಮತ್ತು ಆನಂದಕ್ಕೆ ಪುಳಕಿತಗೊಳ್ಳುತ್ತದೆ.

ಆದರೆ ನೀನು ಎಚ್ಚರಿಕೆಯಿಂದಿರು ಮತ್ತು ತನ್ನ ಸ್ವಂತ ಪ್ರಮಾಣಗಳ ಹಾಗೂ ಮಾನದಂಡಗಳ, ತನ್ನ ಸಂಕುಚಿತ ತರ್ಕಗಳ, ತಪ್ಪು ಅಭಿಪ್ರಾಯಗಳ, ತನ್ನ ಅಗಾಧವಾದ ಅಕ್ರಮಣಕಾರಿ ಅಜ್ಞಾನದ ಮತ್ತು ತನ್ನ ಅಲ್ಪ ಆತ್ಮವಿಶ್ವಾಸ, ಜ್ಞಾನದ

ಆಚೆಗಿನ ವಿಷಯಗಳನ್ನು ಸಹ ಪ್ರೀತಿಸಲಿಕ್ಕೆ ಈಡುಮಾಡುವ ನಿನ್ನ ಅಲ್ಪ ಐಹಿಕ ಮನಸ್ಸಿನಿಂದ, ಶ್ರೀಮಾತೆಯವರನ್ನು ತಿಳಿಯುವ ಹಾಗೂ ವಿಮರ್ಶಿಸುವ ಪ್ರಯತ್ನ ಮಾಡಬೇಡ. ತನ್ನ ಅರ್ಧ ಬೆಳಗಿದ ಅಸ್ಪಷ್ಟತೆಯ ಕಾರಾಗೃಹದಲ್ಲಿ ಬಂದಿಯಾದ ಮಾನವ ಮನಸ್ಸು ದಿವ್ಯಶಕ್ತಿಯ ಹೆಜ್ಜೆಗಳ ಬಹುಮುಖ ಸ್ವಾತಂತ್ರ್ಯವನ್ನು ಅನುಸರಿಸಲಾರದು. ಅವರ ನೋಟ ಹಾಗೂ ಕ್ರಿಯೆಯ ತೀವ್ರತೆ ಮತ್ತು ಸಂಕೀರ್ಣತೆ ಅದರ ಮುಗ್ಗರಿಸುವ ಗ್ರಹಿಕೆಯನ್ನು ಮೀರಿಸುತ್ತದೆ; ಅವರ ಚಲನೆಗಳ ಕ್ರಮಗಳು ಅದರ ಕ್ರಮಗಳಲ್ಲ. ಅವರ ಅನೇಕ ವಿಧದ ವ್ಯಕ್ತಿತ್ವಗಳ ವೇಗವಾದ ಬದಲಾವಣೆಗಳಿಂದ, ಅವರ ಲಯದ ರಚಿಸುವಿಕೆಯಿಂದ ಹಾಗೂ ಅವರ ಲಯದ ವಿರಮಿಸುವಿಕೆಯಿಂದ, ಅವರ ಚಲನೆಯ ಗತಿಯ ವೇಗವರ್ಧನೆಯಿಂದ ಮತ್ತು ಅವರ ವಿಳಂಬಗಳಿಂದ, ಒಂದು ಹಾಗೂ ಮತ್ತೊಂದು ಸಮಸ್ಯೆಯೊಂದಿಗೆ ವ್ಯವಹರಿಸುವ ಅವರ ಬಗೆಬಗೆಯ ಮಾರ್ಗಗಳಿಂದ, ಈಗ ಈ ಪಂಕ್ತಿಯ ಮತ್ತು ಈಗ ಆ ಪಂಕ್ತಿಯ ಅವರ ಮೇಲೆತ್ತುವಿಕೆಯಿಂದ ಹಾಗೂ ಪತನದಿಂದ ಮತ್ತು ಅವರ ಒಟ್ಟುಗೂಡಿಸುವಿಕೆ–ಯಿಂದ ದಿಗ್ಭ್ರಮೆಗೊಂಡ ಅದು ಅಜ್ಞಾನದ ಅವ್ಯವಸ್ಥೆಯ ಮುಖಾಂತರ ಸುತ್ತುತ್ತಿರುವಾಗ ಹಾಗೂ ಮೇಲ್ಗಡೆ ಪಸರಿಸುವಾಗ, ಸ್ವರ್ಗೀಯ ಪ್ರಕಾಶಕ್ಕೆ ಅದು ಸರ್ವೋಚ್ಚ ಶಕ್ತಿಯ ಮಾರ್ಗವನ್ನು ಮಾನ್ಯಮಾಡುವುದಿಲ್ಲ. ನಿಜವಾಗಿ ಅವರಿಗೆ ನಿನ್ನ ಆತ್ಮವನ್ನು ತೆರೆ ಹಾಗೂ ಚೈತ್ಯ ಸ್ವಭಾವದೊಂದಿಗೆ ಅವರ ಅನುಭವ ಪಡೆದು ಸಂತೃಪ್ತನಾಗಿರು ಮತ್ತು ಸತ್ಯಕ್ಕೆ ನೇರ ಪ್ರತಿಕ್ರಿಯೆ ಮಾಡುವ ಚೈತ್ಯ ದೃಷ್ಟಿಯೊಂದಿಗೆ ಅವರನ್ನು ಕಾಣು. ಆಗ ಶ್ರೀಮಾತೆಯವರು ತಾವಾಗಿಯೆ ಅವರ ಚೈತ್ಯ ಅಂಶಗಳಿಂದ ನಿನ್ನ ಮನಸ್ಸು ಹಾಗೂ ಹೃದಯ ಹಾಗೂ ಜೀವನ ಹಾಗೂ ಭೌತಿಕ ಪ್ರಜ್ಞೆಯನ್ನು ಪ್ರಕಾಶಪಡಿಸುತ್ತಾರೆ ಮತ್ತು ಅವುಗಳಿಗೆ ಅವರ ವಿಧಾನಗಳನ್ನು ಹಾಗೂ ಅವರ ಸ್ವಭಾವವನ್ನು ಕೂಡ ತಿಳಿಯಪಡಿಸುತ್ತಾರೆ.

ನಮ್ಮ ಒರಟಾದ ಮೇಲ್ಮೈ ಉದ್ದೇಶಗಳ ಪ್ರಕಾರ, ಸರ್ವಜ್ಞ ಮತ್ತು ಸರ್ವಶಕ್ತಿ ಯಾವಾಗಲೂ ಕಾರ್ಯನಿರ್ವಹಿಸಬೇಕೆಂಬ, ದೈವಿಕ ಶಕ್ತಿಯ ಮೇಲಿನ ಅಜ್ಞಾನ, ಮನಸ್ಸಿನ ಬೇಡಿಕೆಯ ದೋಷವನ್ನು ಸಹ ತಪ್ಪಿಸು. ಪವಾಡ ಶಕ್ತಿ ಮತ್ತು ಸರಳ ಯಶಸ್ಸು ಮತ್ತು ಬೆರಗುಗೊಳಿಸುವ ವೈಭವದಿಂದ ಪ್ರತಿ ತಿರುವಿನಲ್ಲಿಯೂ ನಮ್ಮ ಮನಸ್ಸು ಕೂಗಾಡುತ್ತದೆ; ಇಲ್ಲದಿದ್ದರೆ ದೈವಿಕತೆ ಇದೆ ಎಂದು ನಂಬಲು ಸಾಧ್ಯವಿಲ್ಲ. ಶ್ರೀಮಾತೆಯವರು ಅಜ್ಞಾನದ ಕ್ಷೇತ್ರಗಳಲ್ಲಿ ಅಜ್ಞಾನದೊಂದಿಗೆ ವ್ಯವಹರಿಸುತಿದ್ದಾರೆ;

ಅವರು ಅಲ್ಲಿ ಇಳಿದಿದ್ದಾರೆ ಮತ್ತು ಎಲ್ಲಕ್ಕಿಂತ ಮೇಲಲ್ಲ. ಅವರು ತಮ್ಮ ಜ್ಞಾನವನ್ನು ಮತ್ತು ತಮ್ಮ ಶಕ್ತಿಯನ್ನು ಭಾಗಶಃ ಮರೆಮಾಚುತ್ತಾರೆ ಮತ್ತು ಭಾಗಶಃ ಅನಾವರಣಗೊಳಿಸುತ್ತಾರೆ, ಆಗಾಗ್ಗೆ ಅವರು ತಮ್ಮ ಸಾಧನಗಳಿಂದ ಮತ್ತು ವ್ಯಕ್ತಿತ್ವಗಳಿಂದ ಹಿಂದೆ ಸರಿಯುತ್ತಾರೆ ಮತ್ತು ಅದರ ಬೆನ್ನಲ್ಲೆ ಅವರು ಅವುಗಳನ್ನು ಮನಸ್ಸನ್ನು ಹುಡುಕುವ ಮಾರ್ಗವನ್ನಾಗಿ, ಮಹತ್ವಾಕಾಂಕ್ಷೆ ಚೈತ್ಯದ ಮಾರ್ಗವನ್ನಾಗಿ, ಹೋರಾಡುವ ಪ್ರಾಣದ ಮಾರ್ಗವನ್ನಾಗಿ, ಬಂಧಿಸಲ್ಪಟ್ಟ ಹಾಗೂ ಬಳಲುತ್ತಿರುವ ದೈಹಿಕ ಸ್ವಭಾವದ ಮಾರ್ಗವನ್ನಾಗಿ ಪರಿವರ್ತಿಸಬಹುದು. ಸರ್ವೋಚ್ಚ ಸಂಕಲ್ಪದಿಂದ ಹಾಕಲ್ಪಟ್ಟ ಷರತ್ತುಗಳು ಅಲ್ಲಿವೆ, ಸಡಿಲಿಸಬೇಕಾದ ಅನೇಕ ಗೋಜಲಾದ ಮತ್ತು ಥಟ್ಟನೆ ತುಂಡು ತುಂಡಾಗಿ ಮಾಡಲಾರದ ಗಂಟುಗಳು ಅಲ್ಲಿವೆ. ಅಸುರರು ಹಾಗೂ ರಾಕ್ಷಸರು ಈ ವಿಕಸಿಸುವ ಐಹಿಕ ಪ್ರಕೃತಿಯನ್ನು ನಿಲ್ಲಿಸಿದ್ದಾರೆ ಮತ್ತು ಅವರ ಸ್ವಂತ ದೀರ್ಘ ವಶಪಡಿಸಿಕೊಂಡ ಕ್ಷೇತ್ರದಲ್ಲಿ ಹಾಗೂ ನಾಡಲ್ಲಿ ಅವರ ಸ್ವಂತ ಕರಾರುಗಳ ಮೇಲೆ ಭೇಟಿಯಾಗಬೇಕಾಗಿದೆ ಹಾಗೂ ಜಯಿಸಬೇಕಾಗಿದೆ; ನಮ್ಮಲ್ಲಿರುವ ಮಾನವನನ್ನು ಮುನ್ನಡೆಸಬೇಕು ಮತ್ತು ಅದರ ಮಿತಿಗಳನ್ನು ಮೀರಲು ಸಿದ್ಧರಾಗಿರಬೇಕು ಮತ್ತು ಅದನ್ನು ಮೀರಿದ ರೂಪಕ್ಕೆ ಇದ್ದಕ್ಕಿದ್ದಂತೆ ಮೇಲೇತ್ತಲು ಅದು ತುಂಬ ದುರ್ಬಲವಾಗಿದೆ ಹಾಗೂ ಅಸ್ಪಷ್ಟವಾಗಿದೆ. ದೈವ ಪ್ರಜ್ಞೆ ಮತ್ತು ಶಕ್ತಿ ಅಲ್ಲಿವೆ ಮತ್ತು ಪ್ರತಿ ಕ್ಷಣದಲ್ಲಿ ಶ್ರಮದ ಪರಿಸ್ಥಿತಿಗಳಲ್ಲಿ ಬೇಕಾದ ಕೆಲಸವನ್ನೂ ಮಾಡುತ್ತವೆ, ಯಾವಾಗಲೂ ಅಧಿಕೃತ ಆಜ್ಞೆಯಂತೆ ಕ್ರಮ ತೆಗೆದುಕೊಳ್ಳುತ್ತವೆ ಮತ್ತು ಕುಂದುಕೊರತೆಗಳ ಮಧ್ಯೆ ಹೊರಹೊಮ್ಮಬೇಕಾದ ಪರಿಪೂರ್ಣತೆಯನ್ನು ನಿರ್ಮಿಸುತ್ತವೆ. ಆದರೆ ನಿನ್ನಲ್ಲಿ ಅತಿಮಾನಸವು ಅವತರಣಗೊಂಡಾಗ ಮಾತ್ರ ಈ ಅತಿಮಾನಸ ಸ್ವಭಾವದೊಂದಿಗೆ ಅತಿಮಾನಸ ಶಕ್ತಿಯಾಗಿ ನೇರವಾಗಿ ಅವರು ವ್ಯವಹರಿಸುತ್ತಾರೆ. ಒಂದು ವೇಳೆ ನೀನು ನಿನ್ನ ಮನಸ್ಸನ್ನು ಅನುಸರಿಸಿದರೆ, ಶ್ರೀಮಾತೆಯವರು ನಿನ್ನ ಮುಂದೆ ಪ್ರಕಟವಾದಾಗ ಸಹ ಅದು ಗುರುತಿಸುವುದಿಲ್ಲ. ನಿನ್ನ ಆತ್ಮವನ್ನು ಅನುಸರಿಸು, ಮನಸ್ಸನ್ನಲ್ಲ. ಸತ್ಯಕ್ಕೆ ಉತ್ತರಿಸುವ ನಿನ್ನ ಆತ್ಮವನ್ನು ಅನುಸರಿಸು, ನೋಟಗಳಲ್ಲಿ ನೆಗೆಯುವ ನಿನ್ನ ಮನಸ್ಸನ್ನಲ್ಲ; ದೈವೀ ಶಕ್ತಿಯನ್ನು ನಂಬು ಮತ್ತು ಅವರು ನಿನ್ನಲ್ಲಿಯ ದೈವದಂಥಹ ಮೂಲವಸ್ತುಗಳನ್ನು ಬಿಡುಗಡೆಗೊಳಿಸುತ್ತಾರೆ ಮತ್ತು ದಿವ್ಯ ಪ್ರಕೃತಿಯ ಭಾವದಲ್ಲಿ ಎಲ್ಲವನ್ನೂ ರೂಪಿಸುತ್ತಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/25–26**



## ಸಂಪೂರ್ಣ ಸ್ವಯಂ ನೀಡುವಿಕೆ

*ಸಂಪೂರ್ಣವಾಗಿ ಮುಕ್ತ, ಸ್ಪಷ್ಟ ಮತ್ತು ಶುದ್ಧ*

*(ಇದು ಶ್ರೀಮಾತೆಯು ಪುಷ್ಪಕ್ಕೆ ನೀಡಿರುವ ಅಧ್ಯಾತ್ಮಿಕ ಮಹತ್ವ ಹಾಗೂ ವಿವರಣೆಗಳು)*

*ಸಸ್ಯಶಾಸ್ತ್ರೀಯ ಹೆಸರು:* ಇಪೊಮೊಯಿಂ ಅಲ್ಬಾ

**ಅತಿಮಾನಸ ಬದಲಾವಣೆ**

ಭೂ–ಪ್ರಜ್ಞೆಯ ವಿಕಸನದಲ್ಲಿ ಅತಿಮಾನಸ ಬದಲಾವಣೆಯು ಒಂದು ಆಜ್ಞೆ ಹಾಗೂ ಅನಿವಾರ್ಯವಾದ ವಿಷಯವಾಗಿದೆ; ಏಕೆಂದರೆ ಅದರ ಮೇಲ್ಮುಖ ಆರೋಹಣವು ಕೊನೆಗೊಂಡಿಲ್ಲ ಮತ್ತು ಮನಸ್ಸು ಅದರ ಕೊನೆಯ ಶಿಖರವಲ್ಲ. ಆದರೆ ಆ ಬದಲಾವಣೆ ಬರಬಹುದು, ರೂಪ ಪಡೆದುಕೊಳ್ಳಬಹುದು ಮತ್ತು ಸಹಿಸಿಕೊಳ್ಳಬಹುದು, ಬೆಳಕು ಬಂದಾಗ ಅದನ್ನು ಗುರುತಿಸುವ ಮತ್ತು ನಿರಾಕರಿಸಲಾಗದ ಬಯಕೆಯೊಂದಿಗೆ ಕೆಳಗಿನಿಂದ ಕರೆಯ ಅಗತ್ಯವಿದೆ, ಮತ್ತು ಮೇಲಿನಿಂದ ಪರಮಾತ್ಮನ ಅನುಮತಿಯ ಅಗತ್ಯವಿದೆ. ಅನುಮೋದನೆ ಮತ್ತು ಕರೆಯ ನಡುವೆ ಮಧ್ಯಸ್ಥಿಕೆ ವಹಿಸುವ ಶಕ್ತಿಯು ಶ್ರೀಮಾತೆಯವರ ಉಪಸ್ಥಿತಿ ಮತ್ತು ಶಕ್ತಿ. ಅಸ್ಪಷ್ಟತೆಯ ಹಾಗೂ ಸಾವಿನ ಹಾಗೂ ಬಳಲುವ ಸತ್ಯದ ಮತ್ತು ಬೆಳಕಿನ ಹಾಗೂ ದಿವ್ಯ ಜೀವನದ ಹಾಗೂ ಅಮರ್ತ್ಯದ ಆನಂದದ ಈ ಜಗತ್ತಿಗೆ ಶ್ರೀಮಾತೆಯವರ ಶಕ್ತಿ ಮಾತ್ರ ಮುಚ್ಚಳವನ್ನು ಕಿತ್ತು ಹಾಕಿ ಮತ್ತು ಹೊದಿಕೆಯನ್ನು ಹರಿದು ಮತ್ತು ಪಾತ್ರೆಯನ್ನು ನಿರ್ಮಿಸಿ ಕೆಳಗಡೆ ತರುತ್ತದೆ ಮತ್ತು ಯಾವುದೇ ಮಾನವ ಪ್ರಯತ್ನ ಹಾಗೂ ತಪಸ್ಸುಗಳಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/17–26 – ಶ್ರೀ ಅರವಿಂದರು**



## ಅತಿಮಾನಸ ಅಭಿವ್ಯಕ್ತಿ

ಇದು *ಸ್ವಾಗತಿಸಲ್ಪಡುವುದು (ಇದು ಸ್ವಾಗತಾರ್ಹ)*

*((ಇದು ಶ್ರೀಮಾತೆಯು ಪುಷ್ಪಕ್ಕೆ ನೀಡಿರುವ ಅಧ್ಯಾತ್ಮಿಕ ಮಹತ್ವ ಹಾಗೂ ವಿವರಣೆಗಳು)*

*ಸಸ್ಯಶಾಸ್ತ್ರೀಯ ಹೆಸರು:* ಸ್ಕಾಡೊಕ್ಸಸ್ ಮಲ್ಟಿಫ್ಲೋರಸ್

# ಹನ್ನೆರಡು ಗುಣಲಕ್ಷಣಗಳು

– ಅನುವಾದ: ಡಾ॥ ಬಲಭೀಮ ಭೀಡ, ರಾಯಚೂರು

ಈ ಹನ್ನೆರಡು ಗುಣಗಳಿಗಾಗಿ ನಾನು ಹುಡುಕಾಡುತ್ತಿದ್ದೆ ಎಂದು ಕಳೆದ ಬಾರಿ ಹೇಳಿದ್ದೆ. (ಶ್ರೀಮಾತೆಯವರು ಒಂದು ಹಾಳೆ ಹೊರತೆಗೆಯುತ್ತಾರೆ) ಅವುಗಳನ್ನು ಯಾರೋ ಹುಡುಕಿಕೊಟ್ಟಿದ್ದಾರೆ, ಅವು ಹೀಗಿವೆ..

| | | | |
|---|---|---|---|
| (1) ಪ್ರಾಮಾಣಿಕತೆ | (2) ವಿನಮ್ರತೆ | (3) ಕೃತಜ್ಞತೆ | (4) ತಾಳ್ಮೆ |
| (5) ಅಭೀಪ್ಸೆ | (6) ಗ್ರಹಣಶೀಲತೆ | (7) ಪ್ರಗತಿ | (8) ಧೈರ್ಯ |
| (9) ಒಳ್ಳೆಯತನ | (10) ಔದಾರ್ಯ | (11) ಸಮಾನತೆ | (12) ಶಾಂತಿ |

ಮೊದಲ ಎಂಟು ಗುಣಗಳು ಭಗವಂತನೆಡೆಗಿನ ಒಲವಿಗೆ ಸಂಬಂಧಪಟ್ಟಿದ್ದರೆ ಉಳಿದ ನಾಲ್ಕು ಗುಣಗಳು ಮಾನವೀಯತೆಗೆ ಸಂಬಂಧಪಟ್ಟಿವೆ.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಜನವರಿ 19, 1972**

ಇವುಗಳ ಆಳವಾದ ವೈಶಿಷ್ಟ್ಯಗಳ ಬಗ್ಗೆ ನಾನು ಲೆಮ್ಸೆನ್‌ನಲ್ಲಿ ಇದ್ದಾಗ ತಿಳಿಯಿತು. ನಾನು ಆಗ ಅಧಿಮಾನಸ ಸ್ತರದಲ್ಲಿ ಇದ್ದೆ. ಈ ಬೇರೆ ಬೇರೆ ಲೋಕಗಳಿಗೆ ಥಿಯಾನ್ ಯಾವ ಯಾವ ಹೆಸರು ಕೊಟ್ಟಿದ್ದ ಎಂಬುದು ನನಗೀಗ ಸರಿಯಾಗಿ ನೆನಪಿಲ್ಲ. ಆದರೆ ಅದು ಶ್ರೀ ಅರವಿಂದರು ಹೇಳುವ ಉನ್ನತವಾದ ಹಾಗೂ ಪ್ರಕಾಶಮಾನವಾದ ಅಧಿಮಾನಸಕ್ಕೆ ಮಾತ್ರ ಖಂಡಿತವಾಗಿ ಸಂವಾದಿಯಾಗಿತ್ತು ಎಂದು ಅನಿಸುತ್ತದೆ. ಅದು ದೇವತೆಗಳ ಸ್ತರಕ್ಕಿಂತ ತುಸು ಮೇಲೆ, ಸ್ವಲ್ಪ ಮೇಲೆ ಇತ್ತು. ಅಷ್ಟೇ ಅಲ್ಲ, ಅದು ಅಧಿಮಾನಸದ ಸೃಷ್ಟಿಯ ಜೊತೆಗೆ ಸಮರಸವಾಗಿತ್ತು. ಅಂದರೆ ದೇವತೆಗಳ ಪ್ರಭಾವದಡಿಯಲ್ಲಿ ಇರುವ ಭೂಮಿಯ ಜೊತೆ ಸಹಭಾಗಿಯಾಗಿತ್ತು. ಅಲ್ಲಿ ಇವೆಲ್ಲವೂ ಜೀವಂತ ಅರ್ಥವನ್ನು ಪ್ರತಿನಿಧಿಸುತ್ತಿರುವಂತೆ ತೋರುವವು. – ಇದೇನೂ ಕೇವಲ ಮಾನಸಿಕ ಪರಿಕಲ್ಪನೆ ಅಲ್ಲ, ಜೀವಂತವಾಗಿ ಅರ್ಥೈಸಿಕೊಳ್ಳುವಿಕೆ. – ಆಗ ಶ್ರೀಮತಿ ಥಿಯಾನ್ ನನ್ನನ್ನು ಗುರುತಿಸಿದಳು. ನನ್ನ ತಲೆಯ ಮೇಲೆ ಆಕೆ ಹನ್ನೆರಡು ಮುತ್ತುಗಳ ಕಿರೀಟದಾಕಾರದ ರಚನೆಯನ್ನು ಕಂಡಳು. ಆಕೆ ನನಗೆ ಹೇಳಿದ್ದೇನೆಂದರೆ, “ನೀನು ಸಾಕ್ಷಾತ್ತಾಗಿ ಆ ತತ್ ಆಗಿರುವಿ. ಕೇವಲ ಆ ತತ್ ಮಾತ್ರ ಇದನ್ನು ಹೊಂದಿರಲು ಸಾಧ್ಯ.”

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ**

**ಹನ್ನೆರಡು ಗುಣಲಕ್ಷಣಗಳು:**

## ಪ್ರಾಮಾಣಿಕತೆ



ಮೊಟ್ಟಮೊದಲ ಸಂಗತಿ ಏನೆಂದರೆ, ನಮ್ಮನ್ನು ನಾವು ಮೋಸಗೊಳಿಸಿಕೊಳ್ಳಬಾರದು. ಎಲ್ಲರಿಗೂ ಗೊತ್ತು, ಆ ಭಗವಂತನನ್ನು ಯಾರೂ ಮೋಸಗೊಳಿಸಲಾರರು. ಅತ್ಯಂತ ಚಾಣಾಕ್ಷನಾದ ಅಸುರನೂ ಕೂಡ ಭಗವಂತನನ್ನು ಮೋಸಗೊಳಿಸಲಾರನು. ಆದರೆ ಇದೆಲ್ಲಾ ಗೊತ್ತಿದ್ದೂ, ತನ್ನದೆ? ಬದುಕಿನಲ್ಲಿ, ತನ್ನ ದೈನಂದಿನ ಜೀವನದಲ್ಲಿ, ಮನುಷ್ಯ ತನ್ನನ್ನು ತಾನೇ ಮೋಸಗೊಳಿಸುವುದನ್ನು ನಾವು ಅನೇಕ ಬಾರಿ ಕಾಣುತ್ತೇವೆ. ಮನುಷ್ಯ ತನಗೆ ಗೊತ್ತಿಲ್ಲದೇ ಕೂಡ ಹಾಗೆ ಮಾಡುತ್ತಿರುತ್ತಾನೆ. ಏನೋ ಸಹಜವಾಗಿ ಹಾಗೆ ಮಾಡಿ ಬಿಡುತ್ತಾನೆ. ಆಮೇಲೆ ತಾನು ಮಾಡಿದುದನ್ನು ಸಮರ್ಥಿಕೊಳ್ಳಲು ಅನೇಕ ಕಾರಣಗಳನ್ನು ನೀಡುತ್ತ ಹೋಗುತ್ತಾನೆ. ತನ್ನ ಮಾತು, ತನ್ನ ಕೃತಿ ಎಲ್ಲವನ್ನೂ ಸಮರ್ಥಿಸುತ್ತ ಹೋಗುತ್ತಾನೆ. ಮೊದಮೊದಲು ಇದು ಹೀಗೆಯೇ, ಮೊದಲು ಜಗಳ ಆಡುವುದು, ಆನಂತರ ನನ್ನದೇನೂ ತಪ್ಪಿಲ್ಲ, ಇದೆಲ್ಲ ಅವರದೇ ತಪ್ಪು. ಅವರೇ ಮಾಡಿದ್ದು. ಎಂದು ವಾದಿಸುತ್ತಾರೆ ಹೋಗುತ್ತಾರೆ. ನಾನು ಇಲ್ಲಿ ಇಂಥ ಸ್ಪಷ್ಟ ಸಂಗತಿಗಳ ಬಗ್ಗೆ ಹೇಳುತ್ತಿಲ್ಲ, ಕೇವಲ ಸಣ್ಣ, ತೀರ ಸಣ್ಣ ಸಂಗತಿಗಳನ್ನು ಕುರಿತು ಇಲ್ಲಿ ಹೇಳುತ್ತಿದ್ದೇನೆ.

ಒಂದು ಮಗು ಮೊದಲು ಒಂದುಸಲ ಬಾಗಿಲು ತಟ್ಟುತ್ತದೆ, ಆಮೇಲೆ ಕಾಲಿನಿಂದ ಒದ್ದು ನೂಕಿ ತೆರೆಯಲು ಪ್ರಯತ್ನ ಮಾಡುತ್ತದೆ. ಈ ಸಂಗತಿ ಕೂಡ ಅದೇ ರೀತಿಯದು. ಯಾವಾಗಲೂ ತಪ್ಪು ಬೇರೆಯವರದೇ, ಬೇರೆಯವರೇ ತಪ್ಪು ಮಾಡುತ್ತಾರೆ, ತಾನು ಮಾಡುವುದಿಲ್ಲ ಎನ್ನುವ ಮನೋಭಾವ ಇದು. ಇಂತಹ ಮಗುವಿನ ಮನಃಸ್ಥಿತಿಯನ್ನು ನೀವು ದಾಟುತ್ತೀರಿ, ನಿಮಗೆ ಒಂದಿಷ್ಟು ಬುದ್ಧಿ, ತರ್ಕ ಬಂದಿರುತ್ತದೆ, ಆಗಲೂ ಸಹ ನೀವು ಏನುಮಾಡುತ್ತೀರಿ ಅಂದರೆ – "ಅವನು ಹಾಗೆ ಮಾಡದೇ ಇದ್ದಿದ್ದರೆ ನಾನೂ ಹೀಗೆ ಮಾಡುತ್ತಿರಲಿಲ್ಲ" ಎಂದು ಕ್ಷುಲ್ಲಕ ನೆಪಗಳನ್ನು ಹೇಳುತ್ತಾ ಹೋಗುತ್ತೀರಿ. ಆದರೆ ವಾಸ್ತವಿಕತೆಯು ಇದಕ್ಕೆ ವಿರುದ್ಧವಾಗಿಯೂ ಇದ್ದಿರಲು ಸಾಧ್ಯ!

ನಾನು ಇದನ್ನು ನಿಷ್ಠೆ ಅಥವಾ ಪ್ರಾಮಾಣಿಕತೆ ಎಂದು ಕರೆಯುತ್ತೇನೆ. ಈಗ ನೀವು ಬೇರೆಯವರ ಜೊತೆಗೆ ಇರುವಿರಿ ಎಂದುಕೊಳ್ಳಿ, ನಿಮ್ಮ ತಕ್ಷಣದ ಪ್ರತಿಕ್ರಿಯೆ ಹೇಗಿರಬೇಕು ಎಂದರೆ, ಬೇರೆಯವರು ಏನೇ ಮಾಡಿದರೂ, ತಪ್ಪೇ ಮಾಡಿದರೂ

ಕೂಡ ನೀವು ಮಾತ್ರ ಸರಿಯಾದುದನ್ನೇ ಮಾಡಬೇಕು. ನಿಮ್ಮ ಜೊತೆಗಿದ್ದವರು ಹಾಗೆ ಮಾಡಲಿಕ್ಕಿಲ್ಲ, ನೀವು ಮಾತ್ರ ಯೋಗ್ಯವಾದದ್ದನ್ನೇ ಮಾಡಬೇಕು. ಯಾರೊಬ್ಬರು ಸಿಟ್ಟಿಗೇಳುವಂತಹ ಸಾಮಾನ್ಯ ಸಂಗತಿಯನ್ನು ತೆಗೆದುಕೊಳ್ಳಿ, ಅವರಿಗೆ ನೋವು ಆಗುವಂತಹ ಮಾತು ಹೇಳುವ ಬದಲು ನೀವು ಏನೂ ಮಾತನಾಡಬೇಡಿ, ಸುಮ್ಮನಿದ್ದುಬಿಡಿ, ಶಾಂತವಾಗಿ ಕುಳಿತುಕೊಂಡುಬಿಡಿ, ನಿಮಗೆ ಆಗ ನಿಜವಾಗಿಯೂ ಸಿಟ್ಟುಬರುವುದಿಲ್ಲ, ಸಿಟ್ಟಿನ ಸಂಸರ್ಗ ಆಗುವುದೇ ಇಲ್ಲ. ಇಷ್ಟೇ, ಆದರೆ ನೀವು ಮಾಡಬೇಕಾದುದೇನೆಂದರೆ ಹೀಗೆ ಮಾಡುವುದು ಸುಲಭವೋ ಅಲ್ಲವೋ, ಸಾಧ್ಯವೋ ಅಲ್ಲವೋ ಎಂಬುದನ್ನು ನಿಮ್ಮೊಳಗೆ ನೀವೇ ನೋಡಿಕೊಳ್ಳಬೇಕು. ಇದು ಅತಿ ಪ್ರಾಥಮಿಕ ಸಂಗತಿ. ನೀವು ಎಷ್ಟರಮಟ್ಟಿಗೆ ಪ್ರಾಮಾಣಿಕರಾಗಿರುವಿರಿ ಎಂಬುದನ್ನು ತಿಳಿದುಕೊಳ್ಳುವ ಆರಂಭದ ಕ್ರಿಯೆ ಮಾತ್ರ. ಕೆಲವರಂತೂ ಎಲ್ಲಾ ತರಹದ ಸಂಸರ್ಗಗಳಿಗೂ ಒಳಗಾಗುವಂಥವರಿರುತ್ತಾರೆ – ಹಾಸ್ಯಕ್ಕೂ ಹಾಗೆಯೇ ಒಳಗಾಗುತ್ತಾರೆ, ಬೇರೆಯವರು ಮಾಡಿದ ತಪ್ಪುಗಳನ್ನು ತಾವೂ ಮಾಡುತ್ತಾರೆ. ಅಂಥವರ ಬಗ್ಗೆ ನಾನು ಇಲ್ಲಿ ಹೇಳುತ್ತಿಲ್ಲ.

ನಾನು ಹೇಳುವುದೇನೆಂದರೆ, ನಿಮ್ಮನ್ನು ನೀವೇ ತೀಕ್ಷ್ಣವಾಗಿ ಪರಿಶೀಲಿಸಿಕೊಂಡರೆ, ನಿಮ್ಮೊಳಗೆ ಇರುವ ಅನೇಕ ಅಪ್ರಾಮಾಣಿಕ ಅಂಶಗಳು, ನಿಷ್ಠಾರಹಿತ ಭಾಗಗಳು ನಿಮಗೆ ಗೊತ್ತಾಗುತ್ತವೆ. ನೀವು ಪ್ರಾಮಾಣಿಕವಾಗಿ ಮಾಡುತ್ತಿದ್ದರೂ ಅಂಥ ನೂರಾರು ಅಂಶಗಳು ನಿಮ್ಮೊಳಗೆ ಇರುವುದು ನಿಮಗೆ ಗೊತ್ತಾಗುವುದು. ಹಾಗೂ ನಿಜವಾಗಿಯೂ ಪ್ರಾಮಾಣಿಕವಾಗಿರುವುದು ಎಷ್ಟು ಕಠಿಣ ಎಂಬುದು ಅರಿವಾಗುವುದು.

ಪರಿಪೂರ್ಣವಾಗಿ ಪ್ರಾಮಾಣಿಕರಾಗಿರಬೇಕೆಂದರೆ ನಿಮಗೆ ನಿಮ್ಮದೇ ಆದ ಬೇಕು ಬೇಡಗಳಿರಬಾರದು, ಬಯಕೆಗಳಿರಬಾರದು, ಆಕರ್ಷಣೆ ವಿಕರ್ಷಣೆಗಳಿರಬಾರದು, ವೈಯಕ್ತಿಕ ಸಹಾನುಭೂತಿ ಅಸಹನೆ ಇರಬಾರದು, ವಸ್ತುವನ್ನು ಅದು ಇರುವಂತೆ, ವಾಸ್ತವವಾಗಿ, ಇಡಿಯಾಗಿ ಹಾಗೂ ಸಮಗ್ರವಾಗಿ ನೋಡಲು ಬರಬೇಕು. ಆಗ ಎಲ್ಲವೂ ತಮ್ಮ ತಮ್ಮ ಜಾಗದಲ್ಲಿ ಸರಿಯಾಗಿ ಇವೆ ಎನ್ನುವುದು ಗೊತ್ತಾಗುವುದು. ಎಲ್ಲವನ್ನೂ ಒಂದೇ ದೃಷ್ಟಿಯಿಂದ ನೋಡಲು ಬರುವುದು. ಅದು ನಿಜವಾದ ದೃಷ್ಟಿ!

*

ನಿಷ್ಠೆ ಅಥವಾ ಪ್ರಾಮಾಣಿಕತೆ ಸತ್ತೆಯ ಎಲ್ಲಾ ಕ್ರಿಯೆಗಳನ್ನು, ಚಲನೆಗಳನ್ನು ಅತ್ಯಂತ ಉನ್ನತವಾದ ಪ್ರಜ್ಞೆಯ ಸ್ತರಕ್ಕೆ ಹಾಗೂ ಅದಾಗಲೇ ಸಿದ್ಧಿಸಿರುವ ಸಾಕ್ಷಾತ್ಕಾರದ ಮಟ್ಟಕ್ಕೆ ಎತ್ತರಿಸುವುದೇ ಆಗಿದೆ.

ನಿಷ್ಠೆಯು ಅಥವಾ ಪ್ರಾಮಾಣಿಕತೆಯು ಇಡೀ ಸತ್ತೆಯನ್ನು ಅದರ ಎಲ್ಲಾ ಭಾಗಗಳನ್ನು ಕ್ರಿಯೆಗಳನ್ನು ದೈವೀ ಕೇಂದ್ರದ ಸುತ್ತ ಒಟ್ಟುಗೂಡಿಸಿ, ಎಲ್ಲವನ್ನೂ ಸಮನ್ವಯಗೊಳಿಸಿ ಏಕೀಕೃತ ಮಾಡುತ್ತದೆ.

*

ನಿಮ್ಮಲ್ಲಿ ನಿಷ್ಠೆ ಪ್ರಾಮಾಣಿಕತೆ ಇದ್ದರೆ ಖಂಡಿತವಾಗಿಯೂ ಸಹಾಯ ಸಹಕಾರ ದೊರೆಯುವುದು. ಖಂಡಿತವಾಗಿಯೂ ಮಾರ್ಗದರ್ಶನ ಲಭಿಸುವುದು. ದೈವೀ ಅನುಗ್ರಹ ಸದಾ ಇದ್ದೇ ಇರುವುದು. ನೀವು ಬಹುಕಾಲ ಕಾಯಬೇಕಾಗಿಲ್ಲ ದೈವೀ ಪ್ರತಿಕ್ರಿಯೆ ಶೀಘ್ರ ದೊರೆಯುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/6; 8/398; 14/65; 3/192 – ಶ್ರೀಮಾತೆ**



## ಸರಳ ಪ್ರಾಮಾಣಿಕತೆ

*ಎಲ್ಲ ಪ್ರಗತಿಯ ಆರಂಭ*

*(ಇದು ಶ್ರೀಮಾತೆಯು ಪುಷ್ಪಕ್ಕೆ ನೀಡಿರುವ ಅಧ್ಯಾತ್ಮಿಕ ಮಹತ್ವ ಹಾಗೂ ವಿವರಣೆಗಳು)*

*ಸಸ್ಯಶಾಸ್ತ್ರೀಯ ಹೆಸರು: ಆಸ್ಟರ್ ಅಮೆಲ್ಲಸ್*

## ವಿನಮ್ರತೆ



ವಿನಮ್ರತೆಯ ಅವಶ್ಯಕತೆ ಕುರಿತು ಸದಾ ಚರ್ಚೆ ಆಗುತ್ತಲೇ ಇರುತ್ತದೆ, ಆದರೂ ಇದರ ಬಗ್ಗೆ ತಪ್ಪು ಕಲ್ಪನೆ ತಪ್ಪಿದ್ದಲ್ಲ. ಇದನ್ನು ಯಾವಾಗಲೂ ಎಲ್ಲರೂ ಅಪಾರ್ಥ ಮಾಡಿಕೊಳ್ಳುತ್ತಾರೆ, ತಪ್ಪಾದ ರೀತಿಯಲ್ಲಿಯೇ ಬಳಸುತ್ತಾರೆ ಕೂಡಾ. ಸರಿಯಾದ ರೀತಿಯಲ್ಲಿ ಇರುವುದು ಸಾಧ್ಯವಾದರೆ ನೀವು ನಿಜವಾಗಿಯೂ ವಿನಯಶೀಲರಾಗಿರಿ. ಆದರೆ ತಪ್ಪು ರೀತಿಯಲ್ಲಿ ವಿನಯ ತೋರಿಸಬೇಡಿರಿ. ಅದರಿಂದ ಯಾರಿಗೂ ಏನೂ ಉಪಯೋಗವಿಲ್ಲ. ಒಂದು ಸಂಗತಿ ನೆನಪಲ್ಲಿಡಿ, ಒಣ ಜಂಭ ಎನ್ನುವ ಕೆಟ್ಟ ಕಳೆ ಇದೆಯಲ್ಲ ಅದನ್ನು ಕಿತ್ತು ಎಸೆಯಿರಿ. ಅಂದಾಗ ಮಾತ್ರ ನೀವು ಏನನ್ನಾದರೂ ಸಾಧಿಸಿದಂತೆ ಆದೀತು. ಅದು ಎಷ್ಟು ಕಠಿಣ ಎಂಬುದು ನಿಮಗೂ ಗೊತ್ತಿದೆ.

ಒಳಗಿಂದೊಳಗೇನೇ ಉಬ್ಬಿಕೊಳ್ಳದೇ (ನಿಮಗೆ ಅರಿವಿದ್ದರೂ ಸಹ) ನಿಮ್ಮ ಅಹಂ ಅಥವಾ ಜಂಭ ತೃಪ್ತಿ ಆಗದ ಹೊರತು ಯಾವ ಒಳ್ಳೆಯ ಕೆಲಸ ಮಾಡುವುದೂ ನಿಮ್ಮಿಂದ ಸಾಧ್ಯವಾಗುವುದಿಲ್ಲ. ಒಂದು ಒಳ್ಳೆಯ ಸಣ್ಣ ಆಲೋಚನೆ ಕೂಡ ನಿಮಗೆ ಬರುವುದಿಲ್ಲ. ನೀವು ಸರಿಯಾಗಿ ಕೆಲಸ ಮಾಡುವುದು ಸಾಧ್ಯವಿಲ್ಲ. ತುಸು ಮಾತ್ರದ ಪ್ರಗತಿಯೂ ಆಗುವುದಿಲ್ಲ. ಆದ್ದರಿಂದ ನೀವು ನಿಮ್ಮ ಜಂಭವನ್ನು, ಅಹಮಿಕೆಯನ್ನು ಜೋರಾಗಿ ಕುಟ್ಟಿ ಪುಡಿ ಮಾಡಬೇಕು; ಆಮೇಲೆ ಕೂಡ ನೀವು ಪುಡಿ ಮಾಡಿದ ಕಣಗಳೇ ಪುನಃ ಬೆಳೆಯುವ ಸಾಧ್ಯತೆ ಇದೆ. ಆ ಕಸ ಪುನಃ ಪುನಃ ನಿಮ್ಮನ್ನು ವಂಚಿಸುತ್ತ ಬೆಳೆಯಬಹುದು. ನಿಮ್ಮ ಜೀವನವಿಡೀ ಅದನ್ನು ಬೇರುಸಹಿತ ಕಿತ್ತು ಹಾಕಲು ನೀವು ಪ್ರಯತ್ನ ಮಾಡುತ್ತಾ ಹೋದರೂ ನಿಮ್ಮ ಕಣ್ಣಿಗೆ ಕಾಣದಂತೆ ಅದು ಸಣ್ಣದಾಗಿ ಬೆಳೆಯುತ್ತ ಹೋಗಬಹುದು. ನೀವೇನೋ ಅದು ಹೋಗಿದೆ ಎಂದು ಭಾವಿಸಿ, ನಮ್ರತೆ ನಟಿಸುತ್ತ "ವೈಯಕ್ತಿಕವಾಗಿ ನಾನು ಅದನ್ನು ಮಾಡಲಿಲ್ಲ, ಭಗವಂತನೇ ಅದನ್ನು ಸಾಧ್ಯವಾಗಿಸಿದ್ದಾನೆ, ಅವನಿಲ್ಲದೆ ಇದು ಸಾಧ್ಯ ವಿಲ್ಲ, ಅವನಿಲ್ಲದೆ ನಾನೆಷ್ಟರವನು?" ಎಂದು ಹೇಳುತ್ತೀರಿ, ಮರುಕ್ಷಣವೇ ನಿಮಗೆ ಈ ತೆರನಾದ ಆಲೋಚನೆ ಹೊಳೆದದ್ದಕ್ಕೇ ಸಂತೋಷವಾಗಿಬಿಡುತ್ತದೆ, ತೃಪ್ತಿಯಾಗಿಬಿಡುತ್ತದೆ. (ಇದೂ ಕೂಡ ಜಂಭದ ಲಕ್ಷಣವೇ).

*ಪ್ರಶ್ನೆ: ಹಾಗಾದರೆ, ನಮ್ರತೆಯ ಸರಿಯಾದ ದಾರಿ ಯಾವುದು, ತಪ್ಪು ದಾರಿ ಯಾವುದು?*

ತುಂಬ ಸರಳ, ನೀವು ನಮ್ರತೆಯಿಂದ ಇರಬೇಕು ಎಂದು ಹೇಳಿದಾಕ್ಷಣ ಬೇರೆಯವರ ಎದುರಿನಲ್ಲಿ ನಮ್ರರಾಗಿ ನಡೆದುಕೊಳ್ಳಬೇಕೆಂದು ಅರ್ಥವಲ್ಲ. ಅಂಥ ನಮ್ರತೆ ತಪ್ಪು, ನೀವು ಭಗವಂತನ ಎದುರಲ್ಲಿ ನಮ್ರರಾಗಿರಬೇಕು. ಅಂಥ ನಮ್ರತೆ ಜೀವಂತಿಕೆಯಿಂದ ಕೂಡಿರಬೇಕು. ಆ ಭಗವಂತನ ವಿನಃ ಏನೂ ನಡೆಯುವುದಿಲ್ಲ, ಅವನ ವಿನಃ ಯಾವುದೂ ಅರ್ಥ ಕೂಡ ಆಗುವುದಿಲ್ಲ, ಯಾರು ಎಷ್ಟೇ ಸಮರ್ಥರಾಗಿದ್ದರೂ, ಅಸಾಧಾರಣ ಬುದ್ಧಿಯುಳ್ಳವರಾಗಿದ್ದರೂ ದೈವೀ ಪ್ರಜ್ಞೆಯ ಸಮ್ಮುಖದಲ್ಲಿ ಯಾರೂ ಏನೂ ಅಲ್ಲ ಎಂಬ ಭಾವ ನಿರಂತರ ಜೀವಂತವಾಗಿ ಜಾಗೃತವಾಗಿರಬೇಕು. ಅಂದರೆ ಮಾತ್ರ ನಿಜವಾದ ರೀತಿಯಲ್ಲಿ ಏನನ್ನಾದರೂ ಸ್ವೀಕರಿಸಲು, ಏನನ್ನಾದರೂ ಸಾಧಿಸಲು ಬರುತ್ತದೆ. ಇಂಥ ವಿನಮ್ರ ಮನೋಭಾವವು ಭಗವಂತನಿಗೆ ವಿರೋಧವಾಗಿ ಯಾವ ನೆಪವನ್ನೂ ಒಡ್ಡುವುದಿಲ್ಲ.


*

*ಪ್ರಶ್ನೆ: ಶ್ರೀಮಾತೆಯವರೇ, ನಾವು ಏನನ್ನಾದರೂ ಮಾಡಿದಾಗ ನಮ್ಮೊಳಗಿನದೇ ಯಾವುದೋ ಒಂದು ಅಂಶವು ತೃಪ್ತಿ ಹೊಂದುತ್ತದೆ, ಆತ್ಮ ಪ್ರಶಂಸೆ ಮಾಡಿಕೊಂಡು ಸಂತಸ ಪಡುತ್ತದೆ. ಈ ಸ್ಥಿತಿ ಎಲ್ಲವನ್ನೂ ಹಾಳುಗೆಡವುತ್ತದೆ. ಇದರಿಂದ ಪಾರಾಗುವುದು ಹೇಗೆ?*

ಓಹ್, ಇದರಿಂದಲೇ ತಿಳಿಯುತ್ತದೆ ಆ ಒಣ ಜಂಭ, ಅಥವಾ ಆತ್ಮ ಪ್ರಶಂಸೆ ಏನು ಮಾಡುತ್ತದೆ ಎಂಬುದು! ಯಾರು ಏನೇ ಮಾಡುತ್ತಿರಲಿ ಅವರ ಒಳಗಿನ ಒಂದು ಅಂಶವು ಅವರು ಮಾಡುವುದನ್ನು ನೋಡುತ್ತಿರುತ್ತದೆ. ಯಾರಿಗೇ ಆಗಲಿ ಗರ್ವ ಅಥವಾ ಹೆಮ್ಮೆ ಅಡರಿಕೊಂಡಿತೆಂದರೆ ಅದು ಅವರ ಪ್ರಯತ್ನದ ಬಹುಪಾಲು ಶಕ್ತಿಯನ್ನು ಕಸಿದುಕೊಂಡು ಬಿಡುತ್ತದೆ. ಅಂತೆಯೇ ಅದು ಕೆಡುತ್ತದೆ. ನಾವು ಮಾಡುವುದನ್ನು ಗಮನಿಸುವುದು ನಮಗೆಲ್ಲ ಸುಮಾರಾಗಿ ಅಭ್ಯಾಸವಾಗಿ ಹೋಗಿದೆ. ಮತ್ತು ಇದು ನಿಜವಾಗಿಯೂ ಅವಶ್ಯಕ ಎಂದು ನಾನೂ ಕೂಡ ಭಾವಿಸುತ್ತೇನೆ. ಆದರೆ ಅತಿ ಮುಖ್ಯವಾದುದೇನೆಂದರೆ ನೀವು ಅತ್ಯಂತ ಪ್ರಾಮಾಣಿಕರಾಗಿರಬೇಕು, ಅತ್ಯಂತ ನಿಷ್ಠಾವಂತರಾಗಿರಬೇಕು, ಸಹಜವಾಗಿ, ಅತ್ಯಂತ ಸಹಜವಾಗಿ ಇರಲು ಪ್ರಯತ್ನಿಸಬೇಕು. ಬರೀ ಗಮನಿಸುತ್ತ, ಪರಿಶೀಲಿಸಿಕೊಳ್ಳುತ್ತ ಇರುವುದಲ್ಲ, ಪರೀಕ್ಷಿಸಿಕೊಳ್ಳುತ್ತಿರಬೇಕು, ಕೆಲಸಲ ಅತಿ ಕಠಿಣ ತೀರ್ಮಾನ ತೆಗೆದುಕೊಳ್ಳುವ ಪ್ರಸಂಗ ಬಂದರೆ ಸಂಪೂರ್ಣ ಸಿದ್ಧರಾಗಿರಬೇಕು. ನಮ್ಮ ಬೆನ್ನು ನಾವೇ ಚಪ್ಪಡಿಸಿಕೊಳ್ಳುವುದು ಅಹಿತವೋ ಇದೂ ಕೂಡ ಅಷ್ಟೇ ಕೆಟ್ಟದ್ದು. ಎರಡೂ ಅಷ್ಟೇ ಅಹಿತಕರ. ತಾನು ಅಭೀಪ್ಸೆಪಡುತ್ತಿರುವುದು ಕೂಡ ತನಗೆ ಗೊತ್ತಾಗಬಾರದು. ಹಾಗಿರಬೇಕು. ಅಷ್ಟು ನಿಷ್ಠೆ ಇರಬೇಕು. ತಾನು ಅಭೀಪ್ಸೆಯೇ ಆಗಿಬಿಡಬೇಕು. ತಾನೇ ಅದಾಗಿಬಿಡಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/44–45; 6/402**

## ವಿನಮ್ರತೆ



*ತನ್ನ ಸರಳತೆಯಲ್ಲಿ ಪೂಜನೀಯ.*

*(ಇದು ಶ್ರೀಮಾತೆಯು ಪುಷ್ಪಕ್ಕೆ ನೀಡಿರುವ ಅಧ್ಯಾತ್ಮಿಕ ಮಹತ್ವ ಹಾಗೂ ವಿವರಣೆಗಳು)*

*ಸಸ್ಯಶಾಸ್ತ್ರೀಯ ಹೆಸರು: ಅಗ್ರೋಸ್ಟಿಸ್ ನೆಬುಲೋಸ*

# ಕೃತಜ್ಞತೆ

ಭಕ್ತಿಗೆ ಅನುರೂಪವಾದ ಇನ್ನೊಂದು ಅಂಶ ಅದರ ಜೊತೆಗೆ ಸದಾ ಇರಲೇಬೇಕು... ಅದು ಭಗವಂತ ಇದ್ದಾನೆ ಎಂಬ ನೈಜವಾದ ಕೃತಜ್ಞತಾ ಭಾವ ಯಾವಾಗಲೂ ಇರಬೇಕು. ನಿಜವಾದ ಕೃತಜ್ಞತೆಯ ಭಾವನೆಯು ನಿಮ್ಮಲ್ಲಿ ಅದ್ಭುತ ಆನಂದವನ್ನು ತುಂಬುವುದು. ಭಗವಂತ ಇದ್ದಾನೆ, ವಿಶ್ವದಲ್ಲಿ ಎಲ್ಲೆಲ್ಲೂ ತುಂಬಿದ್ದಾನೆ, ನಾವು ಎಲ್ಲೆಲ್ಲೂ ಕಾಣುವುದು, ಅನುಭವಿಸುವುದು ಅವನನ್ನೇ, ಭಯಾನಕವೆನ್ನಬಹುದಾದ ಯಾವ ವಿರೋಧಿ ಶಕ್ತಿಯೂ ಅವನಿಗೆದುರಾಗಿ ನಿಲ್ಲಲಾರದು. ಪರಮಾತ್ಮನ ಸಾನಿಧ್ಯದ ದೃಢವಾದ ವಿಶ್ವಾಸವು ನಮಗೆ ಅಪಾರ ಸಂತೋಷ ತರುವುದು. ಯಾವಾಗಲೇ ಆಗಲಿ, ಒಂದೇ ಕ್ಷಣವೇ ಆಗಲಿ, ಆ ಪರಮ ಸತ್ಯದ ಜೊತೆಗೆ ನೇರವಾದ ಅಥವಾ ತುಸು ಅಪ್ರತ್ಯಕ್ಷವಾದರೂ ಅಡ್ಡಿಯಿಲ್ಲ ಅಲ್ಪ ಸಂಬಂಧ ಏರ್ಪಟ್ಟರೆ ಸಾಕು ನಿಮ್ಮ ಹೃದಯವು ತೀವ್ರವಾದ ಅದ್ಭುತವಾದ ಆನಂದದಿಂದ, ಕೃತಜ್ಞತೆಯಿಂದ ತುಂಬಿ ಹೋಗುವುದು. ಆಗ ಎಲ್ಲಾ ಸಂಗತಿಗಳು ಆಸಕ್ತಿದಾಯಕವಾಗಿಯೇ ತೋರುವುದು.

ಕೃತಜ್ಞತೆ ನೀಡುವ ಆನಂದಕ್ಕೆ ಸರಿಸಮನಾದ ಸಂಗತಿ ಇನ್ನೊಂದಿಲ್ಲ. ಹಕ್ಕಿ ಇಂಪಾಗಿ ಹಾಡುವುದನ್ನು ಕೇಳಿದಾಗ, ಸುಂದರವಾದ ಹೂ ಅರಳುವುದನ್ನು ನೋಡಿದಾಗ, ಚಿಕ್ಕ ಮಗು ನಗುವುದನ್ನು ಕಂಡಾಗ, ಯಾವುದಾದರೂ ಔದಾರ್ಯದ ಕಾರ್ಯವನ್ನು ವೀಕ್ಷಿಸಿದಾಗ, ಸುಂದರವಾದ ವಾಕ್ಯವನ್ನು ಓದಿದಾಗ, ಸೂರ್ಯ ಮುಳುಗುವುದನ್ನು ಕಾಣುತ್ತಿರುವಾಗ ಒಂದು ತೆರನಾದ ಸುಂದರವಾದ ಭಾವ ಮಾಡುವುದು – ತೀವ್ರವಾದ, ಆಳವಾದ ಭಾವ ಉದಯಿಸುವುದು – ವಿಶ್ವವೆಲ್ಲವೂ ಪರಮಾತ್ಮನ ಪ್ರಕಟಣೆ, ವಿಶ್ವದ ಎಲ್ಲ ವಸ್ತು, ಸಂಗತಿಗಳ ಹಿಂದೆ ಪರಾತ್ಪರನಾದ ಪರಮಾತ್ಮ ಇದ್ದಾನೆ ಎಂಬ ತೀವ್ರ ಸಂವೇದನೆ, ಭರವಸೆ ಜಾಗೃತವಾಗುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/40**

ಎಲ್ಲೋ ಕೆಲವೇ ಕೆಲವು ಜನರು ಮಾತ್ರ, ತೀರಾ ನಗಣ್ಯ ಎನಿಸುವಷ್ಟು ಕಡಿಮೆ ಜನರು, ಚರ್ಚ್‌ಗಳಿಗೆ, ಗುಡಿಗಳಿಗೆ ನಿಜವಾದ ಧಾರ್ಮಿಕ ಭಾವನೆಯಿಂದ ಹೋಗುತ್ತಾರೆ. ಅವರು ತಮಗಾಗಿಯೇ ಆಗಲಿ ಅಥವಾ ಇನ್ನಾರಿಗಾಗಿಯೋ ಆಗಲಿ ಏನನ್ನೂ ಕೇಳಲು, ಪ್ರಾರ್ಥಿಸಲು ಹೋಗುವುದಿಲ್ಲ. ಬದಲಾಗಿ ಪರಮಾತ್ಮನಿಗೆ

ಕೃತಜ್ಞತೆ ಸಲ್ಲಿಸಲು, ತಮ್ಮನ್ನು ತಾವು ಅವನಿಗೆ ಸಮರ್ಪಿಸಿಕೊಳ್ಳಲು ಹೋಗುತ್ತಾರೆ. ಎಲ್ಲೋ ಕೋಟಿಗೊಬ್ಬರು ಹಾಗೆ ಮಾಡುತ್ತಾರೊ ಏನೊ!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/194–95**

ನೀವು ಎಷ್ಟೇ ಅಜ್ಞಾನದಲ್ಲಿ ಇರಲಿ, ಎಷ್ಟೇ ತಪ್ಪು ತಿಳಿದುಕೊಂಡಿರಲಿ, ನಿಮ್ಮ ಅಹಂಕಾರ ಅದರ ವಿರೋಧ ಪ್ರತಿರೋಧ ಏನೇ ಇರಲಿ, ಭಗವಂತನು ನಿಮ್ಮನ್ನು, ಪ್ರತಿಯೊಬ್ಬರನ್ನು ಅತಿ ಸಮೀಪದ ಹಾಗೂ ಸುಲಭವಾದ ದಾರಿಯಲ್ಲಿ ತನ್ನೆಡೆಗೆ ಕರೆದೊಯ್ಯುತ್ತಾನೆ. ನೀವು ಇದನ್ನು ಯಾವ ಕ್ಷಣದಲ್ಲಿಯೂ ಮರೆಯಬಾರದು. ಸದಾ ಕೃತಜ್ಞರಾಗಿರಬೇಕು.

ಕೃತಜ್ಞತೆಯ ಪರಿಶುದ್ಧ ಜ್ವಾಲೆಯು ನಿಮ್ಮ ಹೃದಯಗಳಲ್ಲಿ ನಿರಂತರವಾಗಿ ಪ್ರಜ್ವಲಿಸುತ್ತಿರಬೇಕು. ಅದು ಎಲ್ಲ ಅಹಂಭಾವ, ಅಸ್ಪಷ್ಟತೆ, ಸಂದಿಗ್ಧತೆಗಳನ್ನು ಕರಗಿಸಿಬಿಡುವಷ್ಟು ಪ್ರಖರವಾಗಿರಬೇಕು. ಪರಮಾತ್ಮನ ಅನುಗ್ರಹವು ಸಾಧಕನನ್ನು ಅವನ ಗಮ್ಯದೆಡೆಗೆ ಕರೆದೊಯ್ಯುವುದು. ಆದ್ದರಿಂದ ಈ ಅನುಗ್ರಹದ ಬಗೆಗೆ ಇರುವ ಕೃತಜ್ಞತೆಯ ಭಾವವು ಎಷ್ಟು ತೀವ್ರವಾಗಿರುವುದೋ, ಆ ಅಗ್ನಿ ಎಷ್ಟು ಪ್ರಖರವಾಗಿರುವುದೋ ಹಾಗೂ ಅನುಗ್ರಹದ ಪ್ರಭಾವ ಮತ್ತು ಪರಿಣಾಮವನ್ನು ಎಷ್ಟು ಕೃತಜ್ಞತೆಯಿಂದ ಸ್ಮರಿಸಲಾಗುವುದೋ ಅಷ್ಟರಮಟ್ಟಿಗೆ ಆ ದಾರಿ ಸಮೀಪದ್ದಾಗುವುದು.

*

... ಎಲ್ಲ ಸಂವೇದನೆಗಳಿಗಿಂತ ಅತ್ಯಂತ ಹೆಚ್ಚು ಆನಂದ ನೀಡುವಂಥದು ಯಾವುದೆಂದರೆ, ಪರಿಶುದ್ಧವಾದ, ತುಸು ಅಹಂಭಾವದಿಂದ ಕೂಡ ಕಲುಷಿತವಾಗಿರದ ಸಂತೋಷವನ್ನು ನೀಡಬಲ್ಲದ್ದು ಯಾವುದೆಂದರೆ, ತಾನೇ ತಾನಾಗಿ ಸಹಜವಾಗಿ ಇರುವ ಕೃತಜ್ಞತೆಯ ಭಾವ.

ಅದು ಅತ್ಯಂತ ವಿಶಿಷ್ಟವಾದುದು. ಅದು ಪ್ರೇಮವಲ್ಲ, ಭಕ್ತಿ ಅಲ್ಲ, ಸಮರ್ಪಣೆ ಅಲ್ಲ, ಅದು ಪೂರ್ಣವಾದ ಆನಂದ, ತುಂಬಿದ ಪ್ರಪೂರ್ಣ ಆನಂದ.

ಅದು ಎಲ್ಲದರಿಗಿಂತ ಬೇರೆಯಾದ ವಿಶಿಷ್ಟಕಂಪನ, ಕಂಪನ, ತರಂಗ. ಅದು ನಿಮ್ಮನ್ನು ವಿಶಾಲಗೊಳಿಸುವುದು. ನಿಮ್ಮಲ್ಲಿ ತುಂಬಿದ ಅನುಭವ ನೀಡುವುದು. ಹಾಗೂ ಆ ಅನುಭವ ಅತ್ಯಂತ ಉತ್ಕಟವಾಗಿರುವುದು.

ಮಾನವ ಪ್ರಜ್ಞೆಗೆ ಸಾಧ್ಯವಿರುವ ಎಲ್ಲ ಚಲನೆಗಳಲ್ಲಿ ನಿಮ್ಮನ್ನು ಅಹಂಭಾವದಿಂದ ಹೊರತರಬಲ್ಲ ಅತ್ಯಂತ ಸಮರ್ಥವಾದ ಹಾಗೂ ನಿಶ್ಚಿತವಾದ ಚಲನೆ ಅಂದರೆ ಇದೇ ಆಗಿದೆ.

ಈ ತರಂಗಾವರ್ತನಗಳಲ್ಲಿ ಪ್ರವೇಶಿಸುವುದು ಸಾಧ್ಯವಾದರೆ ಇವು ಪರಮ ದಿವ್ಯ ಪ್ರೇಮದ ತರಂಗಗಳ ಗುಣಧರ್ಮಗಳನ್ನೇ ಹೊಂದಿವೆ ಎಂಬುದು ತಕ್ಷಣ ಗೊತ್ತಾಗುತ್ತದೆ. ಇದು ನಿಶ್ಚಿತವಾದ ದಿಕ್ಕಿನಲ್ಲಿಯೇ ಸಾಗುವುದು ಎಂದೇನೂ ಇಲ್ಲ, ಇದು ದಿಕ್ಕು, ಪರಿಮಾಣ ಏನೊಂದೂ ಇಲ್ಲದ್ದು. ಪರಿಣಾಮ ಸ್ವರೂಪತಃ ಕೃತಜ್ಞತೆಯ ತರಂಗಗಳು ತುಸು ದೈವೀ ಪ್ರೇಮದ ವರ್ಣಛಾಯೆಯನ್ನೇ ಹೊಂದಿರುವವು.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಡಿಸೆಂಬರ್ 21, 1963**

## ಕೃತಜ್ಞತೆ

*ಮುಚ್ಚಿರುವ ದ್ವಾರಗಳನ್ನು ತೆರೆದು ನಿಮ್ಮನ್ನು ಉದ್ಧರಿಸಬಲ್ಲ ದೈವೀ ಅನುಗ್ರಹವನ್ನು ಬರಮಾಡಿಕೊಳ್ಳಬೇಕಾದವರು ನೀವೇ.*

*(ಇದು ಶ್ರೀಮಾತೆಯು ಪುಷ್ಪಕ್ಕೆ ನೀಡಿರುವ ಅಧ್ಯಾತ್ಮಿಕ ಮಹತ್ವ ಹಾಗೂ ವಿವರಣೆಗಳು)*

*ಸಸ್ಯಶಾಸ್ತ್ರೀಯ ಹೆಸರು:* ಇಪೊಮಿಯ ಕಾರ್ನಿಯಾ

## ಸಹನೆ

... ಎಲ್ಲಕ್ಕಿಂತ ಅತ್ಯಂತ ಅವಶ್ಯವಾದ ಗುಣವೆಂದರೆ ಸಹನೆ, ತಾಳ್ಮೆ – ಮತ್ತು ಅದನ್ನು ಮತ್ತೇನೆಂದು ಕರೆಯುವುದು, – ಅದೊಂದು ಒಳ್ಳೆಯ ಆಂತರಿಕ ಹಾಸ್ಯ, ಅದು ನಿಮ್ಮನ್ನು ನಿರಾಶರಾಗಲು ಬಿಡುವುದಿಲ್ಲ, ದುಃಖಿತರಾಗಲು ಬಿಡುವುದಿಲ್ಲ. ಏನೇ ಕಠಿಣ ಪ್ರಸಂಗಗಳು ಬರಲಿ ಎಲ್ಲವನ್ನೂ ನಗುನಗುತ್ತಲೇ ಎದುರಿಸಲು ಕಲಿಸುವುದು. – ಇದನ್ನು ಚೆನ್ನಾಗಿ ವಿವರಿಸಬಲ್ಲ ಇಂಗ್ಲಿಷ್ ಶಬ್ದವೊಂದಿದೆ – cheerfulness – ಹರ್ಷ ಚಿತ್ತತೆ. ಇದನ್ನು ನಿಮ್ಮೊಳಗೆ ಕಾಯ್ದುಕೊಳ್ಳಲು ಸಮರ್ಥರಾದರೆ ನೀವು ಅತಿ ಚೆನ್ನಾಗಿ ಹೋರಾಡಬಲ್ಲಿರಿ, ಚೆನ್ನಾಗಿ ಪ್ರತಿರೋಧ ಮಾಡಲು ಸಾಧ್ಯವಾಗುವುದು. ನಿಮ್ಮ ಪ್ರಗತಿಗೆ ತಡೆಯುಂಟುಮಾಡುವ ಎಲ್ಲವನ್ನೂ ಚೆನ್ನಾಗಿ ಎದುರಿಸಬಲ್ಲಿರಿ, ಹೋರಾಡಿ ಗೆಲ್ಲಬಲ್ಲಿರಿ.

*

ನಿಮ್ಮ ಭರವಸೆ, ನಿಮ್ಮ ಖಚಿತತೆ ನೀವೇ ಕಂಡುಕೊಳ್ಳಬೇಕು. ಏನೇ ಪ್ರಸಂಗ ಬರಲಿ ಅದನ್ನು ಕಾಯ್ದುಕೊಳ್ಳಬೇಕು. ಏನೇ ಆಗಲಿ, ಏನೇ ಸಂಭವಿಸಲಿ, ಎಂಥ ಬೆಲೆ ತೆರಬೇಕಾದ ಸಂದರ್ಭ ಬಂದರೂ ಅಡ್ಡಿಯಿಲ್ಲ, ಕೊನೆಯ ತನಕ ಹೋರಾಡುವ ತಾಳ್ಮೆ ಕಳೆದುಕೊಳ್ಳಬಾರದು. ಮಹಾವಿಜಯವೆಂಬುದು ಯಾವಾಗಲೂ ಯಾರು ಹೆಚ್ಚು ಸಹನಶೀಲರಾಗಿರುತ್ತಾರೋ ಅವರಿಗೇ ದಕ್ಕುತ್ತದೆ.

ಎಂಥ ಪ್ರತಿಕೂಲ ಪರಿಸ್ಥಿತಿಗಳಲ್ಲಿಯೂ ಸಹನೆ ಸ್ಥಿರವಾಗಿ ಇರಬೇಕೆಂದರೆ ಆಧಾರ ಮಾತ್ರ ಅತ್ಯಂತ ಗಟ್ಟಿಯಾಗಿರಬೇಕು, ದೃಢವಾಗಿರಬೇಕು. ಅಂಥ ಸುಸ್ಥಿರವಾದ ಆಧಾರವು ದೈವೀ ಸತ್ಯ, ಪರಮೋಚ್ಚ ಸತ್ಯದ ಮೂಲಕ ಮಾತ್ರ ದೊರೆಯಬಲ್ಲದು.

ಅದನ್ನು ಬಿಟ್ಟು ಬೇರೆ ಕಡೆಗೆ ಹುಡುಕುವುದು ನಿರರ್ಥಕ, ಅದೊಂದು ಮಾತ್ರ ಎಂದೆಂದಿಗೂ ಕೈ ಬಿಡದು.

*

ಕಠಿಣ ಪ್ರಸಂಗ ಬಂದಾಗ ಅಧೈರ್ಯಗೊಳ್ಳದೆ ಇರಲು ಸಾಧ್ಯವಿಲ್ಲ, ಅದು ತುಂಬ ಕಠಿಣವಾಗಿದೆ, ಆದ್ದರಿಂದ ನಡುವೆಯೇ ನಿಲ್ಲಿಸಿ ಬಿಡಬೇಕಾಗುವುದೋ ಏನೋ, ನಿಮ್ಮಲ್ಲಿ ಅದನ್ನು ಮಾಡಿ ಮುಗಿಸಿಬಿಡುವ ಶಕ್ತಿ ಇಲ್ಲ, – ಅಂದರೆ, ಎಂಥ ಹೊಡೆತ ಬಿದ್ದರೂ ಅಡ್ಡಿಯಿಲ್ಲ ಹಿಡಿದ ಕೆಲಸವನ್ನು ಮುಗಿಸಿಯೇ ಸಿದ್ಧ ಎಂಬ ಛಲವೂ ಇಲ್ಲ, ಸಾಮರ್ಥ್ಯವೂ ಇಲ್ಲ, ಅಡ್ಡಿ, ಆತಂಕ, ಆಘಾತಗಳನ್ನು ಭರಿಸುವ ಶಕ್ತಿ ಇಲ್ಲ – ಏನೋ ಹೇಳುತ್ತಾರಲ್ಲ, ನೀವು ತಪ್ಪು ಮಾಡಿದ್ದೀರಿ, ಅಂತೆಯೇ ಆಘಾತಗಳು ಬರುತ್ತವೆ, ಅವುಗಳನ್ನು ಹಾಗೆಯೇ ಜೇಬಿಗಿಳಿಸಿಕೊಂಡು ಯಾರಿಗೂ ಗೊತ್ತಾಗದಂತೆ ಮುನ್ನಡೆದುಬಿಡುವುದು – ಇಂಥ ತಾಳ್ಮೆ, ಸಹನೆ ಹಾಗೂ ಶಕ್ತಿ ಇಲ್ಲದೇ ಹೋದರೆ, ನೀವು ಬಹಳ ದೂರ ಮುಂದುವರಿಯಲಾರಿರಿ. ಮೊದಲ ತಿರುವಿನಲ್ಲಿಯೇ, ಅಂದರೆ ನಿಮ್ಮ ರೂಢಿಗತ ಜೀವನ ಪದ್ಧತಿ ಬದಲಾಗುತ್ತದೆ ಎಂದು ಅನಿಸಿದ ಕ್ಷಣವೇ ನೀವು ನಿರಾಶರಾಗಿ ಬಿಡುತ್ತೀರಿ. ಕೆಲಸವನ್ನು ಅರ್ಧದಲ್ಲೇ ಬಿಟ್ಟುಬಿಡುತ್ತೀರಿ.

ತೀರ ಲೌಕಿಕವಾಗಿ ಹೇಳಬೇಕೆಂದರೆ, – ಅಂದರೆ ತೀರ ಪ್ರಾಪಂಚಿಕವಾದ ರೀತಿಯಲ್ಲಿ ಹೇಳಬೇಕೆಂದರೆ ಸಹನೆ ಎಂಬುದು ಭೌತಿಕ ರೂಪದಲ್ಲಿ ಇರಬೇಕು. ಅವಶ್ಯಕತೆ ಬಿದ್ದರೆ ಸಾವಿರ ಸಲ ಆದರೂ ಚಿಂತೆ ಇಲ್ಲ ಹಿಡಿದ ಕೆಲಸವನ್ನು ಮಾಡಿಯೇ ಸಿದ್ಧ ಎಂಬ ಗಟ್ಟಿ ನಿರ್ಧಾರ ಇರಬೇಕು. ನಿಮಗೆ ಗೊತ್ತಿರುವಂತೆ ನನ್ನ ಬಳಿಗೆ ಅನೇಕ ಜನರು ತೀರ ನಿರಾಶರಾಗಿಯೇ ಬರುತ್ತಾರೆ; 'ಎಲ್ಲಾ ಮುಗಿದು

ಹೋಗಿದೆ ಎಂದು ಭಾವಿಸಿದ್ದೆ, ಆದರೆ ಮಾಡಿದ್ದನ್ನೇ ಮತ್ತೆ ಮಾಡಬೇಕಾಗಿ ಬಂದಿದೆ' ಎಂದು ಅಲವತ್ತುಕೊಳ್ಳುತ್ತಾರೆ. ಅದೇನೂ ದೊಡ್ಡದಲ್ಲ, ಇದನ್ನು ನೀವು ನೂರು ಸಲ, ಎರಡು ನೂರು ಸಲ ಅವಶ್ಯಕತೆ ಬಿದ್ದರೆ ಸಾವಿರ ಸಲ ಮಾಡಬೇಕಾಗಿ ಬರಬಹುದು, ಏನೋ ಒಂದು ಹೆಜ್ಜೆ ಮುಂದೆ ಹೋಗಿ ಹ್ಹಾ ಮುಗಿಯಿತು ಎಂದು ನೀವು ಅಂದುಕೊಳ್ಳಬಹುದು, ಆದರೆ ಅನತಿ ದೂರ ಹೋಗುವಷ್ಟರಲ್ಲಿ ಪುನಃ ಅಂಥದೇ ಕಠಿಣ ಪರಿಸ್ಥಿತಿ ಬಂದೊದಗಬಹುದು. ಸಮಸ್ಯೆ ನಿಮ್ಮ ಪಾಲಿಗೆ ಮುಗಿದುಹೋಗಿದೆ ಎಂದು ತೋರಬಹುದು, ಆದರೆ ಅದೇ ಸಮಸ್ಯೆ ಮತ್ತೆ ತಲೆದೋರಬಹುದು, ತುಸು ಬೇರೆ ಎಂದು ತೋರಬಹುದೇನೋ ಆದರೆ ಅದು ಮೊದಲಿನ ಸಮಸ್ಯೆಯೇ ಆಗಿರಬಹುದು. ನೀವು ದೃಢವಾದ ಸಂಕಲ್ಪ ಕೈಕೊಳ್ಳಲೇಬೇಕು, ಈ ಸಮಸ್ಯೆ ಸಾವಿರಾರು ಸಲ ಬಂದರೂ ನಾನು ಎದುರಿಸುತ್ತೇನೆ, ಪರಿಹರಿಸಿಯೇ ತೀರುತ್ತೇನೆ ಎಂಬ ಛಲ ಇರಲೇಬೇಕು, ಅಂಥ ಛಲ ತಾಳ್ಮೆ ಇಲ್ಲದೇ ಹೋದರೆ ನೀವು ಯೋಗವನ್ನು ಕೈಕೊಳ್ಳಲು ಯೋಗ್ಯರಲ್ಲ. ಇದು ತೀರ ಅನಿವಾರ್ಯವಾದ ಗುಣ.

*

ಸಹನೆಯ ಮೂಲಕ ಮಾತ್ರ ನೀವು ಎಂಥ ಕಠಿಣ ಪರಿಸ್ಥಿತಿಗಳನ್ನಾದರೂ ಗೆಲ್ಲಬಲ್ಲಿರಿ. ಸಮಸ್ಯೆಗಳಿಂದ ದೂರ ಓಡಿ ಹೋಗುವುದರಿಂದಲ್ಲ. ಯಾರಲ್ಲಿ ತಾಳ್ಮೆ ಎಂಬುದಿದೆಯೋ ಅವರ ವಿಜಯ ನಿಶ್ಚಿತ. ಯಾರು ಹೆಚ್ಚು ತಾಳಿಕೊಳ್ಳಬಲ್ಲರೋ ಅವರೇ ಗೆಲ್ಲುತ್ತಾರೆ. ನಿಮ್ಮ ಶಕ್ತಿ ಮೀರಿ ಉತ್ತಮವಾಗಿ ಕೆಲಸ ಮಾಡಿರಿ, ನಿಮಗೆ ಪ್ರತಿಫಲ ನೀಡುವ ಬಗ್ಗೆ ಪರಮಾತ್ಮನೇ ನೋಡಿಕೊಳ್ಳುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/23; 9/255; 8/41–42; 14/163**

**– ಶ್ರೀಮಾತೆ**

## ಸಹನೆ

*ಕೊನೆಯವರೆಗೆ ಹೋರಾಡುವ ದೃಢ ನಿರ್ಧಾರ*

*(ಇದು ಶ್ರೀಮಾತೆಯು ಪುಷ್ಪಕ್ಕೆ ನೀಡಿರುವ ಅಧ್ಯಾತ್ಮಿಕ ಮಹತ್ವ ಹಾಗೂ ವಿವರಣೆಗಳು)*

*ಸಸ್ಯಶಾಸ್ತ್ರೀಯ ಹೆಸರು: ಕ್ಯಾಲೆಡುಲ ಅಫಿಷಿನಾಲಿಸ್*

# ಅಭೀಪ್ಸೆ

ಅಭೀಪ್ಸೆ ಅಂದರೆ ಉನ್ನತವಾದ ಸಂಗತಿಗಳಿಗಾಗಿ ಸತ್ತೆಯ ಹಾತೊರೆಯುವಿಕೆ ಅಥವಾ ಕರೆ, – ಪರಮಾತ್ಮನಿಗಾಗಿ, ಉನ್ನತವಾದ ಅಥವಾ ದೈವೀ ಪ್ರಜ್ಞೆಗೆ ಸಂಬಂಧಿಸಿದ ಎಲ್ಲಾ ಸಂಗತಿಗಳಿಗಾಗಿ ಕರೆ.

*

ಅಭೀಪ್ಸೆಯು ಬಯಕೆಯ ರೂಪದಲ್ಲಿ ಇರಬಾರದು. ಅದು ಅಂತರಂಗದಲ್ಲಿ ಇರುವ ಆತ್ಮದ ಅವಶ್ಯಕತೆ ಆಗಿರಬೇಕು, ಸಮಾಧಾನಕರವಾದ, ದೃಢವಾದ ಸಂಕಲ್ಪ, ಪರಮಾತ್ಮನೆಡೆಗೆ ಹೊರಳುವ, ಅವನಿಗಾಗಿ ಶೋಧಿಸುವ ಸಂಕಲ್ಪ ಆಗಿರಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/56, 60–61**

ಆದರ್ಶ ಸಾಧಕನಾದವನು ಬೈಬಲ್ ಹೇಳುವ ಪ್ರಕಾರ "ಪರಮ ಪ್ರಭುವಿಗಾಗಿ ನನ್ನಲ್ಲಿರುವ ಉತ್ಸಾಹ ನನ್ನನ್ನು ತಿಂದುಹಾಕಿಬಿಟ್ಟಿದೆ" ಎಂದು ಹೇಳುವಷ್ಟು ಸಮರ್ಥವಾಗಿರಬೇಕು. ಪರಮಾತ್ಮನ ಬಗೆಗೆ ಇರುವ ಉತ್ಸಾಹವು ದೈವೀ ಪರಿಣಾಮಕ್ಕಾಗಿ ಸಮಗ್ರ ಸತ್ತೆಯಲ್ಲಿರುವ ಉತ್ಸಾಹ, ವ್ಯಾಕುಲತೆ – ಪರಮಾತ್ಮನನ್ನು ಪಡೆದೇ ತೀರಬೇಕೆಂಬ ಹೃದಯದ ಕಾತರತೆ – ಇದು ಅಹಂಭಾವವನ್ನು ನಾಶಪಡಿಸುವುದು. ತಾನು ಯಾವುದಕ್ಕಾಗಿ ಅರಸುತ್ತಾ ಇದೆಯೋ ಅದರ ವೈಶಾಲ್ಯ, ಅಪರಂಪಾರತೆಯನ್ನು ಸ್ವೀಕರಿಸಲು ತನ್ನ ಎಲ್ಲಾ ಕ್ಷುದ್ರತೆ, ಸಂಕುಚಿತತೆ, ಮಿತಿಗಳನ್ನು ಒಡೆದುಹಾಕುವುದು. ಏಕೆಂದರೆ ಅದು ವಿಶಾಲವಾಗಿದೆ, ವಿಶ್ವಾತ್ಮಕವಾಗಿದೆ, ಬೃಹತ್ ಆಗಿರುವ, ಉನ್ನತವಾಗಿರುವ ವ್ಯಕ್ತಿಗತ ಆತ್ಮ ಮತ್ತು ಪ್ರಕೃತಿಯನ್ನು ಮೀರಿ ನಿಲ್ಲುವಂತಹದಾಗಿದೆ ಎಂಬುದನ್ನು ಅರಿತಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/58**

ಆಧ್ಯಾತ್ಮಿಕ ಅಭೀಪ್ಸೆಯು ಮಾನವನಲ್ಲಿ ಸಹಜವಾಗಿಯೇ ಇರುತ್ತದೆ. ಏಕೆಂದರೆ ಅವನು ಪ್ರಾಣಿಯಂತಲ್ಲ, ಅವನಿಗೆ ತನ್ನ ಅಪರಿಪೂರ್ಣತೆಯ, ಸೀಮಿತತೆಯ ಅರಿವು ಇರುತ್ತದೆ. ತಾನು ಸದ್ಯಕ್ಕೆ ಏನಿರುವುನೋ ಅದಕ್ಕಿಂತಲೂ ಆಚೆಗಿರುವುದನ್ನು ಪಡೆಯಬೇಕೆಂಬ ಹಂಬಲ ಅವನಲ್ಲಿ ಸಹಜವಾಗಿಯೇ ಇರುತ್ತದೆ.

ಜಡವಾದ ಭೌತಿಕದಲ್ಲಿ ವಿಚಾರಶೀಲವಾದ ಮನಸ್ಸು ಬರುವವರೆಗೆ ವಿಕಾಸವು ಪ್ರಜ್ಞಾಯುಕ್ತವಾಗಿರಲಿಲ್ಲ. ಸ್ವ–ಇಚ್ಛೆಯಿಂದ ಅಥವಾ ಬಯಕೆಯ ಮೂಲಕ ಅಥವಾ ಸಂಕಲ್ಪ ಹಾಗೂ ಜೀವಿಯ ಸಜೀವ ಶೋಧನೆಯ ಮೂಲಕ ಅದು ಸಾಧ್ಯವಾಗಿರುವುದಿಲ್ಲ. ಬದಲಾಗಿ ಜೀವಿಗೆ ಅರಿವಿಲ್ಲದಂತೆಯೇ ಅದರ ಅವಚೇತನದ ಮೂಲಕವೋ, ಅಂತಃಸ್ತರದ ಮೂಲಕವೋ ತಾನಾಗಿ ಪ್ರಕೃತಿಯ ಸ್ವಯಂಚಾಲಿತ ಕ್ರಿಯೆಯ ಮೂಲಕವೋ ಆಗಿದೆ. ಮಾನವನಿಗೆ ಮಾತ್ರ ತನಗಿಂತ ಎಷ್ಟೋ ಪಟ್ಟು ಮಿಗಿಲಾದ, ಉನ್ನತವಾದ ಪ್ರಜ್ಞೆಯ ಸ್ತರಗಳಿರುವುದು ತಿಳಿದಿದೆ. ಅವನ ಮನಸ್ಸು ಹಾಗೂ ಪ್ರಾಣಗಳಲ್ಲಿ ವಿಕಾಸದ ತಪನೆ ಇದೆ, ತನ್ನನ್ನು ಮೀರಿ ಬೆಳೆಯಬೇಕೆಂಬ ಹಂಬಲ ಇದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 21/875–76 – ಶ್ರೀ ಅರವಿಂದರು**

ಶಬ್ದಗಳಿಗೆ ಅತೀತವಾದ, ವಿಚಾರಗಳಿಗೆ ಅತೀತವಾದ, ಅತ್ಯಂತ ತೀವ್ರವಾದ ಅಭೀಪ್ಸೆಯ ಅಗ್ನಿ ನಿರಂತರವಾಗಿ ಪ್ರಖರವಾಗಿ ಒಂದೇ ರೀತಿಯಾಗಿ ಉರಿಯುತ್ತಿರಬೇಕು.

*

*ಪ್ರಶ್ನೆ: ನಿಷ್ಠಾಪೂರ್ಣವಾದ ಅಭೀಪ್ಸೆ ಅಂದರೆ ಏನು?*

ಯಾವುದೇ ವೈಯಕ್ತಿಕ ಹಿತಾಸಕ್ತಿ ಹಾಗೂ ಅಹಂ ಕೇಂದ್ರಿತ ಲೆಕ್ಕಾಚಾರ ಇಲ್ಲದ ಶುದ್ಧವಾದ ಅಭೀಪ್ಸೆಯ ಸ್ಥಿತಿಯಲ್ಲಿ ಇರುವಿರಿ, ನಿಮ್ಮ ಅಭೀಪ್ಸೆ ತುಂಬಾ ಪ್ರಾಮಾಣಿಕ–ವಾಗಿದೆ, ಎನ್ನುವುದಾದರೆ, ಎಲ್ಲವೂ ನಿಮ್ಮ ಅಭೀಪ್ಸೆಗೆ ಅನುಕೂಲವಾಗುವಂತೆ, ಸಹಾಯಕವಾಗುವಂತೆ ವ್ಯವಸ್ಥಿತಗೊಳ್ಳುತ್ತ ಹೋಗುವುದು. ನೇರವಾಗಿಯೋ ಅಥವಾ ಅಪ್ರತ್ಯಕ್ಷವಾಗಿಯೋ, ನೀವು ಪ್ರಗತಿ ಸಾಧಿಸಲು, ತೀರಾ ಹೊಸದಾಗಿರುವ ಯಾವುದೋ ಅಜ್ಞಾತವಾಗಿರುವುದರ ಜೊತೆಗೆ ಸಂವಹನ ಸಾಧಿಸಲು ಹಾಗೂ ಯಾವುದು ಅನಿಷ್ಟವಾಗಿದ್ದು ತ್ಯಾಜ್ಯವಾಗಿದೆಯೋ ಅದನ್ನು ಉಚ್ಚಾಟನೆ ಮಾಡಲು ಸಹಾಯ ಮಾಡುವುದು. ಇದು ನಿಜವಾಗಿಯೂ ತುಂಬಾ ಗಂಭೀರ ಹಾಗೂ ಗಮನಾರ್ಹವಾದ ಸಂಗತಿಯಾಗಿದೆ. ನೀವು ನಿಜವಾಗಿಯೂ ತೀವ್ರವಾದ ಅಭೀಪ್ಸೆಯ ಸ್ಥಿತಿಯಲ್ಲಿ ಇದ್ದರೆ, ನಿಮ್ಮ ಅಭೀಪ್ಸೆಯು ಸಾಕಾರಗೊಳ್ಳುವದಕ್ಕೆ ನೆರವಾಗಲು ಸಹಾಯ ಮಾಡದೆ ಹೋಗುವಂಥ ಯಾವ ಸಂಗತಿಯೂ ಜಗತ್ತಿನಲ್ಲಿ ಇರುವುದಿಲ್ಲ. ಎಲ್ಲವೂ ನೆರವು

ನೀಡಲು ಬರುವುವು, ಪರಿಪೂರ್ಣವಾದ, ನಿರುಪಾಧಿಕವಾದ ಪ್ರಜ್ಞೆಯೇ ನಿಮ್ಮ ಸುತ್ತಲೂ ಎಲ್ಲವನ್ನೂ ವ್ಯವಸ್ಥಿತಗೊಳಿಸುವವನು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/75, 72; 6/176 – ಶ್ರೀಮಾತೆ**

## ಅಭೀಪ್ಸೆ

*ಅಗಣಿತವಾದುದು, ಛಲವುಳ್ಳದ್ದು ತನ್ನನ್ನು ತಾನು ದಣಿವಿಲ್ಲದೇ ಪುನಃ ಪುನಃ ಪ್ರಕಟಿಸಿಕೊಳ್ಳುತ್ತ ಹೋಗುವಂಥದು.*

*(ಇದು ಶ್ರೀಮಾತೆಯು ಪುಷ್ಪಕ್ಕೆ ನೀಡಿರುವ ಅಧ್ಯಾತ್ಮಿಕ ಮಹತ್ವ ಹಾಗೂ ವಿವರಣೆಗಳು)*

*ಸಸ್ಯಶಾಸ್ತ್ರೀಯ ಹೆಸರು:* ನೈಕ್ಟಾಂಥೆಸ್ ಆರ್ಬರ್–ಟ್ರಿಸ್ಟಿಸ್

## ಗ್ರಹಣಶೀಲತೆ

ಗ್ರಹಣಶೀಲತೆ ಅಥವಾ ಗ್ರಹಿಸುವಿಕೆ – ದೈವೀ ಶಕ್ತಿಯನ್ನು ಸ್ವೀಕರಿಸುವ, ಅದರ ಸಾನಿಧ್ಯವನ್ನು ಅನುಭವಿಸುವ, ಅದರಲ್ಲಿ ಶ್ರೀಮಾತೆಯ ಇರುವಿಕೆಯನ್ನು ಮನಗಾಣುವ, ಆ ಶಕ್ತಿ ಕೆಲಸ ಮಾಡಲು ಅನುಮತಿ ನೀಡುವ, ತನ್ನ ದೃಷ್ಟಿ, ಸಂಕಲ್ಪ ಮತ್ತು ಕಾರ್ಯಗಳಿಗೆ ದಾರಿ ತೋರಿಸುವುದನ್ನು ಮನಃಪೂರ್ವಕವಾಗಿ ಸಮ್ಮತಿಸುವ ಸಾಮರ್ಥ್ಯವನ್ನು ಗ್ರಹಣಶೀಲತೆ ಎಂದು ಕರೆಯಲಾಗುತ್ತದೆ.

*

ಹೀಗೆ ತೆರೆದುಕೊಳ್ಳುವುದು ಅಂದರೆ ವ್ಯಕ್ತಿಯು ತನ್ನೆಲ್ಲ ಸ್ವಭಾವ ಅಥವಾ ಪ್ರಕೃತಿಯನ್ನು ಎಲ್ಲಾ ಹಂತದಲ್ಲಿ, ಎಲ್ಲಾ ಭಾಗಗಳಲ್ಲಿ ಸಮಗ್ರವಾಗಿ ಸ್ವೀಕರಿಸುವ ಶಕ್ತಿ. ಅಲ್ಲಿ ಯಾವುದೇ ರೀತಿಯ ಸಂಕುಚಿತತೆ, ಸೀಮಿತತೆ ಇರಬಾರದು. ದೈವೀ ಪ್ರಜ್ಞೆಯು ಎಲ್ಲೆಲ್ಲೂ, ಮೇಲೂ ಕೆಳಗೂ, ಹೊರಗೂ ಒಳಗೂ ಎಲ್ಲಾ ಕಡೆಗಳಲ್ಲಿಯೂ ಇದೆ, ಅದನ್ನು ಇಡಿಯಾಗಿ ಸ್ವೀಕರಿಸಬೇಕು. ಈ ಮೃತ್ಯುವಶ, ಅರೆ –ಪ್ರಜ್ಞೆಯ ಅಸ್ತಿತ್ವವನ್ನು ವಿಶ್ವಾತ್ಮಕಗೊಳಿಸುವ ತತ್ವ ಅದೇ ಆಗಿದೆ.

**SABCL 29/266; CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/169 – ಶ್ರೀ ಅರವಿಂದರು**

ನನ್ನ ಪ್ರೇಮವು ನಿನ್ನ ಜೊತೆ ಸದಾಕಾಲವೂ ಇರುತ್ತದೆ; ನಿನಗದರ ಅನುಭವ ಆಗುತ್ತಿಲ್ಲವೆಂದರೆ ಅದನ್ನು ಸ್ವೀಕರಿಸುವ ಅರ್ಹತೆ ನಿನ್ನಲ್ಲಿ ಇನ್ನೂ ಬಂದಿಲ್ಲ ಎಂದು ಅರ್ಥ. ನಿನ್ನಲ್ಲಿ ಅದನ್ನು ಸ್ವೀಕರಿಸುವ ಸಾಮರ್ಥ್ಯ ಇನ್ನೂ ಬಂದಿಲ್ಲ, ಎಲ್ಲೋ ಕೊರತೆ ಇದೆ, ಅದು ಬೆಳೆಯಬೇಕು, ಅದಕ್ಕಾಗಿ ನೀನು ಇನ್ನೂ ಇನ್ನೂ ಮತ್ತಷ್ಟು ತೆರೆದುಕೊಳ್ಳುತ್ತ ಹೋಗಬೇಕು. ವ್ಯಕ್ತಿಯು ತನ್ನನ್ನು ಸಂಪೂರ್ಣವಾಗಿ ಕೊಟ್ಟು ಕೊಳ್ಳುವ ಹಾಗೆ ಆದಾಗ ಮಾತ್ರ ಆ ರೀತಿ ತೆರೆದುಕೊಳ್ಳುವುದು ಸಾಧ್ಯವಾಗುವುದು. ವೈಯಕ್ತಿಕವಾಗಿ ನೀನು ತುಸು ಹೆಚ್ಚು ಕಡಿಮೆ ಇರಬಹುದು, ದೈವೀ ಶಕ್ತಿಯನ್ನು, ದೈವೀ ಪ್ರೇಮವನ್ನು ನಿನ್ನೊಳಗೆ ಎಳೆದುಕೊಳ್ಳುತ್ತಿರುವಿ ಎನ್ನುವುದು ನಿಜ, ಆದರೆ ಕ್ರಮ ಸರಿ ಇಲ್ಲ. ಇಲ್ಲಿ ಯಾವುದೇ ರೀತಿಯ ಲೆಕ್ಕಾಚಾರ ಇರಬಾರದು, ಪ್ರತಿಯಾಗಿ ಏನನ್ನೂ ನಿರೀಕ್ಷಿಸಬಾರದು. ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಬೇಕು. ಅಂದಾಗ ಮಾತ್ರ ನೀನು ಸ್ವೀಕರಿಸಲು ಅರ್ಹನಾಗುವಿ.

*

ನಿನ್ನ ಕೆಲಸ ಮಾತ್ರ ಜ್ಯೋತಿಯನ್ನು ಬೆಳಗಿಸುತ್ತದೆ ಅಂತಲ್ಲ, ನಾನು ಇದೀಗ ಹೇಳಿದಂತೆ, ಸದಾಕಾಲವೂ ನಿನಗಾಗಿ ಅದನ್ನು ಬೆಳಗಿಸುತ್ತಿರುತ್ತೇನೆ. ಅದನ್ನು ಸ್ವೀಕರಿಸುವುದಕ್ಕೆ ನೀನು ನಿನ್ನನ್ನು ತೆರೆದು ಇಟ್ಟುಕೊಳ್ಳಬೇಕು, ಅಷ್ಟೇ. ನಿನ್ನ ಸದಿಚ್ಛೆ ಸಂಕಲ್ಪ ಗಳ ಮೂಲಕ ಅದನ್ನು ಪೋಷಿಸಬೇಕು.

*

*ಪ್ರಶ್ನೆ: ಮಾತೆಯೆ, ಧಾರಣಕ್ಷಮತೆ(ಗ್ರಹಿಸುವಿಕೆ)ಯು ಯಾವುದನ್ನು ಆಧರಿಸಿ ರೂಪುಗೊಳ್ಳುತ್ತದೆ?*

ಇದೆಲ್ಲವೂ ಮೊದಲು ನಿಷ್ಠೆಯ ಮೇಲೆ ಅವಲಂಬಿತವಾಗಿದೆ. – ವ್ಯಕ್ತಿಗೆ ಅದನ್ನು ಸ್ವೀಕರಿಸಬೇಕೆಂಬ ಬಲವಾದ ಇಚ್ಛೆ ನಿಜವಾಗಿಯೂ ತೀವ್ರವಾಗಿ ಇದೆಯೋ ಇಲ್ಲವೋ,.. ಆನಂತರ.. ಹೌದು, ನನಗನಿಸುವಂತೆ, ಅತ್ಯಂತ ಮುಖ್ಯವಾದ ಸಂಗತಿಗಳೆಂದರೆ, ನಿಷ್ಠೆ ಮತ್ತು ನಮ್ರತೆ. ಒಣ ಜಂಭಕ್ಕಿಂತ ದೊಡ್ಡದಾವುದೂ ನಿಮ್ಮನ್ನು ಮುಸುಗಲಾರದು. ಸ್ವಯಂತೃಪ್ತಿ ಆದಾಗ ನಿಮಗೊಂದು ರೀತಿಯ ಜಂಭ ಬರುತ್ತದೆ, ನಿಮ್ಮಲ್ಲಿ ಕೊರತೆ ಇದೆ ಎಂದು ಒಪ್ಪಲು ನೀವು ಸಿದ್ಧರಾಗುವುದೇ ಇಲ್ಲ. ನೀವು ತಪ್ಪು ಮಾಡಬಹುದು, ನೀವು ಅಪರಿಪೂರ್ಣ.. ನೀವು.. ಹೀಗೆ ಒಪ್ಪಿಕೊಳ್ಳಲು ತಯಾರಾಗುವುದೇ ಇಲ್ಲ. ನಿಮಗೇ ಗೊತ್ತಿದೆಯಲ್ಲ, ಈ

ಪ್ರಕೃತಿಯಲ್ಲಿ ಹೀಗೆ ಹಠಮಾರಿಯಾಗಿ ಬೆಳೆಯುವಂಥದು ಯಾವುದು, ಇದನ್ನೆಲ್ಲ ಒಪ್ಪಿಕೊಳ್ಳಲು ನಿರಾಕರಿಸುವುದು ಯಾವುದೆಂದು! – ಅದೇ ಗ್ರಹಣಶೀಲತೆಯನ್ನು ತಡೆಯವುದು. ನೀವು ಅದನ್ನು ಕಿತ್ತು ಬಿಸಾಡಲು ತಯಾರಾಗಬೇಕು. ಪ್ರಯತ್ನ ಪಟ್ಟು ಅನುಭವ ಪಡೆಯಬೇಕು. ನಿಮ್ಮೊಳಗಿನ ಒಂದು ಅತಿ ಸಣ್ಣ, ಅತಿ ಸೂಕ್ಷ್ಮಭಾಗವಾದರೂ ಸರಿ, ಹೀಗೆ ಒಪ್ಪಿಕೊಳ್ಳಲು ತಯಾರಾದರೆ, "ಹೌದು ನಾನು ತಪ್ಪಿದ್ದೇನೆ, ಹಾಗೆ ಮಾಡಬಾರದಾಗಿತ್ತು. ಹಾಗೆ ವರ್ತಿಸಬಾರದಾಗಿತ್ತು, ನಾನು ಹಾಗೆ ಅಂದುಕೊಳ್ಳಲೇಬಾರದಾಗಿತ್ತು. ಹೌದು ಅದು ನನ್ನ ತಪ್ಪು" ನಾನು ಆಗಲೇ ಹೇಳಿದಂತೆ ಮೊದಮೊದಲು ನಿಮಗೆ ತುಸು ನೋವು ಆಗಬಹುದು, ಆದರೆ ಗಟ್ಟಿಯಾಗಿ ನಿಂತುಕೊಂಡಿರೆಂದರೆ, ನಿಮ್ಮ ಅಂತರಂಗದ ಬಾಗಿಲು ತೆರೆದುಕೊಂಡು ಬಿಡುತ್ತದೆ. ನಿಮಗೆ ಅತ್ಯಂತ ಆನಂದದ ಅನುಭವ ಆಗುತ್ತದೆ. ನಿಮಗೆ ನೀವೇ ಹೇಳಿಕೊಳ್ಳುವಂತಾಗುತ್ತದೆ, ಇಲ್ಲಿಯವರೆಗೆ ಇದನ್ನು ಮಾಡದೇ, ಬರೀ ಪ್ರತಿರೋಧ ತೋರಿಸುತ್ತ ಎಂಥ ಮೂರ್ಖ ಕೆಲಸ ಮಾಡಿದೆ ಎಂದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/148; 17/126; 6/117 – ಶ್ರೀಮಾತೆ**

## ಗ್ರಹಣಶೀಲತೆ

*ದೈವೀ ಸಂಕಲ್ಪದ ಅರಿವು ಮತ್ತು ಅದಕ್ಕೆ ಸಂಪೂರ್ಣ ಶರಣಾಗುವಿಕೆ*
*(ಇದು ಶ್ರೀಮಾತೆಯು ಪುಷ್ಪಕ್ಕೆ ನೀಡಿರುವ ಅಧ್ಯಾತ್ಮಿಕ ಮಹತ್ವ ಹಾಗೂ ವಿವರಣೆಗಳು)*
*ಸಸ್ಯಶಾಸ್ತ್ರೀಯ ಹೆಸರು: ಗ್ಲಾಡಿಯೋಲಸ್ ಖೊಟೋಲಾನಸ್*

## ಪ್ರಗತಿ

– ಅನುವಾದ: ಪ್ರೊ. ವೀರಭದ್ರಪ್ಪ ಕೆ.

ಪ್ರಗತಿ ಮತ್ತು ನಿಶ್ಚಲ ಸ್ಥಿತಿಯಲ್ಲಿರದಿರುವಿಕೆ, ಅವಶ್ಯಕ ಮತ್ತು ಅಪೇಕ್ಷಣೀಯತೆ ಅವನ (ಮನುಷ್ಯನ) ಜೀವನ ಸೂತ್ರ ಆಗಿವೆ. ಉಸಿರು ಬಿಗಿ ಹಿಡಿದು ಯಾವುದೇ ಬೆಡಗಿನಿಂದ ಓಡುವುದಲ್ಲಾ, ಆದರೆ ಚೈತನ್ಯದ ಸತ್ಯದೆಡೆಗೆ ಹೆಚ್ಚು ಹೆಚ್ಚಾಗಿ ಕ್ರಮಿಸಿ ವೈಯಕ್ತಿಕ ಆಲೋಚನೆ ಮತ್ತು ಜೀವನವಲ್ಲದೆ, ಸಮಷ್ಟಿಕತೆಯಲ್ಲಿ ಸಾಮಾಜಿಕ ಪ್ರಯತ್ನ, ಇದರೊಟ್ಟಿಗೆ, ಆದರ್ಶಗಳು, ಸ್ವಭಾವ, ಸಾಮಾಜಿಕ ಸಿದ್ಧತೆ, ಪರಿಪೂರ್ಣತೆಯೊಡೆಗೆ ಪ್ರಯತ್ನಪಡುವುದು.

ಆಂತರಿಕ ಬೆಳವಣಿಗೆಗೆ ಮೊದಲನೆ ಷರತ್ತು ಏನೆಂದರೆ, ನಮ್ಮ ಪ್ರಕೃತಿಯ ಯಾವುದಾದರೂ ಭಾಗದಲ್ಲಿ ತಪ್ಪು ನಡೆಗಳಿವೆಯೆ, ತಪ್ಪು ಕಲ್ಪನೆಗಳು, ತಪ್ಪು ಸಂವೇದನೆಗಳು, ತಪ್ಪು ನುಡಿಗಳು ತಪ್ಪು ಕ್ರಿಯೆಗಳು ಮತ್ತು ತಪ್ಪು ಎಂದರೆ ಸತ್ಯದಿಂದ ಎಷ್ಟು ದೂರ ಸರಿದಿದ್ದೇವೆ, ಉನ್ನತ ಪ್ರಜ್ಞೆಯಿಂದ ಮತ್ತು ಉನ್ನತ ವ್ಯಕ್ತಿತ್ವದಿಂದ ದೈವತ್ವದಿಂದ ಎಷ್ಟು ದೂರ ಸರಿದಿದ್ದೇವೆ ಎಂದು, ಒಂದು ಸಲ ಇದನ್ನು ಗುರುತಿಸಿ ಇದನ್ನು ಒಪ್ಪಿಕೊಂಡಾಗ, ಅದನ್ನು ಮರೆಮಾಚದೆ ಅಥವಾ ಸಮರ್ಥಿಸದೆ ಮತ್ತು ಅದನ್ನು ದೈವಕ್ಕೆ ಅರ್ಪಿಸಿ, ಜ್ಞಾನ ಮತ್ತು ಕೃಪೆಗಳು ಅವತರಣಗೊಳಿಸಿಕೊಂಡು ಮತ್ತು ಇವುಗಳನ್ನು ಸರಿಯಾದ ನಡವಳಿಕೆಯಿಂದ ಮತ್ತು ಸೂಕ್ತವಾದ ಪ್ರಜ್ಞೆಯಿಂದ ಬದಲಾಯಿಸಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/175; 29/131 – ಶ್ರೀ ಅರವಿಂದರು**

ಸೃಷ್ಠಿಯಲ್ಲಿ ದೈವಿ ಪ್ರಭಾವದ ಕುರುಹು ಎಂದರೆ ಅದು ಪ್ರಗತಿ.

*

ಭೂಮಿಯ ಮೇಲಿನ ಜೀವನದ ಉದ್ದೇಶವೆಂದರೆ ಪ್ರಗತಿ. ನೀವು ಪ್ರಗತಿ ನಿಲ್ಲಿಸಿದರೆ, ಸಾಯುವಿರಿ. ನೀವು ಪ್ರಗತಿ ಸಾಧಿಸದೆ ವ್ಯಯಿಸಿದ ಪ್ರತಿ ಕ್ಷಣವೂ ನಿಮ್ಮನ್ನು ಸಮಾಧಿ ಕಡೆ ಚಲಿಸುವಂತೆ ಮಾಡುತ್ತದೆ.

*

ಯಾವ ಕ್ಷಣದಲ್ಲಿ ನೀವು ಸಂತೃಪ್ತ ಮತ್ತು ಅಭೀಪ್ಸೆ ಪಡುವುದಿಲ್ಲವೋ, ಆಗ ನೀವು ಸಾಯಲು ಪ್ರಾರಂಭಿಸಿರುತ್ತೀರಿ. ಜೀವನವೆಂದರೆ ಕ್ರಿಯಾಶೀಲತೆ, ಜೀವನವೆಂದರೆ ಪ್ರಯತ್ನ. ಮುಂದಕ್ಕೆ ಚಲಿಸುವುದು, ಭವಿಷ್ಯದ ದರ್ಶನ ಮತ್ತು ಸಾಕ್ಷಾತ್ಕಾರಕ್ಕಾಗಿ ಆರೋಹಿಸುವುದು. ನಿಶ್ಚಲ ಸ್ಥಿತಿಯಲ್ಲಿ ಇರಬಯಸುವುದರಷ್ಟು ಅಪಾಯಕಾರಿ–ಯಾದದ್ದು ಮತ್ತೊಂದಿಲ್ಲ.

*

ನಾವು ಯಾವಾಗಲೂ ಏನಾದರೊಂದು ಕಲಿಯುತ್ತೇವೆ ಮತ್ತು ಪ್ರಗತಿ ಸಾಧಿಸುತ್ತೇವೆ ಮತ್ತು ಪ್ರತಿ ಸಂದರ್ಭದಲ್ಲಿ ನಾವು ಕಲಿಯುವ ಅವಕಾಶವನ್ನು ಪಡೆಯುತ್ತೇವೆ ಮತ್ತು ಪ್ರಗತಿ ಸಾಧಿಸುತ್ತೇವೆ.

*

ನಾವು ಏನಿದ್ದೇವೋ ಮತ್ತು ನಮ್ಮಲ್ಲಿ ಏನಿದೆಯೋ ಅದನ್ನು ಸಮರ್ಪಿಸಿ. ಈ ಪಥದಲ್ಲಿ ಮುಂದುವರೆಯಲು ಪ್ರತಿಕ್ಷಣ ತಯಾರಿರಬೇಕು.

*

ನಿಜವಾದ ಪ್ರಗತಿ ನಮ್ಮನ್ನು ದೈವತ್ವದ ಸನಿಹ ತರುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 15/75, 77 – ಶ್ರೀಮಾತೆ**

## ಪ್ರಗತಿ

ಇದಕ್ಕಾಗಿಯೇ ನಾವು ಭೂಮಿಯ ಮೇಲೆ ಇರುವುದು.

*(ಇದು ಶ್ರೀಮಾತೆಯು ಪುಷ್ಪಕ್ಕೆ ನೀಡಿರುವ ಅಧ್ಯಾತ್ಮಿಕ ಮಹತ್ವ ಹಾಗೂ ವಿವರಣೆಗಳು)*

*ಸಸ್ಯಶಾಸ್ತ್ರೀಯ ಹೆಸರು:* ಕ್ಯಾತಾರಂಥಾಸ್ ರೊಸೆಸ್

## ಧೈರ್ಯ

ಯಾವುದೇ ರೀತಿಯ ಹೆದರಿಕೆ ಇಲ್ಲದಿರುವುದೇ ಧೈರ್ಯ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/282**

ಹೆದರಿಕೆ ಎಂಬುದು ಒಂದು ಕಲ್ಮಶ ಅತ್ಯಂತ ಹೆಚ್ಚಿನ ಕಲ್ಮಶ ಭೂಮಿಯ ಮೇಲೆ ದೈವಿ ಕಾರ್ಯವನ್ನು ನಾಶಮಾಡಲು ಒಂದು ದೈವಿ ವಿರೋಧ ಶಕ್ತಿಯಿಂದ ನೇರವಾಗಿ ಬಂದವುಗಳಾಗಿವೆ.

ಯೋಗ ಮಾಡುವವರ ಮೊದಲ ಕರ್ತವ್ಯವೆಂದರೆ ಬಹಳ ಪ್ರಾಮಾಣಿಕತೆಯೊಂದಿಗೆ ತಾಳ್ಮೆಯಿಂದ ಈ ಕಲ್ಮಶವನ್ನು ಮತ್ತು ಅಂಜಿಕೆಯ ನೆರಳನ್ನು ತಮ್ಮ ಪ್ರಜ್ಞೆಯಿಂದ ತೆಗೆದುಹಾಕಲು ಸಮರ್ಥರಿದ್ದಾರೆ. ಈ ಪಥದಲ್ಲಿ ನಡೆಯುವವರು ಪಟ್ಟುಬಿಡಬಾರದು. ಕ್ಷುಲ್ಲಕ, ಸೂಕ್ಷ್ಮ, ದುರ್ಬಲ, ಇಂತಹ ನೀಚತ್ವದಿಂದ ಸಂಕುಚಿತಗೊಳಿಸಿ ಹೆದರಿಕೆಯಲ್ಲಿ ತೊಡಗಿಸಿಕೊಳ್ಳಬಾರದು. ಒಂದು ಸೋಲದ ಧೈರ್ಯ ಪರಿಪೂರ್ಣ ಪ್ರಾಮಾಣಿಕತೆ ಮತ್ತು ಪರಿಪೂರ್ಣ ಅರ್ಪಣೆ ಯಾವುದೇ ಲೆಕ್ಕಾಚಾರವಿಲ್ಲದೆ ಅಥವಾ ಚೌಕಾಸಿ ಮಾಡದೆ, ಏನನ್ನೋ

ಪಡೆಯಬಹುದು ಎನ್ನುವ ಕಲ್ಪನೆಯೊಂದಿಗೆ ಸಮರ್ಥಿಸಿಕೊಳ್ಳಬೇಕೆಂಬುದು ನಮ್ಮನ್ನು ಕಾಪಾಡುತ್ತಾರೆ ಎಂಬ ಕಲ್ಪನೆಯ ನಂಬಿಕೆಯಿಲ್ಲದಿರುವುದು. ನಂಬಿಕೆಯಿಲ್ಲದೆ ಪುರಾವೆಗಳನ್ನು ಕೇಳುವುದು. ಈ ಹಾದಿಯಲ್ಲಿ ನಡೆಯಲು ಇಂತಹವು ಅವಶ್ಯಕ ಮತ್ತು ಇದು ಮಾತ್ರ ನಿಜವಾಗಿ ಇಂತಹ ಅಪಾಯಗಳಿಂದ ನಮ್ಮನ್ನು ರಕ್ಷಣೆ ಮಾಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/260–61**

ಸಮಗ್ರ ಧೈರ್ಯ: ಯಾವುದೇ ಕ್ಷೇತ್ರವಿರಲಿ ಯಾವುದೇ ಅಪಾಯವಿರಲಿ, ನಿಲುವು ಮಾತ್ರ ಒಂದೇ ಶಾಂತ ಮತ್ತು ದೃಢ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/169**

ಯಾರೇ ಆಗಲಿ ಧೈರ್ಯವಿದ್ದವರು ಇನ್ನೊಬ್ಬರಿಗೆ ಧೈರ್ಯ ಕೊಡಬಹುದು. ಒಂದು ಬೆಳಗುವ ದೀಪ ಇನ್ನೊಂದು ದೀಪವನ್ನು ಹಚ್ಚಿ ಬೆಳಗುವ ಹಾಗೆ.

*

ಒಂದು ಉದಾತ್ತವಾದ ಧೈರ್ಯವೆಂದರೆ ನಮ್ಮ ತಪ್ಪುಗಳನ್ನು ಗುರುತಿಸಿಕೊಳ್ಳುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/170**

ನನಗೆ ನೆನಪಿದ್ದ ಹಾಗೆ ನಾವು ಧೈರ್ಯವೆಂದರೆ ಒಂದು ರೀತಿಯ ಪರಿಪೂರ್ಣತೆಯೆಂದು ಮಾತಾಡಿದ್ದೇವೆ. ಆದರೆ ಈ ಧೈರ್ಯಯೆಂದರೆ ಪರಮಾತ್ಮನ ಸಾಹಸದ ರುಚಿಯೆಂದು ಮತ್ತು ಪರಮಾತ್ಮನೆಡೆಗಿನ ಸಾಹಸದ ರುಚಿ... ನಿಮ್ಮನ್ನು ಸಂಪೂರ್ಣವಾಗಿ ಅದಕ್ಕೆ ಒಡ್ಡಿ, ಕಟ್ಟಿ ಹಾಕುವುದು. ಯಾವುದೇ ಲೆಕ್ಕಾಚಾರವಿಲ್ಲದೆ ಮತ್ತು ಯಾವುದೇ ಬಿಗುಮಾನವಿಲ್ಲದೆ ಮತ್ತು ಹಿಂತೆಗೆದು–ಕೊಳ್ಳುವಿಕೆಯಿಲ್ಲದೆ ಸಾಧ್ಯತೆಯೊಂದಿಗೆ ದೈವವನ್ನು ಕಂಡುಕೊಳ್ಳುವಿಕೆಯ, ಉನ್ನತ ಸಾಹಸದೊಂದಿಗೆ, ದೈವವನ್ನು ಭೇಟಿಯಾಗುವ ಉನ್ನತ ಸಾಹಸದೊಂದಿಗೆ ದೈವವನ್ನು ಸಾಕ್ಷಾತ್ಕರಿಸಿಕೊಳ್ಳುವ ಇನ್ನು ಹೆಚ್ಚಿನ ಸಾಹಸದೊಂದಿಗೆ ನಿಮ್ಮನ್ನು ನೀವು ಈ ಸಾಹಸಕ್ಕೆ ಹರಡಿಕೊಂಡು ಹಿಂದೆ ನೋಡದೆ ಮತ್ತು ಪ್ರತಿ ನಿಮಿಷ "ಮುಂದೆ ಏನಾಗಬಹುದೆಂದು?" ನೀವು ಏನಾಗಬಹುದೆಂದು ಕೇಳಿದರೆ, ನೀವು ಆರಂಭ

ಮಾಡುವುದಿಲ್ಲ, ನೀವು ಅಲ್ಲೇ ಉಳಿದು ಬಿಡುವಿರಿ. ಇದ್ದಲ್ಲೇ ಬೇರೂರುವಿರಿ. ಏನೋ ಕಳೆದುಕೊಳ್ಳುವ ಭೀತಿಯಿಂದ ನೀವು ನಿಮ್ಮ ಸಮತೆಯನ್ನು ಕಳೆದುಕೊಳ್ಳುವಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/40–41**

ಪ್ರಗತಿ ನಿಧಾನವಾಗಿರಬಹುದು. ಪದೇ ಪದೇ ಹಿಂದಿನ ದುಸ್ಥಿತಿ ಮರುಕಳಿಸಬಹುದು. ಆದರೆ ಧೈರ್ಯವಾದ ಸಂಕಲ್ಪವನ್ನು ಉಳಿಸಿಕೊಂಡರೆ, ಒಂದು ದಿನ ವಿಜಯ ಸಾಧಿಸುವುದು ಖಂಡಿತಾ ಮತ್ತು ಎಲ್ಲಾ ತೊಂದರೆಗಳು ಕರಗುವವು ಮತ್ತು ಸತ್ಯಪ್ರಜ್ಞೆಯ ಪ್ರಕಾಶದ ಮುಂದೆ ಕಣ್ಮರೆಯಾಗುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/7 – ಶ್ರೀಮಾತೆ**

## ಧೈರ್ಯ

*ದಿಟ್ಟ ಎಲ್ಲಾ ಅಪಾಯಗಳನ್ನು ಎದುರಿಸುತ್ತದೆ.*

*(ಇದು ಶ್ರೀಮಾತೆಯು ಪುಷ್ಪಕ್ಕೆ ನೀಡಿರುವ ಅಧ್ಯಾತ್ಮಿಕ ಮಹತ್ವ ಹಾಗೂ ವಿವರಣೆಗಳು)*

*ಸಸ್ಯಶಾಸ್ತ್ರೀಯ ಹೆಸರು:* ಕ್ಯಾಲೋಟ್ರೋಪಿಸ್ ಗೀಗಾಂಟೀಯಾ

## ಒಳ್ಳೆಯಗುಣ

– ಅನುವಾದ: ನಾಗಜ್ಯೋತಿ ಇರಿವಾರ್

ನಾನು ಬಹಳಷ್ಟು ಜನರು ಹೀಗೆ ಹೇಳಿರುವುದನ್ನು ಕೇಳಿದ್ದೇನೆ. – "ಓಹ್! ಈಗ ನಾನು ಒಳ್ಳೆಯವನಾಗಿರಲು ಪ್ರಯತ್ನಿಸುತ್ತಿದ್ದೇನೆ, ಎಲ್ಲರೂ ನನಗೆ ಕೆಟ್ಟವರಂತೆ ಕಾಣುತ್ತಿದ್ದಾರೆ!" ಇದು ನಿಖರವಾಗಿ ನಿಮಗೆ ಏನನ್ನು ಕಲಿಸಲು ಪ್ರಯತ್ನಿಸುತ್ತಿದೆ ಎಂದರೆ, ನೀವು ಉದ್ದೇಶಪೂರ್ವಕವಾಗಿ ಒಳ್ಳೆಯವರಾಗಲು ಪ್ರಯತ್ನಿಸಬಾರದು, ಇನ್ನೊಬ್ಬರ ದೃಷ್ಟಿಯಲ್ಲಿ ಒಳ್ಳೆಯವರಾಗಲು ನಾವು ಒಳ್ಳೆಯವರಾಗಬಾರದು – ಒಳ್ಳೆಯವರಾಗಿರಬೇಕೆಂದೇ ಒಳ್ಳೆಯರಾಗಿರಬೇಕು!

ಇದು ಯಾವಾಗಲೂ ಕಲಿಯಬೇಕಾದ ಒಂದೇ ಪಾಠ: ಎಷ್ಟು ಶ್ರೇಷ್ಠವಾಗಿ ಮಾಡಲು ಸಾಧ್ಯವೋ ಯಾವುದೇ ಫಲದ ನಿರೀಕ್ಷೆಯಿಲ್ಲದೆ, ಯಾವುದೇ ಫಲದ

ನಿರೀಕ್ಷೆಯಿಲ್ಲದೆ, ಯಾವುದೇ ಫಲಿತಾಂಶದ ದೃಷ್ಟಿಯಿಂದ ಮಾಡದೆ, ನಮಗೆ ಮಾಡಲು ಏನು ಉತ್ತಮ ಸಾಧ್ಯವೋ ಅದನ್ನು ಮಾಡಬೇಕು. ಕೇವಲ ಈ ಮನೋಭಾವ, ಪ್ರತಿಫಲಾಪೇಕ್ಷೆಯಿಂದ ಮಾಡುವ ಒಳ್ಳೆಯ ಕಾರ್ಯ–ಜೀವನವನ್ನು ಸುಲಭಗೊಳಿಸಲು, ಒಳ್ಳೆಯವರಾಗಬೇಕೆಂಬ ಉದ್ದೇಶ – ಒಳ್ಳೆಯ ಕಾರ್ಯದ ಎಲ್ಲಾ ಮೌಲ್ಯವನ್ನು ಕಳೆಯುತ್ತದೆ.

ಒಳ್ಳೆಯತನದ ಮೇಲಿನ ಪ್ರೀತಿಗಾಗಿ ನೀವು ಒಳ್ಳೆಯವರಾಗಬೇಕು, ನ್ಯಾಯದ ಮೇಲಿನ ಪ್ರೀತಿಗಾಗಿ ನ್ಯಾಯಯುತನಾಗಿರಬೇಕು, ಪರಿಶುದ್ಧತೆಯ ಮೇಲಿನ ಪ್ರೀತಿಗಾಗಿ ಪರಿಶುದ್ಧವಾಗಿರಬೇಕು, ನಿರಾಸಕ್ತಿಯ ಮೇಲಿನ ಪ್ರೀತಿಗಾಗಿ ನಿರಾಸಕ್ತಿಯಿಂದಿರಬೇಕು; ಆಗ ನೀವು ಮಾರ್ಗದಲ್ಲಿ ಮುನ್ನಡೆಯನ್ನು ಸಾಧಿಸುವುದು ಖಚಿತ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/264–65**

ಯೋಗವನ್ನು ಮಾಡಲು, ಈ ರೂಪಾಂತರದ ಯೋಗವು, ಬೇರೆಲ್ಲವುದಕ್ಕಿಂತಲೂ ಅತಿ ಕಠಿಣವಾದದು. – ಕೇವಲ ಇದಕ್ಕಾಗಿಯೇ ನಾನು ಬಂದಿದ್ದೇನೆಂದು ಭಾವಿಸಿದರೆ, (ಅಂದರೆ, ಈ ಭೂಮಿಯ ಮೇಲೆ) ಇದನ್ನಲ್ಲದೆ ನಾನು ಬೇರೇನನ್ನೂ ಮಾಡುವ ಉದ್ದೇಶವಿಲ್ಲ, ಅದೊಂದೇ ನನ್ನ ಏಕೈಕ ಉದ್ದೇಶವಾಗಿದೆ – ಇದಕ್ಕಾಗಿ ಕಷ್ಟ, ಸಂಕಟ, ಹೋರಾಟ ಅನುಭವಿಸಿದರೂ ಅದೇನೂ ಪ್ರಾಮುಖ್ಯತೆ ಅಲ್ಲ. "ಇದಲ್ಲದೆ ನನಗೆ ಬೇರೇನೂ ಬೇಕಿಲ್ಲ." – ಆಗ ಅದು ವಿಭಿನ್ನವಾಗಿರುತ್ತದೆ. ಹೀಗಿರದಿದ್ದರೆ, ನಾನು ಹೇಳುವುದು, "ಸಂತೋಷವಾಗಿರಿ, ಒಳ್ಳೆಯವರಾಗಿರಿ; ಇದನ್ನು ಮಾತ್ರ ನಿಮ್ಮಿಂದ ನಿರೀಕ್ಷಿಸಲಾಗುತ್ತದೆ. ಒಳ್ಳೆಯವರಾಗಿರಿ ಎಂದರೆ, ಇದರರ್ಥ, ನಾನು ಈಗ ಬದುಕುತ್ತಿರುವ ಕಾಲವು ಅತಿ ವಿಶಿಷ್ಟವಾದುದು ಎಂದು ತಿಳಿದು, ಮತ್ತು ಉನ್ನತ, ಹೆಚ್ಚು ಶ್ರೇಷ್ಠ ಹಾಗೂ ಸಾಮಾನ್ಯ ಜೀವನಕ್ಕಿಂತಲೂ ಹೆಚ್ಚು ನಿಜವಾದ ಜೀವನವನ್ನು ಈ ಒಳ್ಳೆಯತನವನ್ನು ಸ್ವಲ್ಪಮಟ್ಟಿಗಾದರೂ ಈ ಜಗತ್ತಿನಲ್ಲಿ ವ್ಯಕ್ತಪಡಿಸಲು ಸಾಧ್ಯವಾಗುತ್ತದೆ. ಇಷ್ಟಾದರೆ, ಬಹಳ ಒಳ್ಳೆಯದಾದಂತೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/200**

ಒಳ್ಳೆಯ ಕಾರ್ಯವು ಅಧರಕ್ಕೆ ಸಿಹಿಯಾಗಿರುವುದಕ್ಕಿಂತಲೂ ಹೃದಯಕ್ಕೆ ಸಿಹಿಯಾಗಿರುತ್ತದೆ.

ಒಳ್ಳೆಯ ಕಾರ್ಯವನ್ನು ಮಾಡದೆ ಕಳೆದ ದಿನವು ಆತ್ಮವಿಲ್ಲದ ದಿನವಿದ್ದಂತೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/225**

ಒಬ್ಬನು ತನ್ನ ಹೃದಯದಲ್ಲಿ ಸದ್ಭಾವನೆ ಮತ್ತು ಪ್ರೀತಿಯನ್ನು ನಿರಂತರವಾಗಿ ಇಟ್ಟುಕೊಳ್ಳಬೇಕು ಹಾಗೂ ಅವುಗಳನ್ನು ನೆಮ್ಮದಿ ಮತ್ತು ಸಮಚಿತ್ತತೆಯಿಂದ ಎಲ್ಲರ ಮೇಲೆ ಧಾರೆ ಎರೆಯಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/186**

ಆವಿಶ್ರಾಂತಿ ಉಪಕಾರ, ಸ್ಪಷ್ಟನೋಟ ಮತ್ತು ಗ್ರಹಿಕೆ ವೈಯಕ್ತಿಕ ಪ್ರತಿಕ್ರಿಯೆಯಿಂದ ಮುಕ್ತವಾದ ರೀತಿಯೋ, ದೇವರನ್ನು ಪ್ರೀತಿಸುವ ಮತ್ತು ಭೂಮಿಯ ಮೇಲೆ ಆತನ ಸೇವೆಗೈಯುವ ಶ್ರೇಷ್ಠ ಮಾರ್ಗವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/187** **– ಶ್ರೀಮಾತೆ**

## ಉದಾರತೆ

"ಉದಾತ್ತತೆ ಮತ್ತು ಉದಾರತೆಗಳು ಆತ್ಮದ ಅಲೌಕಿಕ ಸ್ವರ್ಗಗಳಿದ್ದಂತೆ ಇವುಗಳಿಲ್ಲದವರು ಕತ್ತಲ ಕೋಣೆಯಲ್ಲಿರುವ ಕೀಟದಂತೆ."

**– ಶ್ರೀ ಅರವಿಂದರು**

*ಶ್ರೀಮಾತೆಯವರು ವಿವರಿಸುತ್ತಾರೆ:*

ಉದಾತ್ತತೆ ಎಂದರೆ ಎಲ್ಲಾ ವೈಯಕ್ತಿಕ ಲೆಕ್ಕಾಚಾರಗಳನ್ನು ನಿರಾಕರಿಸುವುದು. ಉದಾ: ತೃಪ್ತಿಯನ್ನು ಕಾಣುವುದು.

*ಪ್ರಶ್ನೆ: ಮಹಾಲಕ್ಷ್ಮಿಯ ಬಗ್ಗೆ ಶ್ರೀ ಅರವಿಂದರು ಹೀಗೆ ಹೇಳುತ್ತಾರೆ – "ಯಾವುದೆಲ್ಲ ಕಳಪೆಯಾಗಿದೆಯೋ.., ಆಕೆಯ ಆಗಮನವನ್ನು ಹಿಮ್ಮೆಟ್ಟಿಸುತ್ತದೆ."?*

ಹೌದು, ಬಡತನ, ಉದಾರತೆಯಿಲ್ಲದೆ, ಉತ್ಸಾಹವಿಲ್ಲದೆ, ವೈಶಾಲ್ಯವಿಲ್ಲದೆ, ಆಂತರಿಕ ಶ್ರೀಮಂತಿಕೆಯಿಲ್ಲದೆ; ಯಾವುದು ಬರಡಾಗಿದೆ, ಶೀತದಂತೆ ಅಸ್ಪಶ್ಯವಾಗಿದೆ, ಹುದುಗಿದೆಯೋ ಅದು ಮಹಾಲಕ್ಷ್ಮಿಯ ಆಗಮನವನ್ನು ತಡೆಯುತ್ತದೆ. ನಿಮಗೆ ಗೊತ್ತಿರಲಿ, ಇಲ್ಲಿ ಪ್ರಶ್ನೆ ಹಣದ ಮೊತ್ತವೆಷ್ಟೆಂಬುದಲ್ಲ! ಅತ್ಯಂತ ಶ್ರೀಮಂತ ವ್ಯಕ್ತಿ ಮಹಾಲಕ್ಷ್ಮಿಯ ದೃಷ್ಟಿಕೋನದಿಂದ ಭಯಂಕರವಾಗಿ ಬಡವನಾಗಿರಬಹುದು. ಮತ್ತು ಹೃದಯವು ಉದಾರವಾಗಿದ್ದರೆ, ತುಂಬಾ ಬಡವನು ತುಂಬಾ ಶ್ರೀಮಂತನಾಗಿರಬಹುದು.

ಯಾರಲ್ಲಿ ಯಾವುದೇ ಗುಣಗಳಿಲ್ಲವೋ, ಬಲವಿಲ್ಲವೋ, ಶಕ್ತಿಯಿಲ್ಲವೋ ಉದಾರತೆಯಿಲ್ಲವೋ, ಅವನೇ ಬಡವನು. ಅವನು ಒಬ್ಬ ಶೋಚನೀಯ, ಅತೃಪ್ತ ಮನುಷ್ಯ. ಇದಲ್ಲದೆ, ಒಬ್ಬರು ಉದಾರವಾಗಿರದಿದ್ದಾಗ ಮಾತ್ರ ಅತೃಪ್ತರಾಗುತ್ತಾರೆ. ಯಾರಲ್ಲಿ ಉದಾರತೆಯಿರುತ್ತದೆಯೋ ಅವನು ಲೆಕ್ಕಿಸದೇ ತನ್ನನ್ನು ತಾನೇ ನೀಡುತ್ತಾನೆ, ಅವನು ಎಂದೂ ಅಸಂತೋಷಿಯಲ್ಲ. ಯಾರು ತಮ್ಮೊಳಗೆ ತಾವೇ ಮುಳುಗಿರುತ್ತಾರೋ ಮತ್ತು ಯಾರು ಎಲ್ಲಾ ವಿಷಯ ವಸ್ತುಗಳನ್ನು ತಮ್ಮೆಡೆಗೆ ಸೆಳೆಯುತ್ತಾರೋ, ಯಾರು ವಸ್ತುಗಳನ್ನು ಮತ್ತು ಜಗತ್ತನ್ನು ತನ್ನ ಮೂಲಕವೇ ನೊಡುತ್ತಾರೋ: ಅವರೇ ಅತೃಪ್ತರು ಆದರೆ ಯಾರು ತನ್ನನ್ನು ತಾನು ಉದಾರತೆಯಿಂದ, ಲೆಕ್ಕಾಚಾರವಿಲ್ಲದೆ ಕೊಟ್ಟುಕೊಳ್ಳುತ್ತಾನೋ ಅವನು ಎಂದೆಂದಿಗೂ ಅತೃಪ್ತನಾಗುವುದಿಲ್ಲ. ಕೊಡುವವನು ಸಂತೃಪ್ತ, ತೆಗೆದುಕೊಳ್ಳುವವನೇ ಅತೃಪ್ತ.

*

*ಪ್ರಶ್ನೆ: ಉದಾರತೆಯು ಸತ್ಯದ ವಿಕಾರ ರೂಪವೇ?*

ಹೌದು, ಎಲ್ಲ ಮಾನವ ಗುಣಗಳು ಅವುಗಳ ಹಿಂದೆ, ಇರುವ ಸತ್ಯದ ವಿಕಾರ ರೂಪಗಳಾಗಿವೆ. ನೀವು ಗುಣಗಳು ಅಥವಾ ದೋಷಗಳು ಎಂದು ಕರೆಯುವ ಎಲ್ಲವೂ ಯಾವಾಗಲು, ಹಿಂದೆ ಇರುವ ಯಾವುದೋ ಒಂದರ ವಿರೂಪತೆಯಾಗಿದೆ, ಮತ್ತು ಅದು ಇದಾವುದೂ ಆಗಿರದೇ ಬೇರೇನೋ ಇರುತ್ತದೆ. ಆದರೆ ನಾನು ಹೇಳುತ್ತೇನೆ, ಇದಲ್ಲದೆ ಉದಾರತೆಯ ಹಿಂದಿರುವ ಸತ್ಯವೇನೆಂದರೆ; ಅದು ಹರಡುವ ಶಕ್ತಿಗಳ ಚಲನೆಯಾಗಿದೆ. ಆದರೆ ಈ ಶಕ್ತಿಗಳು ಹರಡಬೇಕಾದರೆ, ಅವು ಮೊದಲು ಕೇಂದ್ರೀಕೃತವಾಗಬೇಕು, ಆದುದರಿಂದ ಒಂದು ರೀತಿಯ ಸ್ಪಂದನ ಚಲನೆಯಿದೆ. ಶಕ್ತಿಗಳು ಕೇಂದ್ರೀಕೃತಗೊಳ್ಳುತ್ತಿವೆ.

ನಂತರ ಅವು ಹರಡುತ್ತವೆ, ಮತ್ತು ನಂತರ ಮತ್ತೆ ಕೇಂದ್ರೀಕೃತವಾಗಿ ಮತ್ತೆ ಹರಡುತ್ತವೆ.., ಆದರೆ ನೀವು ಯಾವಾಗಲೂ ಕ್ರೂಢೀಕರಿಸದೇ ಹರಡಲು ಬಯಸಿದರೆ ಒಂದು ನಿರ್ದಿಷ್ಟ ಸಮಯದ ನಂತರ ಹರಡಲು ಏನೂ ಉಳಿದಿರುವುದಿಲ್ಲ. ಶಕ್ತಿಗಳಿಗೆ – ಎಲ್ಲಾ ಶಕ್ತಿಗಳಿಗೆ – ಇದು ಅನ್ವಯಿಸುತ್ತದೆ.

*

ನಾನು ನೈತಿಕ ಉದಾರತೆಯ ಬಗ್ಗೆ ಮಾತನಾಡಲು ಬಯಸುತ್ತೇನೆ. ಉದಾಹರಣೆಗೆ ಒಡನಾಡಿ ಯಶಸ್ವಿಯಾದಾಗ ಸಂತೋಷಪಡುವುದು. ಧೈರ್ಯದಿಂದ ಮಾಡಿದ ಕ್ರಿಯೆ, ನಿಸ್ವಾರ್ಥತೆ, ಉತ್ತಮ ತ್ಯಾಗದಲ್ಲಿ ಸೌಂದರ್ಯವಿದೆ. ಅದು ನಿಮಗೆ ಆನಂದವನ್ನು ಕೊಡುತ್ತದೆ. ನೈತಿಕ ಉದಾರತೆಯು ಇತರರ ನಿಜವಾದ ಮೌಲ್ಯ ಮತ್ತು ಶ್ರೇಷ್ಟತೆಯನ್ನು ಗುರುತಿಸುವಲ್ಲಿ ಸಮರ್ಥವಾಗಿದೆ ಹೇಳಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/282;**
**4/403–04; 5/356; 4/30** **– ಶ್ರೀಮಾತೆ**

## ಉದಾರತೆ

*ಚೌಕಾಶಿ ಮಾಡದೆ ಸ್ವತ: ನೀಡುತ್ತದೆ. ಮತ್ತು ನೀಡುತ್ತದೆ.*

*(ಇದು ಶ್ರೀಮಾತೆಯು ಪುಷ್ಪಕ್ಕೆ ನೀಡಿರುವ ಅಧ್ಯಾತ್ಮಿಕ ಮಹತ್ವ ಹಾಗೂ ವಿವರಣೆಗಳು)*

*ಸಸ್ಯಶಾಸ್ತ್ರೀಯ ಹೆಸರು:* ಇಂಪ್ಯಾಟಿಯನ್ಸ್ ಬಾಲ್ಸಾಮಿನಾ

## ಸಮತೆ



ಸಮಾನತೆ ಎಂದರೆ ಶಾಂತ ಮತ್ತು ನಿಶ್ಚಲ ಮನಸ್ಸು ಮತ್ತು ಪ್ರಾಣ. ಇದರರ್ಥ ಸಂಭವಿಸುವ ಸಂಗತಿಗಳಿಂದ ಅಥವಾ ನಿಮಗೆ ಹೇಳಲಾದ ಅಥವಾ ಮಾಡಿದ ವಿಷಯಗಳಿಂದ ಪ್ರಭಾವಕ್ಕೊಳಗಾಗದೇ ಇರುವುದು ಅಥವಾ ವಿಚಲಿತಗೊಳ್ಳದೇ ಇರುವುದು, ಆದರೆ ಅವುಗಳನ್ನು ನೇರ ದೃಷ್ಟಿಯಿಂದ

ನೋಡುವುದು, ವೈಯಕ್ತಿಕ ಭಾವನೆಯಿಂದ ಸೃಷ್ಟಿಯಾದ ವಿರೂಪಗಳಿಂದ ಮುಕ್ತವಾಗಿರುವುದು, ಮತ್ತು ಅದರ ಹಿಂದೆ ಏನಿದೆ ಎಂದು ಅರ್ಥಮಾಡಿಕೊಳ್ಳುವುದು, ಅವು ಏಕೆ ಸಂಭವಿಸುತ್ತವೆ, ಅವುಗಳಿಂದ ನಾವು ಕಲಿಯಬೇಕಾದ ಪಾಠವೇನು, ನಮ್ಮೊಳಗಿನ ಯಾವ ಅಂಶದ ವಿರುದ್ಧ ಅವು ಕೆಲಸ ಮಾಡುತ್ತಿವೆ ಮತ್ತು ಅವುಗಳಿಂದ ಯಾವ ಆಂತರಿಕ ಲಾಭ ಅಥವಾ ಪ್ರಗತಿಯನ್ನು ಮಾಡಬಹುದು; ಇದರರ್ಥ ಪ್ರಾಣಿಕ ಚಲನೆಗಳ ಮೇಲೆ ಹಿಡಿತ ಸಾಧಿಸುವುದು, – ಸಿಟ್ಟು, ಸೂಕ್ಷ್ಮತೆ, ಗರ್ವ ಮತ್ತು ಆಸೆ ಹಾಗೂ ಇತ್ಯಾದಿ, – ಇವುಗಳು ನಮ್ಮ ಭಾವಾನಾತ್ಮಕ ಅಸ್ತಿತ್ವವನ್ನು ಹಿಡಿದಿಡಲು ಮತ್ತು ಆಂತರಿಕ ಶಾಂತಿಯನ್ನು ಕದಡಲು ಬಿಡಬಾರದು, ಇವುಗಳ ಪ್ರಚೋದನೆಯಿಂದ ರಭಸದಲ್ಲಿ ನುಗ್ಗಿ ಮಾತು ಮತ್ತು ಕೃತಿಯನ್ನು ಮಾಡಬಾರದು, ಯಾವಾಗಲೂ ನಮ್ಮ ಮಾತು ಮತ್ತು ಕೃತಿಗಳು ಚೈತನ್ಯದ ಅಂತರಂಗದ ಶಾಂತಿಯ ಸ್ಥರದಿಂದ ವ್ಯಕ್ತವಾಗಬೇಕು. ಈ ಸಮತೆಯನ್ನು ಪರಿಪೂರ್ಣ ರೀತಿಯಲ್ಲಿ ಹೊಂದುವುದು ಕಷ್ಟಕರ ಆದಾಗ್ಯೂ ನಮ್ಮ ಅಂತರಂಗ–ಬಹಿರಂಗದ ಚಟುವಟಿಕೆಗಳನ್ನು ಸಮತೆಯ ಬುನಾದಿಯ ಮೇಲೆ ಇರಿಸಲು ಪ್ರಯತ್ನಿಸಬೇಕು.

ಸಮಾನತೆ ಎಂದರೆ ಇನ್ನೊಂದು ವಿಷಯ–ವ್ಯಕ್ತಿಗಳ ಮತ್ತು ಅವರ ಪ್ರಕೃತಿ ಮತ್ತು ಕ್ರಿಯೆಗಳ ಹಾಗೂ ಅದರ ಹಿಂದಿರುವ ಶಕ್ತಿಗಳ ಬಗ್ಗೆ ಸಮತೆಯಿಂದ ನೋಡುವುದು; ಇದು ನಮಗೇನು ಸಹಾಯ ಮಾಡುತ್ತದೆ ಎಂದರೆ ಎಲ್ಲಾ ವೈಯಕ್ತಿಕ ಭಾವನೆ ತೀರ್ಮಾನ ಹಾಗೂ ಮಾನಸಿಕ ಪಕ್ಷಪಾತದಿಂದ ಮುಕ್ತನಾಗಿ, ಅವರ ಸತ್ಯವನ್ನು ತೋರಿಸುತ್ತದೆ. ವೈಯಕ್ತಿಕ ಭಾವನೆಗಳು ಯಾವಾಗಲೂ ವಿಕಾರಗೊಳಿಸುತ್ತವೆ ಹಾಗೂ ವ್ಯಕ್ತಿಗಳ ಕ್ರಿಯೆಗಳನ್ನಷ್ಟೆ ಅಲ್ಲದೆ, ಅದರ ಹಿಂದಿರುವ ಇಲ್ಲದ ಉದ್ದೇಶವನ್ನು ಕಾಣುವಂತೆ ಮಾಡುತ್ತದೆ. ತಳ್ಳಿಹಾಕಬಹುದಾಗಿದ್ದ ತಪ್ಪು ತಿಳುವಳಿಕೆ ಮತ್ತು ತಪ್ಪು ನಿರ್ಧಾರಗಳೇ ಇದರ ಪ್ರತಿಫಲಗಳಾಗಿ ಹೊಮ್ಮುತ್ತವೆ; ಕ್ಷುಲಕ ಪರಿಣಾಮದ ವಿಷಯಗಳು ದೊಡ್ಡ ವಿಷಯಗಳಾಗಿ ಮಾರ್ಪಾಡಾಗುತ್ತವೆ. ಈ ಕಾರಣದಿಂದ ಈ ತರಹದ ಅಹಿತಕರ ಘಟನೆಗಳು ಜೀವನದ ಅರ್ಧಭಾಗದಷ್ಟು ಸಂಭವಿಸಿರುವುದನ್ನು ನಾನು ನೋಡಿದ್ದೇನೆ. ಆದರೆ ಸಾಮಾನ್ಯ ಜೀವನದಲ್ಲಿ ವೈಯಕ್ತಿಕ ಭಾವನೆ ಮತ್ತು ಸೂಕ್ಷ್ಮತೆಯ ಮಾನವ ಸ್ವಭಾವದ ನಿರಂತರ ಭಾಗವಾಗಿದೆ ಮತ್ತು ಆತ್ಮರಕ್ಷಣೆಗಾಗಿ ಅಲ್ಲಿ ಅಗತ್ಯವಿರಬಹುದು,

ಆದಾಗ್ಯೂ, ಅಲ್ಲಿಯೂ ಸಹ, ವ್ಯಕ್ತಿಗಳ ಮತ್ತು ವಸ್ತುಗಳ ಬಗ್ಗೆ ಬಲವಾದ, ದೊಡ್ಡ ಮತ್ತು ಸಮಾನ ಮನೋಭಾವವು ಹೆಚ್ಚು ಉತ್ತಮವಾದ ರಕ್ಷಣೆಯ ಮಾರ್ಗವಾಗಿದೆ. ಆದರೆ ಸಾಧಕನಿಗೆ, ಅವರನ್ನು ಮೀರಿಸಿ ಆತ್ಮದ ಶಾಂತ ಶಕ್ತಿಯೊಂದಿಗೆ ಬದುಕುವುದು ಅವನ ಪ್ರಗತಿಯ ಅತ್ಯಗತ್ಯ ಭಾಗವಾಗಿದೆ.

*

ಸಮಾನತೆಯು ಹೊಸ ಅಜ್ಞಾನ ಅಥವಾ ಕುರುಡುತನ ಎಂದರ್ಥವಲ್ಲ; ನೋಡುವ ದೃಷ್ಟಿಯಲ್ಲಿ ಅಸ್ಪಷ್ಟತೆಯನ್ನು ತರುವುದಾಗಲಿ ಅಥವಾ ಎಲ್ಲಾ ವೈವಿಧ್ಯತೆಯನ್ನು ಅಳಿಸಿ ಹಾಕುವುದಾಗಲಿ ಇದರ ಉದ್ದೇಶವಲ್ಲ. ವ್ಯತ್ಯಾಸವಿದೆ, ಅಭಿವ್ಯಕ್ತಿಯಲ್ಲಿ ವೈವಿಧ್ಯತೆಯಿದೆ ಹಾಗೂ ಈ ವೈವಿಧ್ಯತೆಯನ್ನು ನಾವು ಪ್ರಶಂಸಿಸುತ್ತೇವೆ, – ಇದು ನ್ಯಾಯಯುತವಾದ ಪ್ರಶಂಸೆಯಾಗಿದೇ ಹೊರತು ತಪ್ಪು ಮತ್ತು ಭಾಗಶಃ ಪ್ರೀತಿ ಮತ್ತು ದ್ವೇಷದಿಂದ ಕುರುಡಾದ ನೋಟ, ಹೊಗಳಿಕೆ ಮತ್ತು ತೆಗಳಿಕೆ, ಸಹಾನುಭೂತಿ ಮತ್ತು ವೈರತ್ವ, ಆಕರ್ಷಣೆ ಮತ್ತು ವಿಕರ್ಷಣೆಗಳಿಂದಲ್ಲ. ಆದರೆ ನಾವು ಯಾವಾಗಲೂ ಬದಲಾವಣೆಯ ಹಿಂದೆ ವಾಸಿಸುವ ಪರಿಪೂರ್ಣ ಮತ್ತು 'ಅಚಲ'ವಾದುದನ್ನು ನೋಡುತ್ತೇವೆ. ಇದು ನಮ್ಮಿಂದ ಅಡಗಿದ್ದರೂ, ಅದನ್ನು ಭಾವಿಸುತ್ತೇವೆ, ತಿಳಿಯುತ್ತೇವೆ ಮತ್ತು ಯಾವುದೇ ಅಂಶದ ಪ್ರಕಟಣೆಯ ಹಿಂದೆ ದೈವೀ ಅವಶ್ಯಕತೆ ಮತ್ತು ಅವನ ವಿವೇಕದ ಉದ್ದೇಶವಿದೆ ಎಂದು ನಂಬುತ್ತೇವೆ. ಅದು ಮಾನವನ ಮಾನದಂಡದ ಪ್ರಕಾರ ಸಾಮರಸ್ಯ ಮತ್ತು ಪರಿಪೂರ್ಣವಾಗಿರಬಹುದು, ಒರಟು ಮತ್ತು ಅಪೂರ್ಣವಾಗಿರಬಹುದು, ಅಥವಾ ಅಸತ್ಯ ಮತ್ತು ಕೆಟ್ಟದಾಗಿರಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/130–31; 23/224–25**

**– ಶ್ರೀ ಅರವಿಂದರು**

**ಸಮತೆ**

*ಅಚಲ ಶಾಂತಿ ಮತ್ತು ತಾಳ್ಮೆ*

*(ಇದು ಶ್ರೀಮಾತೆಯು ಪುಷ್ಪಕ್ಕೆ ನೀಡಿರುವ ಅಧ್ಯಾತ್ಮಿಕ ಮಹತ್ವ ಹಾಗೂ ವಿವರಣೆಗಳು)*

*ಸಸ್ಯಶಾಸ್ತ್ರೀಯ ಹೆಸರು:* ಇಬೆರಿಸ್



# ಐದು ಮಾನಸಿಕ ಪರಿಪೂರ್ಣತೆ

*(ಪ್ರಾಮಾಣಿಕತೆ, ನಂಬಿಕೆ, ಭಕ್ತಿ, ಅಭೀಪ್ಸೆ, ಶರಣಾಗತಿ)*

– ಅನುವಾದ: ಡಾ॥ ಬಲಭೀಮ ಭೀಡ, ರಾಯಚೂರು

(ತಾವು ಮಾನಸಿಕ ಪರಿಪೂರ್ಣತೆ ಎಂದು ಹೆಸರಿಸಿದ್ದ ಚಂಪಕ ಪುಷ್ಪವನ್ನು ಕೈಯಿಂದ ಎತ್ತಿ ಹಿಡಿದು ತೋರಿಸುತ್ತಾರೆ. ಅದರ ಪಕಳೆಗಳನ್ನು ಎಣಿಸುತ್ತ ಶ್ರೀಮಾತೆಯವರು ಹೇಳುತ್ತಾರೆ) ಒಂದು, ಎರಡು, ಮೂರು, ನಾಲ್ಕು, ಐದು ಮಾನಸಿಕ ಪರಿಪೂರ್ಣತೆಗಳು. ಐದು ಮಾನಸಿಕ ಪರಿಪೂರ್ಣತೆಗಳು ಯಾವುವು? ಏಕೆಂದರೆ ಅವುಗಳಲ್ಲಿ ಬದಲಾವಣೆ ಮಾಡಬಹುದು. ಮತ್ತು ನಾನು ನಿಮಗೊಂದು ರಹಸ್ಯ ಹೇಳುತ್ತೇನೆ, – ನನ್ನ ರಹಸ್ಯ ಅದು. – ನಾನು ಯಾರಿಗೇ ಆಗಲಿ ಇದನ್ನು ನೀಡಿದಾಗ, ಯಾವಾಗಲೂ ಒಂದೇ ರೀತಿಯ ಮಾನಸಿಕ ಪರಿಪೂರ್ಣತೆಯನ್ನು ಸೂಚಿಸುವುದಿಲ್ಲ. ಅದು ಜನರ ಅವಶ್ಯಕತೆಗೆ ಅನುಗುಣವಾಗಿರುತ್ತದೆ. ವ್ಯಕ್ತಿ ಒಬ್ಬನೇ ಆಗಿದ್ದರೂ ಸಹ ಅವನಿಗೆ ಬೇರೆ ಬೇರೆ ಸಮಯದಲ್ಲಿ ಬೇರೆ ಮಾನಸಿಕ ಪರಿಪೂರ್ಣತೆಯನ್ನು ಕೊಡುತ್ತೇನೆ, ಅಲ್ಲಿ ಇಂಥದೇ ಎಂಬ ಗಟ್ಟಿ ನಿಯಮ ಇಲ್ಲ. ಮೊದಲ ಬಾರಿಗೆ ನಾನು ಅದಕ್ಕೆ ಹೆಸರು ಇಡುವ ಸಮಯದಲ್ಲಿ ಯಾರೊ ಅದನ್ನು ಬರೆದು ದಾಖಲಿಸಿ ಬಿಟ್ಟಿದ್ದಾರೆ. ಆದರೆ, ನನ್ನ ಮಟ್ಟಿಗೆ ಮಾತ್ರ ಅದು ತುಂಬ ತರವಾದುದು, ಹರಿಯುವಂಥದು. – ನಾನು ಇದೀಗ ಹೇಳಿದೆನಲ್ಲ, ಅದು ಸಂದರ್ಭ ಮತ್ತು ಅವಶ್ಯಕತೆಗಳ ಮೇಲೆ ನಿರ್ಭರವಾಗಿರುತ್ತದೆ.

ಆದರೆ ಸಂದರ್ಭ ಏನೇ ಇರಲಿ, ವ್ಯಕ್ತಿಯೂ ಯಾರೇ ಆಗಿರಲಿ, ಎಲ್ಲವನ್ನು ಸೇರಿಸಿ ಕೊಟ್ಟರೂ ಸಹ ನಾನು ಯಾವಾಗಲೂ ಮೊದಲು ಕೊಡುವುದು ಪ್ರಾಮಾಣಿಕತೆಯನ್ನೇ. ಏಕೆಂದರೆ ಅದೊಂದು ಇಲ್ಲದೆ ಹೋದರೆ ಯಾರೂ ಅರ್ಧ ಹೆಜ್ಜೆ ಕೂಡ ಮುಂದುವರಿಯಲು ಸಾಧ್ಯವಿಲ್ಲ. ಅಂತೆಯೇ ಅದು ಮೊದಲು, ಅದು ಯಾವಾಗಲೂ ಮೊದಲೇ.

ಅದನ್ನು ಇನ್ನೊಂದು ಶಬ್ದದಿಂದ ಮೂಲಕ ಕೂಡ ಅನುವಾದ ಮಾಡಬಹುದು. ಅದನ್ನು ಬೇಕಾದರೆ ಪಾರದರ್ಶಕತೆ ಎಂದೂ ಹೇಳಬಹುದು...

ಎರಡನೆಯದು, ಯೋಗದಲ್ಲಿ ಮುಂದುವರಿಯಬೇಕೆಂದರೆ ಅದು ಅನಿವಾರ್ಯವಾಗಿ ಬೇಕೇಬೇಕು. ನಂಬಿಕೆ ಇರಲೇಬೇಕು. ಅಥವಾ ಇನ್ನೊಂದು

ಶಬ್ದ... ಅದು ತುಸು ಸೀಮಿತ ಎನಿಸಬಹುದು ಆದರೆ ನನಗೆ ಮುಖ್ಯ ಎಂದು ತೋರುತ್ತದೆ, ಏಕೆಂದರೆ (ಇದು ಅನುಭವದ ಪ್ರಶ್ನೆ) ನಿಮ್ಮ ನಂಬಿಕೆಯು ಭಗವಂತನಲ್ಲಿ ಸಂಪೂರ್ಣ ವಿಶ್ವಾಸದಿಂದ ಕೂಡಿರದಿದ್ದರೆ, ನಿಮಗೆ ನಂಬಿಕೆ ಇದೆ ಎಂಬ ಭಾವನೆಯ ಮೇಲೆಯೇ ನೀವಿದ್ದರೂ ಸಹ ದೈವೀ ಶಕ್ತಿ, ದೈವೀ ಒಳ್ಳೆಯತನ ಅಥವಾ ಭಗವಂತನು ನಿಮ್ಮ ಮೇಲೆ ಇಟ್ಟಿರುವ ಭರವಸೆಗಳನ್ನು ನಿಧಾನವಾಗಿ ಕಳೆದುಕೊಳ್ಳುತ್ತ ಹೋಗಬಹುದು...

ಆದ್ದರಿಂದ, ನಂಬಿಕೆಯ ಜೊತೆ ದೈವೀ ಕೃಪೆಯ ಸಂಪೂರ್ಣ ವಿಶ್ವಾಸವನ್ನು ಬೆರೆಸಿದ ಹೋದರೆ ಕಠಿಣ ಪ್ರಸಂಗಗಳು ಎದುರಾಗಬಹುದು. ಆದ್ದರಿಂದ ಎರಡೂ ಅವಶ್ಯಕ...

ಇದೇ ಸರಣಿಯಲ್ಲಿ ಭಕ್ತಿಯನ್ನೂ ಸೇರಿಸಿದ್ದೇವೆ ತಾನೇ. ಹೌದು ಭಕ್ತಿ ಬೇಕೇಬೇಕು, ಆದರೆ ಅದರ ಜೊತೆ ಇನ್ನೂ ಕೆಲವು ಸಂಗತಿಗಳು ಇಲ್ಲದೆ ಹೋದರೆ, ಅದು ಕೂಡ ತಪ್ಪು ಮಾಡಬಹುದಾದ ಸಾಧ್ಯತೆ ಇದೆ. ಅಷ್ಟೇ ಏಕೆ, ಅತಿ ಹೆಚ್ಚಿನ ತೊಂದರೆಗಳಿಗೆ ಕಾರಣವಾಗಬಹುದು.

ನಿಮ್ಮಲ್ಲಿ ಭಕ್ತಿ ಇದೆ, ಸರಿ, ಅಹಂ ಕೂಡ ಹಾಗೆಯೇ ಇದೆ. ಆಗ ಅದು ನಿಮ್ಮ ಭಕ್ತಿಯ ಮೂಲಕವೇ ಅನೇಕ ಸಲ್ಲದ ಕೆಲಸ ಮಾಡಿರಬಹುದು, ಅಂಥ ಕೆಲವು ತುಂಬ ಅಹಂಕಾರಿಕವೂ ಆಗಿರಬಹುದು. ಹೇಗೆ ಹೇಳಬಹುದೆಂದರೆ, ನೀವು ಕೇವಲ ನಿಮ್ಮ ಬಗ್ಗೆ ಮಾತ್ರ ಯೋಚನೆ ಮಾಡುತ್ತೀರಿ, ಬೇರೆಯವರ ಬಗ್ಗೆ ಯೋಚಿಸುವುದಿಲ್ಲ. ಜಗತ್ತಿನ ಬಗ್ಗೆಯಾಗಲಿ, ಕೆಲಸದ ಬಗ್ಗೆಯಾಗಲಿ, ಏನು ಮಾಡಲೇಬೇಕಾಗಿದೆ ಎಂಬುದರ ಬಗ್ಗೆಯಾಗಲಿ ಯೋಜನೆ ಮಾಡುವುದೇ ಇಲ್ಲ. ನಿಮ್ಮ ಭಕ್ತಿಯನ್ನು ಕುರಿತೇ ಯೋಚಿಸುತ್ತೀರಿ...

ಭಕ್ತಿಯ ಜೊತೆ ನಿರಂತರವಾಗಿ ಇನ್ನೊಂದು ಸಂಚಲನವನ್ನು ಬೆರೆಸಲೇಬೇಕು... ಭಗವಂತ ಇದ್ದಾನೆ ಎಂಬ ಕೃತಜ್ಞತೆಯ ಭಾವನೆ. ಭಗವಂತ ಇದ್ದಾನೆ, ಭಗವಂತ ಎಂದು ಕರೆಯಲ್ಪಡುವ ಏನೋ ಒಂದು ಪರಾತ್ಪರ ವಸ್ತು ಇಲ್ಲಿದೆ, ನಾವು ಈ ಪ್ರಪಂಚದಲ್ಲಿ ಕಾಣುವುದು ಕೇವಲ ರಾಕ್ಷಸೀ ಪ್ರವೃತ್ತಿಯನ್ನು ಅಲ್ಲ, ಪರಮಾತ್ಮ ಇದ್ದಾನೆ, ಅವನು ನಮಗೆ ಕಾಣುತ್ತಾನೆ ಎಂಬ ಕೃತಾರ್ಥತೆಯ ಭಾವನೆಯೇ ಸಾಕು, ನಿಮ್ಮಲ್ಲಿ ಉದಾತ್ತವಾದ ಆನಂದವನ್ನು ಉತ್ಪಾದಿತ–ಗೊಳಿಸುವುದು. ಮತ್ತು ನಿಮ್ಮನ್ನು ಆ ಉದಾತ್ತವಾದ ಪರಮ ಅಸ್ತಿತ್ವದ ಸತ್ಯದ

ಜೊತೆ ಯಾವುದೇ ಸಣ್ಣಕ್ರಿಯೆ ಅಥವಾ ಸಂಗತಿ, ನೇರವಾಗಿಯೋ ಅಥವಾ ಅಪ್ರತ್ಯಕ್ಷವಾಗಿಯೋ ಸಂಬಂಧ ಕಲ್ಪಿಸಿಬಿಟ್ಟರೆ ಸಾಕು ನಿಮ್ಮ ಹೃದಯವು ಆನಂದದಿಂದ ತುಂಬಿ ಹೋಗುವುದು. ತೀವ್ರವಾದ ಉತ್ಕಟವಾದ ಅದ್ಭುತವಾದ ಹರ್ಷ ಅನುಭವ ಆಗುವುದು. ಆಗ ಎಂಥ ಕೃತಾರ್ಥತೆಯ ಭಾವ ತಂಬಿಕೊಳ್ಳುವುದೆಂದರೆ, ಎಲ್ಲ ಭಾವಕ್ಕಿಂತ ಈ ಕೃತಜ್ಞತೆಯೇ ಶ್ರೇಷ್ಠ ಎನಿಸುವುದು.

ಆದ್ದರಿಂದ ನಾನು ಕೃತಜ್ಞತೆಯ ಭಾವ ಇಲ್ಲದ ಭಕ್ತಿಯನ್ನು ಅಪೂರ್ಣ ಎಂದು ಕರೆಯುತ್ತೇನೆಂದು. ಭಕ್ತಿಯ ಜೊತೆ ಕೃತಜ್ಞತೆ ಇರಲೇಬೇಕು.

ನನಗೆ ನೆನಪಿಸುವಂತೆ, ಧೈರ್ಯವೂ ಕೂಡ ಪರಿಪೂರ್ಣತೆಗಳಲ್ಲಿ ಒಂದು ಎಂದು ಒಮ್ಮೆ ಮಾತನಾಡಿದ್ದೇವೆ. ಬಹುಶಃ ನಾವು ಆ ಪಟ್ಟಿಯಲ್ಲಿ ಅದನ್ನು ಸೇರಿಸಿಯೇ ಬರೆದಿರಬೇಕು. ಆದರೆ ಧೈರ್ಯ ಅಂದರೆ ಇಲ್ಲಿ ಪರಮ ಸಾಹಸ ಮಾಡುವ ಅಭಿಲಾಷೆ. ಇಂಥ ಸಾಹಸದ ಅಭಿಲಾಷೆ ಅಂದರೆ ಅಭೀಪ್ಸೆಯೇ ಸರಿ. ಇಂಥ ಅಭೀಪ್ಸೆಯು ನಿಮ್ಮನ್ನು ಬಲವಾಗಿ ಹಿಡಿದು ತನ್ನ ಕೈಯಲ್ಲಿ ತೆಗೆದುಕೊಂಡು ಬಿಡುತ್ತದೆ, ಯಾವ ಲೆಕ್ಕವೂ ಇಲ್ಲ, ಹಿಂಜರಿಕೆ ಇಲ್ಲ, ಹಿಂದೆ ಸರಿಯುವ ಸಂಭವ ಇಲ್ಲ, ನೇರವಾಗಿ ಪರಮಾತ್ಮನ ಶೋಧನೆಯ ಸಾಹಸಕ್ಕೆ, ಪರಮಾತ್ಮನನ್ನು ಸಂಧಿಸುವ ಸಾಹಸಕ್ಕೆ, ಎಲ್ಲಕ್ಕಿಂತ ಮಿಗಿಲಾಗಿ ಪರಮ ದೈವೀ ಸಾಕ್ಷಾತ್ಕಾರಕ್ಕೆ ನೀವು ತೊಡಗಿಬಿಡುತ್ತೀರಿ. ನೀವು ಒಂದು ಕ್ಷಣ ಹಿಂತಿರುಗಿ ಕೂಡ ನೋಡುವುದಿಲ್ಲ, ಏನಾಗಬಹುದು ಏನಾದೀತು ಎಂಬ ಚಿಂತೆಯೇ ಇರುವುದಿಲ್ಲ. ಏನಾಗಬಹುದು ಎಂದು ಆಲೋಚನೆ ಮಾಡುತ್ತೀರಾದರೆ ನೀವು ಆರಂಭ ಮಾಡುವುದೇ ಇಲ್ಲ, ಪ್ರಶ್ನೆಯ ಜಾಗದಲ್ಲಿಯೇ ಕುಳಿತುಬಿಡುತ್ತೀರಿ. ಏನಾದರೂ ಆದರೆ ಹೇಗೆ, ಏನಾದರೂ ಕಳೆದುಕೊಂಡರೆ ಹೇಗೆ ಎಂದು ಸಮತೋಲನ ಕಳೆದುಕೊಳ್ಳುವ ಭಯದಿಂದ ಅಲ್ಲಿಯೇ ಉಳಿದುಬಿಡುತ್ತೀರಿ.

ಅಂತೆಯೇ ನಾನು ಧೈರ್ಯವನ್ನು ಕುರಿತು ಹೇಳಿದೆ. – ಅದು ನಿಜವಾಗಿಯೂ ಅಭೀಪ್ಸೆಯೇ. ಎರಡೂ ಒಂದೇ. ನಿಜವಾದ ಅಭೀಪ್ಸೆ ಧೈರ್ಯದಿಂದ ಕೂಡಿರುತ್ತದೆ.

ಈಗ, ಶರಣಾಗತಿ. ಫ್ರೆಂಚ್ ಭಾಷೆಯಲ್ಲಿ ಇದಕ್ಕೆ ಸಮನಾದ ಪದ ಇಲ್ಲ. ಆದರೆ ಶ್ರೀ ಅರವಿಂದರು ಹೇಳಿದಂತೆ, – ಇದನ್ನು ಒಂದು ಸಲ ನಾವು ಓದಿದ್ದೇವೆ ಎಂದು ಕಾಣುತ್ತದೆ, – ಯೋಗ ಕೈಕೊಳ್ಳಬೇಕಾದರೆ ಸಮರ್ಪಣೆ ಅತ್ಯಂತ ಅನಿವಾರ್ಯವಾದ ಹಾಗೂ ಪ್ರಪ್ರಥಮವಾಗಿ ಬೇಕಾಗುವ ಗುಣ. ಅವರ

ಹೇಳಿರುವದನ್ನೇ ಅನುಸರಿಸಿ ಹೋದರೆ, ಸಮರ್ಪಣೆ ಎಂಬುದು ಕೇವಲ ಒಂದು ಅವಶ್ಯಕವಾದ ಗುಣ ಅಲ್ಲ, ಯೋಗವನ್ನು ಆರಂಭ ಮಾಡಬೇಕಾದರೆ ಈ ಮನೋವೃತ್ತಿ ಇದ್ದಿರಬೇಕು. ಸಂಪೂರ್ಣ ಸಮರ್ಪಣೆ ಮಾಡಬೇಕೆಂದು ಮೊದಲು ಗಟ್ಟಿ ನಿರ್ಧಾರ ಮಾಡದೇ ಹೋದರೆ ಯೋಗ ಆರಂಭಿಸಲು ಸಾಧ್ಯವೇ ಇಲ್ಲ.

ಇಂಥ ಸಂಪೂರ್ಣ ಶರಣಾಗತಿ ಸಾಧ್ಯವಾಗಬೇಕಾದರೆ ಉಳಿದೆಲ್ಲ ಗುಣಗಳು ಇರಲೇಬೇಕು. ನಾನು ಇನ್ನೊಂದನ್ನು ಸೇರಿಸುತ್ತೇನೆ, – ಇಲ್ಲಿಯವರೆಗೆ ನಾವು ನಾಲ್ಕನೆಯದರಲ್ಲಿಯೇ ಇದ್ದೇವೆ – ನಾನು ತಾಳ್ಮೆಯನ್ನು ಈ ಪಟ್ಟಿಯಲ್ಲಿ ಸೇರಿಸುತ್ತೇನೆ. ಯಾವುದೋ ಒಂದು ಕೆಲಸ ತುಂಬ ಕಠಿಣವಾಗಿದೆ ಎಂದು ಅರ್ಧದಲ್ಲಿಯೇ ಬಿಡದಿದ್ದರೂ, ನಿರಾಶೆ ಹೊಂದದೇ ತೊಂದರೆಗಳನ್ನು ಎದುರಿಸುವ ಸಾಮರ್ಥ್ಯ ನಿಮ್ಮಲ್ಲಿ ಇಲ್ಲದಿದ್ದರೆ, ತೊಂದರೆಗಳು ಬಂದರೂ ಕುಗ್ಗದೇ, ಏನೇ ಆಘಾತಗಳು ಸಂಭವಿಸಿದರೂ ಸಾವರಿಸಿಕೊಂಡು ಮುನ್ನುಗ್ಗುವ – ಅದೇನೋ ಹೇಳುತ್ತಾರಲ್ಲ, ಅವನ್ನೆಲ್ಲ ಜೇಬಿಗೆ ಇಳಿಸಿಕೊಂಡು ಯಾರಿಗೂ ಗೊತ್ತಾಗದಂತೆ ಕೈಕಟ್ಟಿ ಮುನ್ನಡೆ ಯುವ ಶಕ್ತಿ ನಿಮ್ಮಲ್ಲಿ ಇಲ್ಲದೇ ಹೋದರೆ ನೀವು ಬಹಳ ಮುಂದುವರಿಯಲಾರಿರಿ. ನಿಮಗೆ ಅಭ್ಯಸ್ಥವಾಗಿರುವ ಜೀವನವು ತುಸು ಅಸ್ತವ್ಯಸ್ತವಾಗಿ ಬಿಡುವುದೇನೋ ಎನಿಸಿದ ತಕ್ಷಣ, ಮೊದಲ ತಿರುವಿನಲ್ಲಿಯೇ ನೀವು ಅದನ್ನು ಬಿಟ್ಟು ಓಡಿಹೋಗಿ ಬಿಡುವಿರಿ.

ಇದರ ಅತ್ಯಂತ... ಶಬ್ದಗಳಲ್ಲಿ ಹೇಗೆ ಹೇಳುವುದು... ಲೌಕಿಕ ಅಥವಾ ಭೌತಿಕ ಸ್ವರೂಪ ಅಂದರೆ ತಾಳ್ಮೆ. ಅವಶ್ಯಕತೆ ಇದ್ದರೆ, ಸಾವಿರ ಸಲವಾದರೂ ಅಡ್ಡಿಯಿಲ್ಲ ಅದನ್ನೇ ಮಾಡುವ ಗಟ್ಟಿ ನಿರ್ಧಾರ ನಿಮ್ಮಲ್ಲಿ ಇರಬೇಕು...

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/36–41 – ಶ್ರೀಮಾತೆ**

## ಮಾನಸಿಕ ಪರಿಪೂರ್ಣತೆ

*ಕೇವಲ ಒಂದಲ್ಲ ಐದು ಮಾನಸಿಕ ಪರಿಪೂರ್ಣತೆಗಳಿವೆ. ಅವು, ಪ್ರಾಮಾಣಿಕತೆ, ನಂಬಿಕೆ, ಭಕ್ತಿ, ಅಭೀಪ್ಸೆ ಮತ್ತು ಶರಣಾಗತಿ.*

*(ಇದು ಶ್ರೀಮಾತೆಯು ಪುಷ್ಪಕ್ಕೆ ನೀಡಿರುವ ಅಧ್ಯಾತ್ಮಿಕ ಮಹತ್ವ ಹಾಗೂ ವಿವರಣೆಗಳು)*

*ಸಸ್ಯಶಾಸ್ತ್ರೀಯ ಹೆಸರು:* ಪ್ಲುಮೆರಿಯಾ ರುಬ್ರಾ

# ಪರೀಕ್ಷಕರು

*(ಸಮಗ್ರ ಯೋಗದಲ್ಲಿ ಸಹಾಯಕವಾಗುವ ಗುಣಗಳು)*

– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ

ಸಮಗ್ರ ಯೋಗವು ಯಾವುದೇ ಹಿಂದಿನ ಎಚ್ಚರಿಕೆಯಿಲ್ಲದೆ ಪರೀಕ್ಷೆಗೆ ಒಳಪಡುವಂತಹ ಪರೀಕ್ಷೆಗಳ ಸರಣಿಯನ್ನು ಒಳಗೊಂಡಿರುತ್ತದೆ, ಹೀಗಾಗಿ ನೀವು ನಿರಂತರವಾಗಿ ಸಿದ್ಧತೆಯಲ್ಲಿ ಮತ್ತು ಲಕ್ಷ್ಯದಿಂದ ಇರಲು ಸಹಾಯ ಮಾಡುತ್ತದೆ.

ಪರೀಕ್ಷಕರ ಮೂರು ಗುಂಪುಗಳು ಈ ಪರೀಕ್ಷೆಗಳನ್ನು ನಮಗಾಗಿ ಗೊತ್ತುಪಡಿಸಿದೆ. ಅವರುಗಳು ಪರಸ್ಪರ ಸಂಬಂಧ ಹೊಂದಿಲ್ಲವೆಂದು ತೋರುತ್ತದೆ, ಮತ್ತು ಅವರ ವಿಧಾನಗಳು ತುಂಬಾ ವಿಭಿನ್ನವಾಗಿವೆ, ಕೆಲವೊಮ್ಮೆ ಸ್ಪಷ್ಟವಾದ ವಿರೋಧಾಭಾಸವನ್ನು ಸಹ, ಅವರು ಒಂದೇ ಗುರಿಯ ಕಡೆಗೆ ಸಾಗುತ್ತಿಲ್ಲವೆಂದು ತೋರುತ್ತದೆ. ಅದೇನೆ ಇದ್ದರೂ ಅವು ಒಂದಕ್ಕೊಂದು ಪೂರಕವಾಗಿರುತ್ತವೆ, ಒಂದೇ ಉದ್ದೇಶದೆಡೆ ಕೆಲಸ ಮಾಡುತ್ತವೆ ಮತ್ತು ಫಲಿತಾಂಶದ ಪೂರ್ಣತೆಗಾಗಿ ಎಲ್ಲವೂ ಅನಿವಾರ್ಯ.

ಮೂರು ಬಗೆಯ ಪರೀಕ್ಷೆಗಳು ಹೀಗಿವೆ: ಪ್ರಕೃತಿಯ ಶಕ್ತಿಗಳಿಂದ ರಚಿಸಿದ ಪರೀಕ್ಷೆಗಳು, ಆಧ್ಯಾತ್ಮಿಕ ಹಾಗೂ ದಿವ್ಯ ಶಕ್ತಿಗಳಿಂದ ರಚಿಸಿದ ಪರೀಕ್ಷೆಗಳು, ಮತ್ತು ಅಹಿತ ಶಕ್ತಿಗಳಿಂದ ರಚಿಸಿದ ಪರೀಕ್ಷೆಗಳು. ಇವುಗಳಲ್ಲಿ ಕೊನೆಯವು ತಮ್ಮ ತೋರಿಕೆಯಲ್ಲಿ ಅತ್ಯಂತ ಮೋಸಗೊಳಿಸುವಂತವು ಮತ್ತು ಸಿಕ್ಕಿಹಾಕಿಕೊಳ್ಳುವುದನ್ನು ತಪ್ಪಿಸಿಕೊಳ್ಳಲು ಅರಿವಿಲ್ಲದವರು ಹಾಗೂ ಸಿದ್ದತೆಯಿಲ್ಲದವರು ನಿರಂತರವಾಗಿ ಕಾವಲು, ಪ್ರಾಮಾಣಿಕತೆ ಮತ್ತು ನಮ್ರತೆಯ ಸ್ಥಿತಿಯಲ್ಲಿರುವ ಅಗತ್ಯವಿರುತ್ತದೆ.

ಅತ್ಯಂತ ಸಾಮಾನ್ಯವಾದ ಸನ್ನಿವೇಶಗಳು, ದೈನಂದಿನ ಜೀವನದ ಘಟನೆಗಳು, ಅತ್ಯಂತ ಸ್ಪಷ್ಟವಾಗಿ ಅತ್ಯಲ್ಪ ಜನರು ಮತ್ತು ವಸ್ತುಗಳು ಈ ಮೂರು ರೀತಿಯ ಪರೀಕ್ಷರಲ್ಲಿ ಒಬ್ಬರಿಗೆ ಅಥವಾ ಇನ್ನೊಬ್ಬರಿಗೆ ಸೇರಿವೆ. ಪರೀಕ್ಷೆಗಳ ಈ ವಿಶಾಲ ಮತ್ತು ಸಂಕೀರ್ಣ ಸಂಘಟನೆಯಲ್ಲಿ, ಸಾಮಾನ್ಯವಾಗಿ ಜೀವನದಲ್ಲಿ ಅತ್ಯಂತ ಮುಖ್ಯವೆಂದು ಪರಿಗಣಿಸಲ್ಪಡುವ ಘಟನೆಗಳು ಪರೀಕ್ಷೆಗಳಿಗೆ ಒಳಗಾಗಲು ಸುಲಭವಾಗಿವೆ, ಏಕೆಂದರೆ, ಅವುಗಳು ನಿಮ್ಮನ್ನು ಸಿದ್ಧವೆಂದು ಕಂಡುಕೊಂಡಿವೆ

ಮತ್ತು ನಿಮ್ಮ ರಕ್ಷಣೆಯಲ್ಲಿವೆ. ನಿಮ್ಮ ಮಾರ್ಗದಲ್ಲಿರುವ ಸಣ್ಣ ಕಲ್ಲುಗಳ ಮೇಲೆ ಮುಗ್ಗರಿಸುವುದು ಸುಲಭ, ಏಕೆಂದರೆ ಅವು ಯಾವುದೇ ಗಮನವನ್ನು ಸೆಳೆಯುವುದಿಲ್ಲ.

ಭೌತಿಕ ಸ್ವರೂಪದ ಪರೀಕ್ಷೆಗಳಿಗೆ ವಿಶೇಷವಾಗಿಬೇಕಾದ ಗುಣಲಕ್ಷಣಗಳು – ಸಹಿಷ್ಣುತೆ, ನಮ್ರತೆ, ಉಲ್ಲಾಸ ಮತ್ತು ನಿರ್ಭಯತೆ.

ಆಧ್ಯಾತ್ಮಿಕ ಪರೀಕ್ಷೆಗೆ ಬೇಕಾದ ಗುಣಲಕ್ಷಣಗಳು – ಆಕಾಂಕ್ಷೆ, ಭರವಸೆ, ಆದರ್ಶ ಕಲ್ಪನೆ, ಉತ್ಸುಕತೆ ಮತ್ತು ಉದಾತ್ತ ಸ್ವ–ಕೊಡುಗೆ.

ಅಹಿತ ಶಕ್ತಿಗಳಿಂದ ಪರೀಕ್ಷೆಗಳಿಗಾಗಿ – ಜಾಗೃತಿ, ಪ್ರಾಮಾಣಿಕತೆ ಮತ್ತು ನಮ್ರತೆ ಅವಶ್ಯಕ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/42–43 – ಶ್ರೀಮಾತೆ**

ವೀರೋಚಿತನಾಗ ಬಯಸುವ ಮುಹೂರ್ತ

*ವೀರತ್ವವು ಜನರು ಹೇಳುವುದಲ್ಲ, ಅದು ಸಂಪೂರ್ಣವಾಗಿ ಒಗ್ಗೂಡಬೇಕು – ಮತ್ತು ಎಲ್ಲ ಪ್ರಾಮಾಣಿಕತೆಯಲ್ಲಿ ವೀರೋಚಿತನಾಗ ಬಯಸುವದ–ರೊಂದಿಗೆ ದಿವ್ಯ ಸಹಾಯವು ಯಾವಾಗಲೂ ಇರುತ್ತದೆ. ವೋಲಾ#*

*ನೀವು ಈಗ ಇಲ್ಲಿದ್ದೀರಿ, ನನ್ನ ಪ್ರಕಾರ ಭೂಮಿಯ ಮೇಲೆ, ಏಕೆಂದರೆ ನೀವು ಒಮ್ಮೆ ಇರಬೇಕೆಂದು ಬಯಸಿದ್ದೀರಿ – ನಿಮಗೆ ಅದು ನೆನಪಿಲ್ಲ, ನನಗೆ ತಿಳಿದಿದೆ, ಅದಕ್ಕಾಗಿಯೇ ನೀವು ಇಲ್ಲಿದ್ದೀರಿ. ಸರಿ, ನೀವು ಕಾರ್ಯಕ್ಕೆ ಸಿದ್ಧರಾಗಬೇಕು. ನೀವು ಪ್ರಯತ್ನವನ್ನು ಮಾಡಲೇಬೇಕು, ನೀವು ಕ್ಷುಲ್ಲಕತೆ ಮತ್ತು ಮಿತಿಗಳನ್ನು ಜಯಿಸಬೇಕು, ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅಹಂಕಾರಕ್ಕೆ ಹೇಳಿ: ನಿನ್ನ ಸಮಯ ಮುಗಿಯಿತು ಎಂದು. ನಮಗೆ ಅಹಂ ಇಲ್ಲದ ಜನಾಂಗ ಬೇಕಾಗಿದೆ, ಅದರ ಸ್ಥಾನದಲ್ಲಿ ದಿವ್ಯ ಪ್ರಜ್ಞೆಯೊಂದಿಗೆ ಅಹಮಿಕೆ ಇಲ್ಲದ ಜನಾಂಗ ನಮಗೆ ಬೇಕಾಗಿದೆ. ಅದನ್ನೇ ನಾವು ಬಯಸುತ್ತೇವೆ: ದಿವ್ಯ ಪ್ರಜ್ಞೆ, ವಿಕಸಿಸುವ ಜನಾಂಗ ಮತ್ತು ಅತಿಮಾನವನ ಹುಟ್ಟಿಗೆ ಸಾಧ್ಯವಾಗುವಂಥ ದಿವ್ಯ ಪ್ರಜ್ಞೆ.*

*ನಾನು ಬದ್ಧನಾಗಿದ್ದರಿಂದ ಇಲ್ಲಿದ್ದೇನೆ ಎಂದು ನೀವು ಭಾವಿಸಿದರೆ, ನೀವು ತಪ್ಪು. ನಾನು ಬದ್ಧನಾಗಿಲ್ಲ. ನಾನು ಇಲ್ಲಿ ಇದ್ದದ್ದು ಏಕೆಂದರೆ, ನನ್ನ ದೇಹವು ರೂಪಾಂತರದ ಮೊದಲ ಪ್ರಯತ್ನಕ್ಕಾಗಿ ತನ್ನನ್ನು ತಾನು ನೀಡಿದೆ. ಶ್ರೀ ಅರವಿಂದರು ನನಗೆ ಹೀಗೆ ಹೇಳಿದರು, "ನಿನ್ನನ್ನು ಹೊರತುಪಡಿಸಿ ಇದನ್ನು ಯಾರೂ ಮಾಡಲು ಸಾಧ್ಯವಿಲ್ಲವೆಂದು ನನಗೆ ತಿಳಿದಿದೆ" ಎಂದು ನನಗೆ ಹೇಳಿದರು.*

*ನಾನು ಹೇಳಿದೆ, "ಸರಿ, ನಾನು ಅದನ್ನು ಮಾಡುತ್ತೇನೆ". ಅದಲ್ಲ..... ನನ್ನ ಬದಲು ಬೇರೆ ಯಾರಾದರೂ ಅದನ್ನು ಮಾಡಬೇಕೆಂದು ನಾನು ಬಯಸುವುದಿಲ್ಲ, ಯಾಕೆಂದರೆ .......... ಯಾಕೆಂದರೆ ಅದು ಅಷ್ಟು ಆಹ್ಲಾದಕರವಾಗಿಲ್ಲ, ಆದರೆ ನಾನು ಅದನ್ನು ಖುಷಿಯಿಂದ ಮಾಡುತ್ತಿದ್ದೇನೆ, ಯಾಕೆಂದರೆ ಅದರ ಫಲಿತಾಂಶಗಳು ಎಲ್ಲರಿಗೂ ಲಾಭವನ್ನುಂಟು ಮಾಡುತ್ತವೆ ಅಷ್ಟೇ. ಅಹಂಕಾರದ ಕಾಲ ಮುಗಿಯಿತು. ನಾವು ಮಾನವತೆಯ ಮತ್ತು ಅದರ ಅಹಂಕಾರದ ಆಚೆ ಹೋಗ ಬಯಸುತ್ತೇವೆ, ಅದನ್ನು ಹಿಂದೆ ಬಿಟ್ಟು, ಅಹಂಕಾರರಹಿತ ಜನಾಂಗವನ್ನು ಬಯಸುತ್ತೇವೆ, ಅಹಂಕಾರದ ಸ್ಥಾನದಲ್ಲಿ ದಿವ್ಯಪ್ರಜ್ಞೆಯೊಂದಿಗೆ. ಅಲ್ಲಿ, ಅಷ್ಟೇ.*

*ಏನಾದರು ಹೇಳುವುದಿದೆಯೇ?*

*ನಿಮ್ಮ ಹೃದಯಗಳಲ್ಲಿ ಪ್ರಾಮಾಣಿಕವಾದ 'ಹೌದು' ಇದೆ ಎಂದಾದರೆ, ನೀವು ನನ್ನನ್ನು ಸಂಪೂರ್ಣವಾಗಿ ತೃಪ್ತಿಪಡಿಸಿದ್ದೀರಿ. ನಾನು ನಿಮ್ಮ ಹೃದಯದ ಪ್ರಾಮಾಣಿಕವಾದ ನಿಷ್ಠೆಯನ್ನು ಬೇಡುತ್ತೇನೆ.*

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಏಪ್ರೀಲ್ 2, 1972**

## ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್

### ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ<br>ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926<br>(Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |

## ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 30/11/2019 ಮತ್ತು 01/12/2019 ರಂದು ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ "ಬಿಂಬ–ಪ್ರತಿಬಿಂಬ" ಶೀರ್ಷಿಕೆಯಲ್ಲಿ ವಿಜ್ಞಾನ ಮತ್ತು ಭಾರತೀಯ ಸಂಸ್ಕೃತಿ ವಿಷಯಗಳ ಬಗ್ಗೆ ವಿದ್ಯಾರ್ಥಿಗಳು ತಯಾರಿಸಿದ ಮಾದರಿಗಳ ವಸ್ತು ಪ್ರದರ್ಶನ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಸ್ಥೆಯ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನಿಸ್ ನೆರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾರತೀಯ ಬಾಹ್ಯಾಕಾಶ ಸಂಸ್ಥೆಯ ನಿವೃತ್ತ ವಿಜ್ಞಾನಿ ಶ್ರೀ ಪ್ರಭಾಕರ ಕುಲಕರ್ಣಿ ಆಗಮಿಸಿದ್ದರು. ಶಿಕ್ಷಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ವಿವಿಧ ವಿಷಯಗಳ ಬಗ್ಗೆ ತಯಾರಿಸಿದ ಮಾದರಿಗಳನ್ನು ಪ್ರದರ್ಶಿಸಿದರು ಮತ್ತು ಅದರ ವಿವರಗಳನ್ನು ನೀಡುವ ಮೂಲಕ ಪ್ರಶಂಸೆಗೆ ಪಾತ್ರರಾದರು.

ದಿನಾಂಕ 5ನೇ ಡಿಸೆಂಬರ್ 2019 ಗುರುವಾರದಂದು "ಶ್ರೀ ಅರವಿಂದರ ಮಹಾಸಮಾಧಿ" ದಿನದ ಅಂಗವಾಗಿ ಶ್ರೀ ಎಸ್.ಎಸ್. ಲಹರಿ, ಧರ್ಮದರ್ಶಿ, ಶ್ರೀ ಅರವಿಂದೋ ಸಂಕೀರ್ಣ, ಬೆಂಗಳೂರು ಇವರಿಂದ ಸಾಯಂಕಾಲ 5.00 ರಿಂದ 6.30 ರವರೆಗೆ "ದಿ ಎಸೆನ್ಸಿಯಲ್ ಇನ್‌ಫಿನೈಟ್ ಒನ್‌ನೆಸ್–ಆ್ಯನ್ ಇಂಟೆಗ್ರಲ್ ವ್ಯೂ" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

7ನೇ ಡಿಸೆಂಬರ್ 2019 ಶನಿವಾರ ಡಾ॥ ಬಿ.ಸಿ. ನಾಗೇಂದ್ರ ಕುಮಾರ್, ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "ನೆಲ ಮುಟ್ಟುವ ಪ್ರೀತಿ" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

14ನೇ ಡಿಸೆಂಬರ್ 2019 ಶನಿವಾರ ಕ್ಯಾಪ್ಟನ್ ವಿ.ಎಸ್. ಶಿವರಾಜ್ ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "ಲೈಫ್ ಲೆಸನ್ಸ್" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

21ನೇ ಡಿಸೆಂಬರ್ 2019 ಶನಿವಾರ ಡಾ॥ ಟಿ. ರಾಮಕೃಷ್ಣ, ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "ದಿ ಹ್ಯುಮನಿಸ್ಟ್ ಫ್ರೇಮ್ ಆಫ್ ಮೈಂಡ್ – ಶ್ರೀ ಅರವಿಂದರು" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮಗಳಿಗೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.



ಅದರದೇ ಶಕ್ತಿ–ಚಿಂತನಕೆ ಇದುವು ಆದೇಶ ಸಹಜವಾಗ
ಲಘುತರದಿ ಉದಿತ ಅದರ ಅನುಮತಿಯ ಆ ಸಹಜ ವೇಗವೀಗ
ತನ್ನದೇ ಸುಪ್ತ–ತನ್ಮಯದ ತೃಪ್ತ–ಕೋಶಗಳ ಮಧ್ಯೆ ಶಕ್ತಿ
ಮೌನದಲಿ ಲೀನ ಅದುಮಿಟ್ಟುಕೊಂಡ ಚೈತನ್ಯಕೀಗ ಮುಕ್ತಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 5 ಪುಟ 85)**

**RNI No. 22511/1971**
No. of Pages **72 + 4 (Cov. Page)**
KAR Reg No.: RNP/KA/BGS/368/2018-2020
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2020
Licensed to Post at BG PSO, Mysore Road, Bengaluru - 560 026



ಪರಿಪಕ್ವ ಮೂರ್ತಿ ತಾನದುವು ಇದೋ ಪರಿಪೂರ್ಣ ಛಂದದಲ್ಲಿ

– ಪುಟ್ಟು ಕುಲಕರ್ಣಿ

(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 2 ಪುಟ 115)

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.